ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇಡಗುಂಜಿ ಮೇಳ

ಡಾ. ರಾಮಕೃಷ್ಣ ಜೋಶಿ



K 398.7921
JOS

ಗೌರವ ಪ್ರತಿ.

ಇಡಗುಂಜಿ ಮೇಳ

ಬಿ ಎಂ ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಡಾ. ರಾಮಕೃಷ್ಣ ಜೋಶಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಟಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಗ್ರಂಥ ಭಂಡಾರ
ಕ್ರಮ ಸಂಖ್ಯೆ 21326
ವರ್ಗ
ವರ್ಗ ಸಂಖ್ಯೆ
ಬಂದ ತಾ||
ಬೆಲೆ

IDAGUNJI MELA
Dr. Ramkrishna Joshi

Published by
The Director
Prasaranga
Kannada University, Hampi
Vidyaranya-583 276

Pp: ii + 36   Rs: 10-00
First Impression : 2000

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಪ್ರಕಾಶಕರು
ಪ್ರೊ. ಎ.ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

K398.7921
JOS

eg 8423

ಮುಖಪುಟ ವಿನ್ಯಾಸ
ಕೆ. ಕೆ. ಮಕಾಳಿ

ಬೆಲೆ ರೂ : ೧೦

ಅಕ್ಷರ ಸಂಯೋಜನೆ ಮತ್ತು ಮುದ್ರಣ
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಗದಗ ✆ : ೩೭೫೬೬, ೩೫೫೦೯

ಇಡಗುಂಜಿ ಮೇಳ

ಕರ್ನಾಟಕದ ಜನಪದ ರಂಗಪ್ರಕಾರಗಳಲ್ಲಿ ಹೆಚ್ಚು ವೈವಿಧ್ಯಮಯವೂ ವಿಶಿಷ್ಟವೂ ಆದ ಬಯಲಾಟವು ತನ್ನ ವಿಕಾಸದ ಪಥದಲ್ಲಿ ಆ ಕಾಲದ ಪರಿಸರ, ಒತ್ತಡ, ಅನಿವಾರ್ಯತೆಯಿಂದಾಗಿ ಭವನ, ಮಠ, ಮಂದಿರಗಳನ್ನು ಹೊಕ್ಕು ಶಿಷ್ಟ ಸಂಸ್ಕಾರಕ್ಕೊಳಗಾಗಿ, ಯಕ್ಷಗಾನವಾಗಿರಬೇಕು. ಹತ್ತನೆಯ ಶತಮಾನದ ಹೊತ್ತಿಗೆ ಸಂಸ್ಕೃತ ನಾಟಕಗಳ ಪ್ರದರ್ಶನ ಇಳಿಮುಖವಾಗುತ್ತಿದ್ದಂತೆ, ಶಿಷ್ಟ ಪ್ರೇಕ್ಷಕರು ಜನಪದ ರಂಗಭೂಮಿಯತ್ತ ಒಲವು ತೋರಿ, ಗೀತ, ವಾದ್ಯ, ನೃತ್ಯ, ಅಭಿನಯ, ವೇಷ-ಭೂಷಣ, ಮಾತುಗಾರಿಕೆಗಳನ್ನು ಸಂಸ್ಕರಿಸಿ, ಸೂತ್ರ ತೊಡಿಸಿ ಯಕ್ಷಗಾನವಾಗಿ ಮಾರ್ಪಡಿಸಿದಾಗ ಜನಪದರ ಕಲೆಯಾದ ಬಯಲಾಟವು ಹಾಗೆಯೇ ಉಳಿದು ಬಂದದ್ದನ್ನು ಮೂಡಲಪಾಯ ಮತ್ತು ಇತರ ರಂಗಪ್ರಕಾರಗಳಲ್ಲಿ ಕಾಣಬಹುದಾಗಿದೆ. ಆದರೆ ಅನಂತರದ ದಿನಗಳಲ್ಲಿ ಆಶ್ರಯ ನೀಡಿದ ಮಠ, ಮಂದಿರ, ಭವನಗಳು ಧಾಳಿಗೆ ತುತ್ತಾಗಿ, ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳತೊಡಗಿದಾಗ ಯಕ್ಷಗಾನವು ಮತ್ತೆ ಬಯಲಿಗೆ ಬಂದು ಅದರಲ್ಲಿ ಎರಡು ಪ್ರಮುಖ ಪ್ರಕಾರಗಳಾದವು. ಒಂದು ಬಯಲಿನಲ್ಲಾಡುವ ದೃಶ್ಯರೂಪ ಯಕ್ಷಗಾನ ಬಯಲಾಟವಾದರೆ; ಇನ್ನೊಂದು ವೇಷ-ಭೂಷಣ ನೃತ್ಯಾಂಗವನ್ನು ಕಳಚಿಕೊಂಡು ಬೈಠಕ್ಕಿನ ರೂಪುತಳೆದ ಕೂಟ ಅಥವಾ ತಾಳಮದ್ದಳೆ, ಜಾಗರ ಪ್ರಕಾರ. ಇದನ್ನೇ ವಿದ್ವಾಂಸರು ಪಡುವಲಪಾಯವೆಂದು ಕರೆದಿದ್ದಾರೆ. ದಕ್ಷಿಣೋತ್ತರ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಲ್ಲಲ್ಲಿ ಕಾಣಬರುವ ಈ ಸಂಪ್ರದಾಯವು ತೆಂಕು, ಬಡಗು, ಉತ್ತರಕನ್ನಡ ತಿಟ್ಟು ಗಳೆಂಬ ಮೂರು ಪ್ರಾದೇಶಿಕ ಭೇದಗಳಲ್ಲಿದ್ದು ತಾಳಮದ್ದಳೆಯು ಈ ಪ್ರಾದೇಶಿಕ ಭೇದ ದಿಂದ ದೂರವಾಗಿ ಬೆಳೆದಿದೆ.

ಇಂದು ನಾವು ನೋಡುತ್ತಿರುವ ಯಕ್ಷಗಾನವು ಉಗಮದಿಂದ ಇದೇ ರೀತಿ ಇತ್ತು, ಅಥವಾ ಕಾಲಕಾಲಕ್ಕೆ ಬದಲಾವಣೆ ಹೊಂದಿ ಇಂದಿನ ರೂಪ ಪಡೆಯಿತು, ಎಂದು ಸಾಧಾರವಾಗಿ ಹೇಳಲು ಸಾಧ್ಯವಿಲ್ಲ. ಈ ಸಮಷ್ಟಿ ಕಲೆಯಲ್ಲಿ ಮೇಳನಗೊಂಡ ಹಾಡುಗಾರಿಕೆ, ಕುಣಿತ, ಚಿತ್ರ, ತಂತ್ರ, ಮಾತುಗಾರಿಕೆಗಳೆಲ್ಲ ಮೂಲದಲ್ಲಿ ಸ್ವತಂತ್ರ ಪರಿಪೂರ್ಣ ಕಲಾಪ್ರಕಾರವಾಗಿದ್ದು, ಯಕ್ಷಗಾನದಲ್ಲಿ ಒಂದರೊಡನೊಂದು ಹಿತಮಿತ ವಾಗಿ, ಸುರುಚಿಗೆ, ಔಚಿತ್ಯಕ್ಕೆ ಕಿಂಚಿತ್ತೂ ಧಕ್ಕೆಯಾಗದಂತೆ, ಪ್ರದರ್ಶನದ ಒಟ್ಟಂದಕ್ಕೆ

ಅರ್ಪಿಸಿಕೊಂಡ ರೀತಿ, ಬೆಳೆದ ಪರಿಗೆ ನಿರ್ದಿಷ್ಟ ದಾಖಲೆಗಳಿಲ್ಲದಿದ್ದರೂ ಸಂಕೀರ್ಣ ಸ್ವರೂಪದ ಈ ಕಲೆಗೆ ಕರ್ನಾಟಕದ ಒಳಗೆ ಮತ್ತು ಸುತ್ತ-ಮುತ್ತ ಜನಪ್ರಿಯವಾಗಿದ್ದ ಕೆಲವು ಜನಪದ ಕಲಾಪ್ರಕಾರಗಳು ಹಲವು ತೆರನ ಸಾಮಗ್ರಿಗಳನ್ನು ಒದಗಿಸಿ ಪುಷ್ಟ ವಾಗಿಸಿವೆ ಎಂಬ ಅಂಶವನ್ನು ಯಾರೂ ಅಲ್ಲಗಳೆಯಲಾರರು. ಸಮಗ್ರ ಕರ್ನಾಟಕದ ದೇಶೀಯ ಕಲೆಯಾದ ಯಕ್ಷಗಾನವು ಇಂದು ಕೇವಲ ಎರಡು-ಮೂರು ಜಿಲ್ಲೆಗಳಿಗೆ ಸೀಮಿತವಾದ ಕಲೆಯಾಗಿ ಮಾತ್ರ ಉಳಿದು, ಅದು ಉತ್ತರಕನ್ನಡತಿಟ್ಟು, ಬಡಗುತಿಟ್ಟು ಮತ್ತು ತೆಂಕುತಿಟ್ಟು ಎಂಬ ಮೂರು ಪ್ರಾದೇಶಿಕ ಭೇದಗಳಲ್ಲಿ ಗುರುತಿಸಲ್ಪಡುತ್ತಿದೆ.

ಕೋಶಗಳ ಪ್ರಕಾರ 'ತಿಟ್ಟು' ಎಂದರೆ ತೆವರಿ, ದಿಣ್ಣೆ ಎಂದರ್ಥ. ಇಲ್ಲಿ ಅದೇ ಧ್ವನಿಯಲ್ಲಿ 'ಶೈಲಿ' ಎಂದರ್ಥ. 'ಲೋಕೋ ಭಿನ್ನ ರುಚಿಃ' ಎಂಬ ಸುಪ್ರಸಿದ್ಧವಾದ ಉಕ್ತಿಯೇ ಇದೆ. ಈ ಭಿನ್ನ ರುಚಿಯೇ ಪ್ರಾದೇಶಿಕ ಭಿನ್ನತೆಗೆ ನಾಂದಿ. ಭಾಷೆ, ಸಾಹಿತ್ಯ ಅಷ್ಟೇ ಅಲ್ಲ ; ಲೋಕ ಜೀವನದಲ್ಲೂ ಈ ಪ್ರಾದೇಶಿಕ ಭಿನ್ನತೆಯನ್ನು ಸುಲಭವಾಗಿ ಗುರುತಿಸಬಹುದು. ಒಂದು ಕಲಾ ಸಂಪ್ರದಾಯ ಭಿನ್ನರುಚಿಯ ಜನಜೀವನದೊಂದಿಗೆ ಹರಿದು ಬರುವಾಗ ಪ್ರಾದೇಶಿಕ ವಿಶಿಷ್ಟತೆಗಳನ್ನು ರೂಢಿಸಿಕೊಳ್ಳುವುದು ಸ್ವಾಭಾವಿಕ. ಆಗ ಪ್ರಾದೇಶಿಕ ಪರಿಸರ, ಪ್ರಭಾವಗಳಿಂದಾಗಿ, ಕೆಲವು ಕಸಿಕ್ರಮಗಳು, ಕಳಚಿಕೊಳ್ಳು ವಿಕೆಗಳು, ಅನಿವಾರ್ಯವಾಗುತ್ತವೆ. ಅಂತಹ ಸಮಯದಲ್ಲಿ ತೀರ ಸುಧಾರಣಾವಾದಿ ಗಳು ಮತ್ತು ಮಾರ್ಪಾಟು ಒಲ್ಲದವರಿಂದ ಈ ತಿಟ್ಟುಗಳು ಮೂಡಿ ಬರಲು ಅವಕಾಶ ವಾಗಿರಬಹುದು. ಸ್ವೋಪಜ್ಞವಾದ ಮತ್ತು ಪ್ರಾದೇಶಿಕತೆಯನ್ನು ಉಳಿಸಿಕೊಂಡು ಬರುವ ಕ್ರಿಯಾಶೀಲ ಕಲಾ ಮಾಧ್ಯಮಗಳಲ್ಲಿ ಇಂಥ ಅಳವಡಿಕೆ ಅನಿವಾರ್ಯವೂ ಆಗುತ್ತದೆ. ಸೃಜನಶೀಲ ಕಲೆಯಾದ ಯಕ್ಷಗಾನವು ಕಟ್ಟು-ಕಟ್ಟಳೆಗಳನ್ನು ಅನುಸರಿಸಿ ದರೂ ಇಲ್ಲಿ ಪಾತ್ರಧಾರಿಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಅವಕಾಶವಿದ್ದುದರಿಂದ, ಭಾಗವತರ ಪ್ರತಿಭೆಯ ಪ್ರದರ್ಶನಕ್ಕೆ ಅವಕಾಶಗಳು ತೆರೆದಿರುವುದರಿಂದ ಏಕತಾನ ವಾಗದೆ ವೈವಿಧ್ಯ ಹಾಗೂ ನಿತ್ಯನೂತನವಾಗುವ ಸಾಧ್ಯತೆಗಳನ್ನು ಪಡೆದುಕೊಂಡಿತು. ಈ ಹಿನ್ನೆಲೆಯಲ್ಲಿ ಯಕ್ಷಗಾನ ಪ್ರದರ್ಶನವು, ಕಾಲಕಾಲಕ್ಕೆ ಮುಮ್ಮೇಳ ಮತ್ತು ಹಿಮ್ಮೇಳಗಳಿಂದ ಭಿನ್ನಮಾರ್ಗ-ಭಿನ್ನರುಚಿ ಪ್ರೇರಕವಾಗಿ ಬೆಳೆದು ಬಂದಿದೆ. ಇಂತಹ ಒಂದು ಶೈಲಿಯು ಭಟ್ಕಳದಿಂದ ಕಾರವಾರದವರೆಗೆ ರೂಢಿಯಲ್ಲಿದ್ದು ಇದನ್ನು ಉತ್ತರ ಕನ್ನಡಶೈಲಿ ಅಥವಾ ಉತ್ತರಕನ್ನಡ ತಿಟ್ಟು ಎಂದು ಕರೆಯುತ್ತಾರೆ.

ಉತ್ತರಕನ್ನಡ ತಿಟ್ಟು

೧೯೫೬ಕ್ಕಿಂತ ಹಿಂದೆ ಬಡಗುತಿಟ್ಟಿನ ಭಾಗವಾದ ಕುಂದಾಪುರ ಮತ್ತು ಉತ್ತರಕನ್ನಡತಿಟ್ಟಿನ ಪ್ರದೇಶವಾದ ಹೊನ್ನಾವರ ಇವೆರಡೂ ಬೇರೆ ಬೇರೆ ರಾಜಕೀಯ ಮತ್ತು ಆಡಳಿತದ ಪ್ರದೇಶಕ್ಕೆ ಸೇರಿದ್ದು, ಸಾಧನ ಸಂಪರ್ಕಗಳ ವಿರಳತೆ, ಭೌಗೋಳಿಕ ಭಿನ್ನತೆ, ವಿಭಿನ್ನ ಜೀವನಕ್ರಮ, ಭಿನ್ನಭಾಷಾ ಪ್ರದೇಶ ಇವುಗಳಿಂಗಾಗಿ ಕಳೆದ ಶತಮಾನ ಗಳಲ್ಲಿ ತೆಂಕು-ಬಡಗು ತಿಟ್ಟುಗಳಷ್ಟು ಪ್ರದರ್ಶನ, ಪ್ರಸಾರಗಳ ಅವಕಾಶ ಸಿಗದೆ, ಈ

ತಿಟ್ಟು ಹಲವು ಅಂಗಗಳಲ್ಲಿ ತನ್ನದೇ ಆದ ವಿಶೇಷತೆಯಿಂದ ಕೂಡಿದ್ದರೂ ಇತ್ತೀಚಿನ ವರ್ಷಗಳವರೆಗೂ ಇದನ್ನು ಪ್ರತ್ಯೇಕ ಸಂಪ್ರದಾಯವೆಂದು ಗುರುತಿಸುತ್ತಿರಲಿಲ್ಲ. ವಿಶೇಷತಃ ಶರಾವತಿಯ ಇಕ್ಕೆಲಗಳಲ್ಲಿ ರೂಢಿಯಲ್ಲಿರುವ ಈ ತಿಟ್ಟನ್ನು ಬಡಬಡಗುತಿಟ್ಟು ಎಂದು ಕರೆಯುತ್ತಿದ್ದುದೂ ಉಂಟು. ಕುಣಿತದ ಅಭಿವ್ಯಕ್ತಿ, ಸೂಕ್ಷ್ಮ ಅಭಿನಯ, ಅಭಿನಯ ಭೂಯಿಷ್ಠತೆ, ಮುದ್ರೆಗಳ ಬಳಕೆ, ಹಿಮ್ಮೇಳದ ಬಳಕೆ, ವೇಷ ಭೂಷಣಗಳು, ರಂಗತಂತ್ರ–ಇವುಗಳಿಂದಾಗಿ ಯಕ್ಷಗಾನ ಕಲಾಸಂಪ್ರದಾಯದಲ್ಲಿ ಉತ್ತರಕನ್ನಡತಿಟ್ಟು ತನ್ನದೇ ಆದ ವಿಶೇಷತೆಯನ್ನು ಉಳಿಸಿಕೊಂಡು ಬಂದಿದೆ.

ಯಕ್ಷಗಾನದ ಮೂರೂ ತಿಟ್ಟುಗಳನ್ನು ಗಮನಿಸಿದಾಗ ಉತ್ತರಕನ್ನಡತಿಟ್ಟು ಪರಿಷ್ಕಾರಗೊಂಡು ಮೂಲದಿಂದ ಬಹುದೂರ ಸಾಗುತ್ತ ಹೆಚ್ಚು ಸೃಜನಶೀಲವಾಗಿದೆ ಎನಿಸುತ್ತದೆ. ಅಭಿನಯ ಪ್ರೌಢಿಮೆ, ಪ್ರಯೋಗ ಸೂಕ್ಷ್ಮತೆ, ವಿಲಂಬಿತಲಯ, ವೈವಿಧ್ಯಮಯ ಮುದ್ರೆಗಳ ಬಳಕೆ ಈ ತಿಟ್ಟಿನ ಜೀವಾಳ. ಸಭಾಹಿತ ಮಟ್ಟು ಎಂದು ಪ್ರಸಿದ್ಧವಾದ 'ಸಭಾಹಿತ ಪ್ರತಿ'ಯ ಪ್ರಸಂಗಗಳು ಈ ಶೈಲಿಗೆ ಅನುಕೂಲ. ಮುಮ್ಮೇಳವನ್ನು ಕುಣಿಸುವ, ಅಭಿನಯಿಸುವಂತೆ ಮಾಡುವ ಸಶಕ್ತ ವಿಶಿಷ್ಟಗುಣ ಇಲ್ಲಿನ ಹಿಮ್ಮೇಳಕ್ಕಿದೆ. ತಾಳಧಾರಿಯಾದ ಭಾಗವತ, ಮದ್ದಳೆಯ ಮೃದುಮಧುರ ವಾದನ, ಶ್ರುತಿಬದ್ಧ ಚಂಡೆಯ ಹದವರಿತ ನುಡಿತದೊಂದಿಗೆ ಶಿಷ್ಟಸಂಗೀತ ಪ್ರಭಾವಿತ ಯಕ್ಷಗಾನದ ಧಾಟಿಯಲ್ಲಿ ಹಾಡಿ, ಇಡೀ ರಂಗಸ್ಥಳ ಮತ್ತು ಪ್ರೇಕ್ಷಾಗೃಹದಲ್ಲಿ ನಿರ್ಮಾಣ ಮಾಡುವ ನಾದಪ್ರಪಂಚ ಮಾತಿಗೆ ನಿಲುಕದ್ದು.

ಹಿಂದೆ ಶ್ರುತಿಗಾಗಿ ಸೋರೆಬುರುಡೆಯನ್ನು ಬಳಸಿ, ಒಂದೇ ಶ್ರುತಿಯಲ್ಲಿ ಇಡೀ ರಾತ್ರಿ ಹಾಡುವ ಪದ್ಧತಿ ಇತ್ತು, ಇಂದು ಶ್ರುತಿ ಬದಲಾಯಿಸಲು ಅನುಕೂಲವಾಗುವುದೆಂದು ಹಾರ್ಮೋನಿಯಂ ಬಳಸಲಾಗುತ್ತಿದೆ. ಇಲ್ಲಿನ ಮದ್ದಳೆಯ ಗಾತ್ರ ಸ್ವಲ್ಪ ದೊಡ್ಡದು. ನೋಡಲು ಬಡಗಿನಂತೆ ಕಂಡರೂ ನುಡಿತದಲ್ಲಿ, ಮುಕ್ತಾಯದ ಬಿಡ್ತಿಗೆಗಳಲ್ಲಿರುವ ವ್ಯತ್ಯಾಸವನ್ನು ನಾದದಿಂದಲೇ ಗುರುತಿಸಬಹುದಾಗಿದೆ. ಇಳಿಮದ್ದಳೆಯ ರೂಢಿಯಿದ್ದರೂ ರಾತ್ರಿ ಕಳೆದಂತೆ ರಂಗಕ್ಕೆ ರಂಗೇರಲು ಶ್ರುತಿ ಏರಿಸುವ ಪದ್ಧತಿ ಇದೆ. ಹಿಂದೆ ಹಿಮ್ಮೇಳದಲ್ಲಿ 'ತಾಸುಮಾರು' ಎಂಬ ವಿಶಿಷ್ಟ ವಾದನವನ್ನು ಬಾರಿಸುತ್ತಿದ್ದು, ಇಂದು ಅದರ ಸ್ಥಾನದಲ್ಲಿ ಎರಡು ಬೆತ್ತದ ಕೋಲುಗಳಿಂದ ನುಡಿಸುವ ಸುಮಾರು ೧೪ ಅಂಗುಲ ಉದ್ದದ ಕಳಸಿಗೆಯ ಚಂಡೆ ರೂಢಿಯಲ್ಲಿದೆ. ಒಟ್ಟಿನಲ್ಲಿ ವಾದ್ಯಗಳ ಗದ್ದಲ ಕಡಿಮೆ.

ಹಿಮ್ಮೇಳದಂತೆ ಮುಮ್ಮೇಳದಲ್ಲೂ ಈ ತಿಟ್ಟು ತನ್ನದೇ ಆದ ಕೆಲವು ವಿಶೇಷತೆಯನ್ನು ರೂಢಿಸಿಕೊಂಡಿದೆ. ಸ್ತ್ರೀ, ರಾಜ, ರಕ್ಕಸ, ವಾನರ ಮುಂತಾದ ಪಾತ್ರಗಳ ತೆರೆಪ್ರವೇಶ ಮತ್ತು ನಿರ್ಗಮನ ಕುಣಿತಗಳು, ಒಡ್ಡೋಲಗಗಳಲ್ಲಿ ಈ ವಿಶೇಷತೆಯನ್ನು ಕಾಣಬಹುದಾಗಿದೆ. ನಿರ್ಭಾವ ಕುಣಿತ ಈ ತಿಟ್ಟಿನಲ್ಲಿ ಕಡಿಮೆ. ಹಸ್ತಾಭಿನಯ, ಹಸ್ತಸಂಜ್ಞೆ, ಕಣ್ಣು ಹುಬ್ಬುಗಳ ಚಲನೆ, ವೈವಿಧ್ಯಮಯವಾದ ಚೇತೋಹಾರಿ ಪದಗತಿ, ನಿಲುವು, ಆಕೃತಿಬದ್ಧ ಚಲನೆ, ಲಯವಿನ್ಯಾಸ, ಕುಣಿತದಭಂಗಿ ಈ ತಿಟ್ಟಿನ ಜೀವಾಳ.

ನೃತ್ಯದ ಮೂಲಭೂತ ಹೆಜ್ಜೆಗಳಿಗನುಸಾರವಾಗಿ ಅಭಿನಯಕ್ಕೆ ತಕ್ಕಂತೆ ಹೊಸ ಹೊಸ ಹೆಜ್ಜೆಗಳನ್ನು ಸೃಷ್ಟಿಸಿಕೊಳ್ಳುವ ಅವಕಾಶ, ಸ್ವಾತಂತ್ರ್ಯ ಇಲ್ಲಿದೆ.

ಸಾವಿರ ಮಾತುಗಳಿಗಿಂತ ಒಂದು ಭಾವಾಭಿನಯ ತುಂಬ ಪರಿಣಾಮಕಾರಿ. ಉತ್ತರಕನ್ನಡ ತಿಟ್ಟಿನಲ್ಲಿ ಸಾಂಪ್ರದಾಯಿಕವಾಗಿ ಪದ್ಯದ ಪೂರ್ವಾರ್ಧವು ಅಭಿನಯಕ್ಕೆ ಮೀಸಲಾಗಿದ್ದು, ಉತ್ತರಾರ್ಧವು ಕುಣಿತಕ್ಕೆ ಸಂಬಂಧಿಸಿರುತ್ತದೆ. ಪದ್ಯದ ಎತ್ತುಗಡೆ ಮತ್ತು ನಿಲುಗಡೆ ಮುಖ್ಯವಾದುದು. ಕಥೆಯ ನಡೆಗೆ ಹೊಂದಿ ಪಾತ್ರ ನಿರ್ವಹಿಸ ಬೇಕಾದಾಗ ಕೇವಲ ಕುಣಿತದಿಂದ, ಮಿತವಾದ ನೃತ್ಯದ ಹೆಜ್ಜೆಗಳಿಂದ ಪೂರ್ಣಾಭಿವ್ಯಕ್ತಿ ಸಾಧ್ಯವಾಗದು. ಆದರಿಂದ ಇಲ್ಲಿನ ಸೃಜನಶೀಲ ಕಲಾವಿದರು ಭಾವಾನುಕರಣೆಗಾಗಿ ಪಾತ್ರೋಚಿತ ಪದ್ಯಾಭಿನಯವನ್ನು ಬಳಕೆಗೆ ತಂದರು. ಅಭಿನಯವೆಂಬುದು ಇಲ್ಲಿ ಗೀಳಲ್ಲ. ಪಾತ್ರದ ಔಚಿತ್ಯವರಿತು ಯಕ್ಷಗಾನದ ಚೌಕಟ್ಟಿಗೆ ಕಲಾತ್ಮಕವಾಗಿ ಹೊಂದುವ ಭಾವಾಭಿವ್ಯಕ್ತಿಯು, ಅಭಿನಯದ ಉದ್ದೇಶ. ಭಾವಸ್ಪಷ್ಟತೆ, ಭಾವಸ್ಪರ್ಶ, ತನ್ಮೂಲಕ ರಸಲೋಕ ವಿಹಾರಿಗಳನ್ನಾಗಿ ಮಾಡಿ ಪ್ರಸಂಗೋದ್ದೇಶ ಸಾಧಿಸುವ ಕಲಾತಂತ್ರವು ಇಲ್ಲಿಯಷ್ಟು ಮೇಲ್ಮಟ್ಟದಲ್ಲಿ ಉಳಿದೆರಡು ತಿಟ್ಟಿನಲ್ಲಿ ಕಾಣಬರುತ್ತಿಲ್ಲ.

ಹಸಿರುಕೆಂಪಂಗಿಗಳು, ಚೌಕಳಿಬಟ್ಟೆಗಳು ರೂಢಿಯಲ್ಲಿವೆ. ಹೆಗಲಿಗೆ ಧರಿಸಿದ ವಲ್ಲಿ ಯನ್ನು ಹಿಂದೊಯ್ದು ಕಟ್ಟುವ ಪದ್ಧತಿ, ವೀರಗಾಸೆಗೆ ಚೌಕಳಿಬಟ್ಟೆ ಉಪಯೋಗಿಸುವ ರೂಢಿ ಇಲ್ಲಿಲ್ಲ, ಬದಲಿಗೆ ಸಾದಾ ಬಟ್ಟೆಯನ್ನು ಉಪಯೋಗಿಸುತ್ತಾರೆ. ಸಾಂಪ್ರದಾಯಿಕ ವೃತ್ತಾಕಾರದ ಎದೆಹಾರ, ಶಿರೋಭೂಷಣಗಳು, ಔಚಿತ್ಯ ಪೂರ್ಣವಾಗಿ ಬಳಕೆಯಲ್ಲಿವೆ. ಮುಖಾಭಿನಯ ಬಳಕೆಯಲ್ಲಿರುವುದರಿಂದ ದೊಡ್ಡ ಮುಂಡಾಸನ್ನು ಇಲ್ಲಿ ಬಳಸುವದಿಲ್ಲ. ಮುಂಡಾಸಕ್ಕೆ ಕೇದಗೆ ಬಳಸುವ ಪದ್ಧತಿಯೂ ಇಲ್ಲ. ಭುಜಕೀರ್ತಿಯು ಕೆತ್ತನೆ ಮತ್ತು ಹರಳುಗಳಿಂದ ಅಲಂಕೃತವಾಗಿರುತ್ತದೆ. ಚವರಿಯಿಂದ ತಯಾರಾದ ಮೀಸೆ ಕಿವಿಯತ್ತ ಹೋದಂತೆ ಮೊನಚಾಗಿರುತ್ತದೆ. ಕೃಷ್ಣನಿಗೆ ನೆರಿಗೆಹಾಕಿ ಸೀರೆ ಉಡಿಸದೆ ಧೀರ ಲಲಿತ ನೃತ್ಯಗಳಿಗೆ ಅನುಕೂಲವಾಗುವಂತೆ, ಶೃಂಗಾರ–ಲಾಸ್ಯಭಾವಗಳ ಅಭಿನಯಕ್ಕನುಗುಣ ವಾಗಿ ವೀರಕಸೆ ಹಾಕುವ ರೂಢಿಯಿದೆ.

ಉತ್ತರಕನ್ನಡತಿಟ್ಟಿನ ಪರಂಪರೆ

ಪ್ರಸಂಗ, ವೇಷಭೂಷಣ, ಬಣ್ಣಗಾರಿಕೆ, ನೃತ್ಯಾಭಿನಯ, ಮುದ್ರೆಗಳಬಳಕೆ, ಹಿಮ್ಮೇಳಗಳ ವಿಶೇಷತೆಯಿಂದಾಗಿ ಪಡುವಲಪಾಯ ಯಕ್ಷಗಾನದಲ್ಲಿ ಉತ್ತರಕನ್ನಡ ತಿಟ್ಟು ತನ್ನದೇ ಆದ ಪರಂಪರೆ ಮತ್ತು ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಈ ತಿಟ್ಟಿನ ಸಮೃದ್ಧ ಹಾಗೂ ವಿಶಿಷ್ಟ ಪರಂಪರೆಯನ್ನು ಪ್ರಸಂಗಸಾಹಿತ್ಯ ಮತ್ತು ಪ್ರಯೋಗದ ಮುಖಾಂತರ ಗುರುತಿಸಬಹುದಾಗಿದೆ. ಯಕ್ಷಗಾನ ತಾಡವಾಲೆಗಳನ್ನು ಪ್ರಪ್ರಥಮ ವಾಗಿ ಸಂಗ್ರಹಿಸಿ ಅವುಗಳನ್ನು ಗ್ರಂಥಸಂಪಾದನೆಯ ದೃಷ್ಟಿಯಿಂದ ಅಧ್ಯಯನ ಮಾಡಿದ ಡಾ.ಕಾರಂತರು 'ಕರ್ನಾಟಕದ ಮಲೆನಾಡಿನ ಪ್ರದೇಶದಲ್ಲಿಯೇ ಪರಮಾವಧಿಯ ತಾಡವಾಲೆಗಳು ನಮಗೆ ಸಿಗುವವು' ಎಂದು ಅಭಿಪ್ರಾಯಪಟ್ಟಿದ್ದನ್ನು

ಕಂಡಾಗ, ಹಿಂದೆ, ಇಂದೂ ಕೂಡ ಯಕ್ಷಗಾನದ ತವರು ಮಲೆನಾಡು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ೧೭೦೦ಕ್ಕಿಂತ ಹಿಂದಿನವನೆಂದು ಡಾ.ಕಾರಂತರು ನಿರ್ಣಯಿಸಿರುವ ನಗಿರೆಯ ಸುಬ್ಬ, ಈ ತಿಟ್ಟಿನ ಮೊದಲ ಯಕ್ಷಗಾನ ಕವಿ. ಯಕ್ಷಗಾನದ ಮೊದಲ ಲಕ್ಷಣಗ್ರಂಥ ''ಸಭಾಲಕ್ಷಣ''ದ ಒಂದು ಹಸ್ತಪ್ರತಿ ಹೊನ್ನಾವರಕ್ಕೆ ಸೇರಿದ್ದು. ಹಳೇಮಕ್ಕಿ ರಾಮ, ಪರಮೇಶ್ವರ ಭಟ್ಟ, ವೆಂಕಯ್ಯನ ಮಗ ಸುಬ್ಬ, ಭೀಮ, ವಿಷ್ಣು ಸಭಾಹಿತ, ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿಗಳು, ಎಣ್ಣೆಮಡಿ ವೆಂಕಟರಮಣಯ್ಯ, ಗೇರಸೊಪ್ಪೆ ಶಾಂತಪ್ಪಯ್ಯ ಸೊಂದಾದ ಕೃಷ್ಣ ಭಂಡಾರಿ, ರಾ.ಭ.ಹಾಸಣಗಿ, ರಾಮಕೃಷ್ಣ ಶಂಭು ಭಟ್ಟ, ಬಳಸಲಿಗೆ ಗಣಪತಿ ಹೆಗಡೆ, ಜಾನಕೈ ತಿಮ್ಮಪ್ಪ ಹೆಗಡೆ, ಹೊಸ್ತೋಟದ ಮಂಜುನಾಥ ಭಾಗವತ, ತಿಮ್ಮಣ್ಣ ನಾಯಕ, ಆರ್. ಜಿ. ಗುಂದಿ, ಅಗ್ಗರಗೋಣ ರಾಮ ನಾಯಕ, ಸೂರ್ವೆ ಹಮ್ಮಣ್ಣ ನಾಯಕ, ಮೂರೂರು ದೇವರು ಹೆಗಡೆ, ಕಡತೋಕಾ ಮಂಜುನಾಥ ಭಾಗವತ, ನಾನಾ ಜೋಶಿ ಸೋಂದಾ, ಗಂಗಾಜಿ ಹುಲೇಕಲ್, ಎಂ. ಎ. ಹೆಗಡೆ ಮುಂತಾದವರು ಈ ತಿಟ್ಟಿನ ಕೆಲವು ಪ್ರಮುಖ ಪ್ರಸಂಗ ಕರ್ತೃಗಳು, ಸೂತ್ರಕಾರರು, ವಿಮರ್ಶಕರು. ಮುಖ್ಯಪ್ರಾಣನ ಸನ್ನಿಧಿಯಲ್ಲಿ ನಿರಂತರವಾಗಿ ಪ್ರತಿದಿನವೂ ಯಕ್ಷಗಾನದ ಸೇವೆಯನ್ನು ನಡೆಸಿಕೊಂಡು ಬರುತ್ತಿರುವ, ಒಂದು ರೀತಿಯಲ್ಲಿ ಯಕ್ಷಗಾನದ ಮುಕ್ತ ವಿಶ್ವವಿದ್ಯಾನಿಲಯವೇ ಆದ ಗುಂಡಬಾಳಾ, ಇಲ್ಲಿನ ಮೇಳಗಳಿಗೆ ಸ್ಫೂರ್ತಿ ಸ್ವರೂಪ ದೈವವಾದ ಇಡಗುಂಜಿ ಗಣಪತಿ, ೧೭೯೯ ರಲ್ಲಿ ಕರ್ನಲ್ ಮೆಕೆಂಜಿಯವರು ಉತ್ತರಕನ್ನಡದಲ್ಲಿ ಸಂಗ್ರಹಿಸಿದ ''ಶಿರ್ಶಿ ಕೈಫಿಯತ್ತು'', ೧೮೮೨ ರಲ್ಲಿ ಕರ್ಕಿಯ ಮೇಳ ಸಾಂಗ್ಲಿಗೆ ಭೇಟಿ ನೀಡಿದ್ದು, ನೂರಾರು ಕಲಾವಿದರ ಮನೆತನಗಳು, ಈ ಭಾಗದ ಯಕ್ಷಗಾನದ ಬಯಲಾಟದ ಪರಂಪರೆಗೆ ಜ್ವಲಂತ ಸಾಕ್ಷಿಗಳು.

ಇಂಥ ಉಜ್ವಲ ಪರಂಪರೆಯಲ್ಲಿ ಹುಟ್ಟಿ, ಬೆಳೆದು, ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಇಡಗುಂಜಿ ಮೇಳದ ಹಿರಿಮೆ–ಗರಿಮೆಗಳನ್ನು ತಿಳಿಯಲು ಮೇಳ ನಡೆದುಬಂದ ದಾರಿಯನ್ನು ನೋಡೋಣ.

ಮೇಳ ನಡೆದುಬಂದ ದಾರಿ

ಇಡಗುಂಜಿ ಮೇಳ ಪ್ರಾರಂಭವಾದದ್ದು ೧೯೩೪ರ ಮಾರ್ಚ್ ತಿಂಗಳಲ್ಲಿ, ಇದರ ಸಂಸ್ಥಾಪಕರು ಕೆರೆಮನೆ ಶಿವರಾಮ ಹೆಗಡೆಯವರು. ಮೊದಲು ಅವರು 'ಹೆಗಡೆ' ಮೇಳದಲ್ಲಿ ವೇಷ ಹಾಕುತ್ತಿದ್ದರು. ಆ ಮೇಳವು ಕಾರಣಾಂತರದಿಂದ ನಿಂತುಹೋದಾಗ ಬಯಲಾಟದ ಹುಚ್ಚಿರುವ ಶಿವರಾಮ ಹೆಗಡೆಯವರಿಗೆ ಆಟಕ್ಕೆ ಅವಕಾಶವಿಲ್ಲದಂತಾದುದರಿಂದ 'ನಾವೇ ಕೆಲವರು ಸೇರಿ ಯಾಕೆ ಒಂದು ಮೇಳ ಕಟ್ಟಬಾರದು ?' ಎಂಬ ಆಲೋಚನೆ ಬಂದಿತು. ಸ್ನೇಹಿತರಾದ ವೆಂಕಟರಮಣ ಯಾಜಿ ಭಾಗವತರು, ಜಟ್ಟಿಯ್ಯ, ಕನ್ನಯ್ಯ ಭಂಡಾರಿ, ಗೋಳಿಮಠದ ಶ್ರೀಧರ ಭಟ್ಟ, ಮಾಳ್ಕೋಡು ಗಣಪ ಹೆಗಡೆ ಮುಂತಾದವರ ಸಹಕಾರದೊಂದಿಗೆ ಇಡಗುಂಜಿ ಮೇಳವು ಅಸ್ತಿತ್ವಕ್ಕೆ ಬಂದಿತು.

ಆ ಕಾಲದಲ್ಲಿದ್ದ ಪ್ರಾದೇಶಿಕ ಸಂಪ್ರದಾಯಕ್ಕನುಗುಣವಾಗಿ ಈ ಮೇಳಕ್ಕೆ 'ಶ್ರೀ ಇಡಗುಂಜಿ ಮಹಾಗಣಪತಿ ಪ್ರಾಸಾದಿಕ ಯಕ್ಷಗಾನ ಮಂಡಳಿ–ಕೆರೆಮನೆ' ಎಂದು ಹೆಸರಿಡಲಾಯಿತು. ಕೆರೆಮನೆ ಶಿವರಾಮ ಹೆಗಡೆಯವರು ಈ ಮೇಳದ ಪ್ರಧಾನ ಕಲಾವಿದರಾದುದರಿಂದ ಇದಕ್ಕೆ 'ಕೆರೆಮನೆ ಮೇಳ' ಎಂಬ ಉಪ ಹೆಸರು ರೂಢಿಗೆ ಬಂತು.

ಮೇಳವು ಪ್ರಾರಂಭವಾದ ವರ್ಷದಲ್ಲಿ ಒಟ್ಟು ಹದಿನೈದು ಜನರಿದ್ದರು. ಅಂದಿನ ವಾತಾವರಣದಲ್ಲಿ ಮೇಳಕ್ಕೆ ಯಾವುದೇ ರೀತಿಯ ಬಂಡವಾಳವೂ ಬೇಕಾಗಿರಲಿಲ್ಲ. ಕಲಾವಿದರೇ ಬಂಡವಾಳ. ಆಗ ಆಡುತ್ತಿದ್ದ ಪ್ರಸಂಗಗಳು: ರಾಮಾಶ್ವಮೇಧ, ಕರ್ಣ ಪರ್ವ, ಕೃಷ್ಣಸಂಧಾನ, ಭೀಷ್ಮವಿಜಯ, ಭೀಷ್ಮಪರ್ವ ಮುಂತಾದವು. ಸಾಮಾನ್ಯವಾಗಿ ೧೫ ರಿಂದ ೨೦ ಆಟಗಳವರೆಗೆ ವೀಳ್ಯ ಸಿಗುತ್ತಿತ್ತು. ೧೯೩೮ರಲ್ಲಿ ಮೊದಲಬಾರಿಗೆ ಈ ಮೇಳವು ಜಿಲ್ಲೆಯ ಗಡಿದಾಟಿ ಬೆಳಗಾವಿಯಲ್ಲಿ ಒಂದು ಪ್ರದರ್ಶನ ನೀಡುವುದ ರೊಂದಿಗೆ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿತು. ದಕ್ಷಿಣಕನ್ನಡ ಜಿಲ್ಲೆಯ ಮೇಳಗಳ ಸಾಂಸ್ಥಿಕ ಚಟುವಟಿಕೆ, ಪ್ರವಾಸವಿಧಾನ ಇವೆಲ್ಲ ಶಿವರಾಮ ಹೆಗಡೆಯವರ ಮೇಲೂ ಪ್ರಭಾವ ಬೀರಿದ್ದರಿಂದ ಅವರು ತಮ್ಮ ಮೇಳದಲ್ಲಿಯೂ ಸುಧಾರಣೆ ಮಾಡಲು ನಿಶ್ಚಯಿಸಿ, ೧೯೪೨ರಲ್ಲಿ ಮೊದಲ ಬಾರಿಗೆ ಸ್ಟೇಜಿನಾಟವನ್ನು ಪ್ರಾರಂಭಿಸಿದರು. ಆ ಕಾಲದಲ್ಲಿ ಕೆಲವು ಬಯಲಾಟದ ಗುತ್ತಿಗೆದಾರರು ಅಡಿಕೆಯ ಸೋಗೆ ಅಥವಾ ತೆಂಗಿನ ಮಡಲಿನಿಂದ ದೊಡ್ಡದಾದ ಸ್ಟೇಜನ್ನು ನಿರ್ಮಾಣ ಮಾಡಿ ಬೇರೆ ಬೇರೆ ಮೇಳ ದವರನ್ನು ಕರೆಯಿಸಿ ಟಿಕೇಟು ಇಟ್ಟು ಆಡಿಸುತ್ತಿದ್ದರು. ಈ ಪದ್ಧತಿಯಲ್ಲಿ ಮೇಳದ ಸಂಚಾಲಕನ ಜವಾಬ್ದಾರಿಯೆಂದರೆ ಗುತ್ತಿಗೆ ನಿರ್ಧಾರ ಮಾಡಿ, ಬಂದ ಹಣವನ್ನು ಯೋಗ್ಯತೆಗನುಸಾರವಾಗಿ ಪಾತ್ರಧಾರಿಗಳಿಗೆ ಹಂಚುವುದಷ್ಟೆ. ಪೆಟ್ಟಿಗೆಯ ಜವಾ ಬ್ದಾರಿಯು ವೇಷಧಾರಿಗಳದೇ ಆಗಿರುತ್ತಿತ್ತು. ಪ್ರಾರಂಭದ ವರ್ಷ ಸುಮಾರು ೬೫ ಆಟ ಗಳಿಗೆ ವೀಳ್ಯ ಬಂದಿತ್ತಂತೆ.

೧೯೪೬ರ ಸುಮಾರಿಗೆ ಮೂರೂರು ದೇವರು ಹೆಗಡೆಯವರ ಆಗಮನವಾಗಿ ಮೇಳಕ್ಕೆ ಹೆಚ್ಚಿನ ವ್ಯಾವಸಾಯಿಕ ಆಕರ್ಷಣೆ ಸಿಕ್ಕಿತು. ಶಿವರಾಮ ಹೆಗಡೆಯವರ ಕಲಾನುಭವ ಪರಿಪಕ್ವವಾಗಿದ್ದು, ಅವರ ನಾಯಕ ಪಾತ್ರಕ್ಕೆ ಸಮರ್ಥ ಪ್ರತಿನಾಯಕ ದೊರೆತು ಪ್ರದರ್ಶನಗಳು ಆಕರ್ಷಕವಾಗಲು ಸಾಧ್ಯವಾಯಿತು. ಇದರಿಂದ ಹೆಚ್ಚಿನ ಬೇಡಿಕೆ ಬರಲಾರಂಭಿಸಿತು. ೧೯೫೧ರವರೆಗೂ ಇವರಿಬ್ಬರ ಜೋಡಿ ತುಂಬ ಪ್ರಸಿದ್ಧ ವಾಗಿತ್ತು. ಆ ಅವಧಿಯಲ್ಲಿ ಹೆಚ್ಚು ಬೇಡಿಕೆಯಿದ್ದ ಪ್ರಸಂಗಗಳು: ಐರಾವತ, ಕಂಸವಧೆ, ಗದಾಪರ್ವ, ಕನಕಾಂಗಿ ಕಲ್ಯಾಣ, ಪ್ರಹ್ಲಾದ ಚರಿತ್ರೆ ಮುಂತಾದವು. ಸ್ಟೇಜಿನಾಟ ಮತ್ತು ಬಯಲಾಟ ಎರಡೂ ನಡೆಯುತ್ತಿದ್ದು ದಿನ ಬಿಟ್ಟು ದಿನ ಆಟ ಆಡುವ ರೂಢಿಯೇ ಹೆಚ್ಚು ಪ್ರಚಲಿತವಾಗಿತ್ತು. ಸಾಮಾನ್ಯವಾಗಿ ಚಿಕ್ಕ ಊರುಗಳಲ್ಲಿ ನಾಲ್ಕೈದು ಆಟಗಳೂ ದೊಡ್ಡ ದೊಡ್ಡ ಊರುಗಳಲ್ಲಿ ಹತ್ತು–ಹನ್ನೆರಡು ಆಟಗಳೂ ನಡೆಯುತ್ತಿದ್ದವು.

ಶಿವರಾಮ ಹೆಗಡೆಯವರ ಆತ್ಮೀಯರೂ ಯಕ್ಷಗಾನಾಸಕ್ತರೂ ಆದ ಎನ್. ಜಿ. ನಾಯಕರು ಈ ಮೇಳದಿಂದ 'ಕೃಷ್ಣಸಂಧಾನ' ಎಂಬ ಆಖ್ಯಾನವು ಧಾರವಾಡ ಆಕಾಶ ವಾಣಿಯಲ್ಲಿ ಪ್ರಸಾರವಾಗಲು ವ್ಯವಸ್ಥೆ ಮಾಡಿದ್ದರಿಂದ, ಆಕಾಶವಾಣಿಯಲ್ಲಿ ಯಕ್ಷಗಾನ ಕಾರ್ಯಕ್ರಮ ನೀಡಿದ ಕೀರ್ತಿಗೆ ಮೇಳವು ಭಾಜನವಾಯಿತು.

ಅನಂತರ ಹೆಗಡೆಯವರು ಕೆಲವು ಬದಲಾವಣೆಯನ್ನು ತರಲು ಯೋಜಿಸಿದರು. ಇಲ್ಲಿಯವರೆಗೆ ರೂಢಿಯಲ್ಲಿದ್ದ ಪಾಲುಹಂಚಿಕೆ ಪದ್ಧತಿಯನ್ನು ಕೊನೆಗೊಳಿಸಲು ತೀರ್ಮಾನಿಸಿ, ಕಲಾವಿದರನ್ನು ಪಗಾರಿನ ಮೇಲೆ ನಿಯಮಿಸಿಕೊಳ್ಳುವ ಪದ್ಧತಿಯನ್ನು ರೂಢಿಗೆ ತಂದರು. ಇದರಿಂದಾಗಿ ಆಡಳಿತದಲ್ಲಿ ವ್ಯಷ್ಟಿಕ್ರಿಯೆ ಪ್ರಧಾನವಾಗಿ ಮೇಳದಲ್ಲಿ ಶಿಸ್ತು, ಸಂಘಟನೆ ಹೆಚ್ಚು ಬಲಯುತವಾಗಲು ಸಹಾಯವಾಯಿತು. ೫೫–೫೬ರಲ್ಲಿ ಕಟ್ಟಿಟ್ಟ ಸ್ಟೇಜಿಗೆ ಬದಲಾಗಿ ಟೆಂಟಿನ ವ್ಯವಸ್ಥೆ ಪ್ರಾರಂಭ ಮಾಡಿದರು. ಇದರಿಂದ ಮೇಳವು ಸಂಪೂರ್ಣವಾಗಿ ವೃತ್ತಿಮೇಳ ಎನಿಸಿಕೊಂಡು ಆಟ ಆಡಿಸುವ ಉತ್ಸಾಹಿ ಗಳಿಗೆ, ಮೇಳದೊಡೆಯರಿಗೆ, ಕಲಾಪ್ರಸಾರಕ್ಕೆ ಮಹತ್ವವಾದ ತಿರುವನ್ನು ಕೊಡು ವಂತಾಯಿತು. ಈ ರೀತಿ ಬಂಡವಾಳ ಹೂಡಿ ಲಾಭ ನಷ್ಟದ ವ್ಯವಹಾರ ಯಜಮಾನ ನಿಗೇ ಎಂಬುದು ಜಾರಿಗೆ ಬಂದೊಡನೆ ಆಕರ್ಷಣೆಗಾಗಿ ಲಾಭಕ್ಕಾಗಿ ನಾನಾ ತಂತ್ರ ಗಳೂ ಪ್ರಾರಂಭವಾದವು. ಅದರಲ್ಲಿ ಮುಖ್ಯವಾದದ್ದು ದಕ್ಷಿಣಕನ್ನಡದ ಕಲಾವಿದರನ್ನು ಮೇಳಕ್ಕೆ ಆಹ್ವಾನಿಸಿದ್ದು. ಸಂಗೀತಗಾರರಾಗಿ ನಾರ್ಣಪ್ಪ ಉಪ್ಪೂರರು, ಕಲಾವಿದರಾಗಿ ವಂಡ್ಸೆ ನಾರಾಯಣರಾವ್, ಹೆರಂಜಾಲು ವೆಂಕಟ್ರಮಣಯ್ಯ, ಗೋಳಿಹೊಳೆ ಶ್ಯಾನುಭಾಗ, ಅರಾಟೆ ಮಂಜು, ಪಾಂಡೇಶ್ವರ ವೆಂಕಟರಾಯ, ಮದ್ದೆಳೆಗೆ ದೇವರಾಯ, ಕಿಸ್ಮತ್ತಿ ಹೆಬ್ಬಾರ, ಸಾಲಿಗ್ರಾಮ ಮಂಜುನಾಥಯ್ಯ, ಚಂಡೆಗೆ ಗಾವಳಿ ಚಂದು ಮುಂತಾದವರು ಮೇಳಕ್ಕೆ ಸೇರ್ಪಡೆಯಾದರು. ಆವರೆಗೆ ಆಡುತ್ತಿದ್ದ ಪ್ರಸಂಗ ಗಳಲ್ಲದೇ ಹೊಸ ಪ್ರಸಂಗಗಳ ಅನ್ವೇಷಣೆ ಶುರುವಾಗಿ 'ಬೇಡರ ಕಣ್ಣಪ್ಪ' ಪ್ರದರ್ಶಿತ ವಾಗತೊಡಗಿತು. ಅದುವರೆಗೆ ರೂಢಿಯಲ್ಲಿದ್ದ 'ತಾಸುಮಾರು' ಎಂಬ ವಾದನದ ಬದಲಿಗೆ ಚಂಡೆ ರೂಢಿಗೆ ಬಂತು. ಆ ಸಮಯದಲ್ಲಿ ಗದಾಪರ್ವ, ಪ್ರಸಂಗಕ್ಕೆ ಎಲ್ಲೆಡೆ ಬೇಡಿಕೆ ಬಂದು ಇಡಗುಂಜಿ ಮೇಳವು ಒಳ್ಳೆಯ ಹೆಸರು ಗಳಿಸಲು ಸಹಕಾರಿಯಾಯಿತು.

ಆ ಸಮಯದಲ್ಲಿ ದಕ್ಷಿಣ ಕನ್ನಡದ ಮೇಳಗಳು ಸುಸಜ್ಜಿತವಾಗಿ ಉತ್ತರ ಕನ್ನಡ ದಲ್ಲಿ ಪ್ರವಾಸ ಮಾಡುತ್ತಿದ್ದವು. ಈ ಜಿಲ್ಲೆಯಲ್ಲೇ ಮುಖ್ಯವಾಗಿ ನಾಲ್ಕು ಮೇಳಗಳು ಸಂಚಾರ ಮಾಡುತ್ತಿದ್ದವು. ಆದರೂ ಕೆರೆಮನೆ ಮೇಳದ ಬೇಡಿಕೆ ತುಂಬಾ ಇತ್ತು. ಕಾರಣ: ಬಯಲಾಟದ ಮೇಳಗಳು ಕೆಲವೊಮ್ಮೆ ಬೇಕಾಬಿಟ್ಟಿ ಪ್ರದರ್ಶನ ನೀಡು ತ್ತಿದ್ದವು. ನಿರ್ದಿಷ್ಟ ಸಮಯಕ್ಕಿಂತ ಎರಡುಮೂರು ಗಂಟೆ ತಡವಾಗಿ ಪ್ರದರ್ಶನ ಪ್ರಾರಂಭ ಮಾಡುವುದು ಮುಂತಾದ ಅವ್ಯವಸ್ಥೆಗಳಿಂದ ಪ್ರೇಕ್ಷಕರ ಗಮನ ಬಯಲಾಟದ ಕಡೆ ಕಡಿಮೆಯಾಗತೊಡಗಿತ್ತು. ಇಡಗುಂಜಿ ಮೇಳವು ಇಂತಹ ಯಾವುದೇ ಪ್ರಮಾದಕ್ಕೂ ಅವಕಾಶ ನೀಡದೆ ತನ್ನದೇ ಶಿಸ್ತು, ಸಂಘಟನೆ, ಸ್ಥಾನ–

ಮಾನ ಗಳಿಸಿಕೊಂಡು ಜನಸಾಮಾನ್ಯರೆಲ್ಲರೂ ಪ್ರದರ್ಶನ ವೀಕ್ಷಿಸುವಂತೆ ಮಾಡುವಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತಿತ್ತು.

ಉತ್ತರಕನ್ನಡದಲ್ಲಿ ಬಹುತೇಕ ಯಾವ ಕಲಾವಿದನೂ ಯಕ್ಷಗಾನವೊಂದನ್ನೇ ನಂಬಿದವನಲ್ಲ. ಸಾಮಾನ್ಯವಾಗಿ ಇದರ ಹೊರತಾಗಿ ಯಾವುದಾದರೊಂದು ಉಪ ದಂಧೆ ಇದ್ದೇ ಇರುತ್ತದೆ. ಅವರಿಗೆ ಯಕ್ಷಗಾನವೆಂಬುದೊಂದು ಹವ್ಯಾಸ. ಹಾಗಾಗಿ ಪ್ರಾರಂಭದ ದಶಕಗಳಲ್ಲಿ ಈ ಮೇಳಕ್ಕೆ ಕಲಾವಿದರ ಪ್ರೋತ್ಸಾಹ, ಸಹಕಾರಗಳು ತಾನಾಗಿ ಒದಗಿ ಬಂದವು. ಉತ್ಸಾಹ, ಸಹಕಾರ, ಕಲಿಯುವಿಕೆಯ ಧೋರಣೆ ಇಂದಿಗಿಂತ ಅಂದು ಅಧಿಕವಾಗಿತ್ತು. 'ಇಂದು, ಸತ್ತರೆ ಸಾಯಿ, ನನಗೊಂದು ವಾಲೆ ಜೋಡಿ ಎನ್ನುವವರೇ ಬಹಳ' ಎಂಬ ಮಾತನ್ನು, ಸುಮಾರು ಮೂವತ್ತು ವರ್ಷಗಳ ಕಾಲ ಮೇಳ ನಡೆಸಿ ಅನುಭವಿಸಿದ ಶಿವರಾಮ ಹೆಗಡೆಯವರು ನೊಂದು ನುಡಿಯುತ್ತ ಕಲಾವಿದರ ಅಸಹಕಾರದಿಂದಾಗಿಯೇ ಮೇಳದ ತಿರುಗಾಟವನ್ನು ನಿಲ್ಲಿಸಬೇಕಾಯಿತು ಎಂದು ತಿಳಿಸುತ್ತಾರೆ.

ಶಿವರಾಮ ಹೆಗಡೆಯವರ ಅಭಿಪ್ರಾಯದಲ್ಲಿ 'ಯಜಮಾನನಿಗೂ ಸ್ವಾಭಿಮಾನ ಎಂಬುದಿರುತ್ತದೆ. ನಾನೇ ಬೇರೆ ಕಡೆ ಆಟ ಕುಣಿಯಲು ಹೋಗುವುದಾದರೆ 'ದಮ್ಮಯ್ಯ' ಎಂದು ಕರೆಯುವವರಿದ್ದಾರೆ, ಹೇರಳ ಧನ ಸಂಗ್ರಹವೂ ಆಗುತ್ತದೆ. ಈ ರೀತಿ ಪಾತ್ರ ಹಾಕಲು ಬೇರೆಯವರು ನನ್ನ ಕಾಲು ಹಿಡಿಯುವಾಗ ಈ ಕಲಾವಿದರ ಕಾಲನ್ನು ನಾನೇಕೆ ಹಿಡಿಯಬೇಕು ?' ಆದರೆ ಕಲಾವಿದರಿಗೋ ತಾವಿದ್ದರೆ ಮೇಳ ಎಂಬ ಅಹಂ, ತಮ್ಮಿಂದಾಗಿ ಮೇಳಕ್ಕೆ ಇಷ್ಟೊಂದು ಪ್ರಸಿದ್ಧಿ ಎಂಬುದೊಂದು ಕಡೆ. ಈ ಇಬ್ಬರ ಸ್ವಾಭಿಮಾನದಿಂದಾಗಿ ಜನಪ್ರಿಯವಾಗಿದ್ದ ಮೇಳ ನಿಲ್ಲುವಂತಾಯಿತು. ಅಂದರೆ ಹಣದ ತೊಂದರೆಯಿಂದಾಗಲಿ, ಕೌಟುಂಬಿಕ ತಾಪತ್ರಯದಿಂದಾಗಲಿ ಈ ಮೇಳದ ತಿರುಗಾಟ ನಿಲ್ಲಲಿಲ್ಲ. ಸ್ವಾಭಿಮಾನದ ಮೇಲಾಟದ ಜೊತೆ ಇನ್ನೂ ಹಲವು ಕಾರಣಗಳನ್ನು ಊಹಿಸಬಹುದಾಗಿದೆ. ಆ ಸಮಯದಲ್ಲಿ ದೇವರು ಹೆಗಡೆಯವರು 'ಮಹಾ ವಿಷ್ಣು ಪ್ರಾಸಾದಿಕ ಯಕ್ಷಗಾನ ಮಂಡಳಿ ಮೂರೂರು ಕಲ್ಲಬ್ಬೆ' ಎಂಬ ಸಂಘಟನೆಯ ಅಡಿಯಲ್ಲಿ ಮೇಳ ನಡೆಸುತ್ತಿದ್ದರು. ಇಡಗುಂಜಿ ಮೇಳದ ಪ್ರಧಾನ ಭಾಗವತರಾದ ಉಪ್ಪೂರರು, ಪೆರ್ಡೂರು ಮೇಳಕ್ಕೆ ಹೋದುದರಿಂದ ಕಡತೋಕಾ ಕೃಷ್ಣ ಭಾಗವತರು ಇಡಗುಂಜಿ ಮೇಳಕ್ಕೆ ನಿಶ್ಚಯವಾಗಿದ್ದರಂತೆ. ಆದರೆ ಅವರು ದೇವರು ಹೆಗಡೆಯವರ ಮೇಳಕ್ಕೆ ಸೆಳೆಯಲ್ಪಟ್ಟರು. ಅಷ್ಟೇ ಅಲ್ಲದೇ ಇಡಗುಂಜಿ ಮೇಳದ ಇನ್ನೂ ಕೆಲವು ಕಲಾವಿದರು ದೇವರು ಹೆಗಡೆಯವರ ಮೇಳಕ್ಕೆ ಸೇರಿದರು. ಒಂದು ಮೇಳದಲ್ಲಿ ಪ್ರಧಾನ ಅಂಗವಾದ ಹಿಮ್ಮೇಳ ಮತ್ತು ಕಲಾವಿದರ ಕೊರತೆ ಒಮ್ಮೆಲೇ ಆದರೆ ಮುಂದಿನ ಸಂಘಟನೆ ಬಲು ಕಷ್ಟ. ಆದರೂ ಹಠವಾದಿಯಾದ ಶಿವರಾಮ ಹೆಗಡೆಯವರು ಸಂಘಟನೆಗೆ ಮುಂದಾದಾಗ ಮೇಳದ ಜೀವಾಳವಾಗಿದ್ದ ಮಹಾಬಲ ಹೆಗಡೆಯವರೂ ಕಾರಣಾಂತರದಿಂದ ದೂರಸರಿಯಲು ಮನಸ್ಸು ಮಾಡಿದರು. ಇತ್ತ ಮೇಳದ

28518

ಯಜಮಾನ ಶಿವರಾಮ ಹೆಗಡೆಯವರಿಗೂ ವಯಸ್ಸು ಇಳಿಮುಖವಾಗುತ್ತಿತ್ತು. ಆದರಿಂದ ಸಂಘಟನೆ ಮತ್ತು ರಂಗಭೂಮಿಯ ಜವಾಬ್ದಾರಿ–ಇವೆರಡನ್ನೂ ಏಕಕಾಲ ದಲ್ಲಿ ನಿರ್ವಹಿಸುವ ಸಾಮರ್ಥ್ಯ ಕಡಿಮೆಯಾಗಿ 'ಮ್ಯಾನೇಜ್‌ಮೆಂಟ್'ನಲ್ಲಿ ಶೈಥಿಲ್ಯ ಉಂಟಾದುದು ಸಹಜ. ಯಾಜಿಯವರಂತಹ ಆತ್ಮೀಯರು ಇಲ್ಲದುದು, ಅದಾದ ಸ್ವಲ್ಪ ಸಮಯದಲ್ಲಿ ಮದ್ದಳೆಗಾರ ಕನ್ನಯ್ಯ ಭಂಡಾರಿ ಮತ್ತು ಮಲ್ಲಗದ್ದೆ ಗಣೇಶ ಹೆಗಡೆ ಯವರ ನಿವೃತ್ತಿ ನುಂಗಲಾರದ ತುತ್ತಾಗಿ, ಹೊಸ ತಲೆಮಾರಿನವರೊಂದಿಗೆ ಮಾನಸಿಕ ಹೊಂದಾಣಿಕೆಯಾಗದೆ ಕಲಾಭಿವ್ಯಕ್ತಿಗೆ ತೊಡಕಾಗಿರಬಹುದು. ಬಯಲಾಟದಿಂದ ಟೆಂಟಿನ ಹೊಸ ವ್ಯವಸ್ಥೆ, ಬೃಹದಾಕಾರವಾಗಿ ಬೆಳೆಯುತ್ತಿರುವ ಮೇಳ, ಯಜಮಾನ ನೊಬ್ಬನ ಮೇಲೇ ಕಲಾವಿದನ ಮತ್ತು ಆಟದ ಜವಾಬ್ದಾರಿ, ಲಾಭ ಹಾನಿಯ ಜವಾಬ್ದಾರಿ, ನಿರ್ದಿಷ್ಟ ಸಂಬಳ, ಇತ್ಯಾದಿ ನಾನಾರೀತಿಯ ಸಂಕೀರ್ಣ ಜವಾಬ್ದಾರಿಗಳು ಒಮ್ಮೆಲೇ ಎರಗಿ ಬಂದುದರಿಂದ ಮತ್ತು ಯಾವ ಕೆಲಸದಲ್ಲಿಯೂ ಸ್ಥಿರತೆಯಿಲ್ಲದ ಯಜಮಾನನ ಮನಸ್ಥಿತಿ ಈ ಎಲ್ಲವೂ ಒಟ್ಟಿಗೇ ಸೇರಿ, ಕಲಾವಿದರ ಅಸಹಕಾರ ನಿಮಿತ್ತವಾಗಿ ಮೇಳದ ತಿರುಗಾಟ ನಿಲುಗಡೆಗ ಬಂದಂತೆ ಕಾಣುತ್ತದೆ. ಯಾವುದೇ ಮೇಳ ಅಥವಾ ಸಂಘ–ಸಂಸ್ಥೆಗಳ ಸಂಘಟನೆಯಲ್ಲಿ 'ಇದು ನನ್ನದು' ಎಂಬ ಜವಾಬ್ದಾರಿ, ಅಭಿಮಾನ ಎಲ್ಲರಿಗೂ ಇದ್ದರೆ ಮಾತ್ರ ಯಶಸ್ವಿಯಾಗಿ ಮುಂದು ವರಿಯಲು ಸಾಧ್ಯ. ಇಡಗುಂಜಿ ಮೇಳದಲ್ಲಿ ಯಾಜಿ ಭಾಗವತರು ಇರುವವರೆಗೂ ಯಜಮಾನ ಮತ್ತು ಪ್ರದರ್ಶನ ನಿರ್ದೇಶಕರಲ್ಲಿ ಒಮ್ಮತವಿತ್ತು, ಆದರಿಂದಾಗಿ ಕಲಾವಿದರಲ್ಲೂ ಇದು ತಮ್ಮ ಮೇಳ ಎಂಬ ಭಾವನೆಯಿತ್ತು. ಮುಂದೆ ಭಾಗವತ ಮತ್ತು ಕಲಾವಿದರಲ್ಲಿ ಈ ಭಾವನೆ ಯನ್ನು ಬಲಪಡಿಸಲು ಯಜಮಾನರು ಅಸಮರ್ಥರಾದರೋ ಅಥವಾ ಕಲಾವಿದರು ಬೇರೂರಿಸಿಕೊಳ್ಳಲಿಲ್ಲವೋ ತಿಳಿಯದು. ಒಟ್ಟಿನಲ್ಲಿ ಇಂತಹ ಆಕಸ್ಮಿಕ ಅನಿವಾರ್ಯಗಳೆಲ್ಲ ಸೇರಿ ಇಪ್ಪತ್ತೈದು ವರ್ಷಗಳ ಪ್ರಬಲವಾದ ಸಂಘಟನೆಯುಳ್ಳ, ಅವ್ಯಾಹತವಾಗಿ ಕಲಾಸೇವೆ ನಡೆಸಿದ ಈ ಮೇಳವು ೧೯೫೮ರಲ್ಲಿ ತನ್ನ ತಿರುಗಾಟವನ್ನು ನಿಲ್ಲಿಸಿತು.

ಮೇಳದ ಸಂಚಾರ ಸ್ಥಗಿತವಾದಾಗ

ಮೇಳದ ತಿರುಗಾಟ ನಿಂತ ಸಮಯದಲ್ಲೂ ಇಡಗುಂಜಿಯಲ್ಲಿ ಮೇಳದ ವತಿ ಯಿಂದ ಹರಕೆಯ ಆಟಗಳು ಮಾಮೂಲಿಯಂತೆ ನಡೆಯುತ್ತಿದ್ದವು. ಉತ್ಸಾಹಿಗಳೆಲ್ಲ 'ಸೇರಿ ಆಗೊಂದು' ಈಗೊಂದು ಎಂದು ವರ್ಷದಲ್ಲಿ ಸುಮಾರು ಹತ್ತು–ಹನ್ನೆರಡು ಪ್ರದರ್ಶನಗಳನ್ನು ಮೇಳದ ಹೆಸರಿನಲ್ಲಿ ನಡೆಸುತ್ತಿದ್ದರು. ವ್ಯಾವಸಾಯಿಕ ತಿರುಗಾಟ ಸ್ಥಗಿತವಾದರೂ ಮೇಳದ ಹೆಸರಿನಲ್ಲಿ ಕಲಾ ಚಟುವಟಿಕೆಗಳು ಮುನ್ನಡೆಯುತ್ತಲೇ ಇದ್ದವು. ಮೇಳದ ತಿರುಗಾಟ ನಿಂತಿದ್ದು ಈ ಜಿಲ್ಲೆಯ ಕಲಾವಿದರಿಗೆ ಮತ್ತು ಪ್ರೇಕ್ಷಕರಿಗೆ ತಾವು ಏನೋ ಕಳಕೊಂಡ ಅನುಭವವಾಗತೊಡಗಿತು. ಆದರಿಂದ ಕೆಲವು ಉತ್ಸಾಹಿ ಗಳು ಮತ್ತೆ ಮೇಳದ ಸಂಘಟನೆಗೆ ತೊಡಗಿದರು. ಅವರಲ್ಲಿ ಹೆಬ್ಬೈಲು ಶಂಭು ಹೆಗಡೆ, ಎಲೆ ವೆಂಕಟ್ರಮಣ ನಾಯಕರು, ಜಾಲಿಸತ್ತಿಯವರು, ಹೊಸಾಕುಳಿ ನಾರಾಯಣ

೨೧೩೨೬

ಭಟ್ಟರು ಮುಂತಾದವರು ಒಂದೆರಡು ವರ್ಷಗಳ ಸೀಮಿತ ಅವಧಿಯ ತಿರುಗಾಟ ನಡೆಸಿದರು. ಹೀಗೆ ಹದಿನೈದು ವರ್ಷಗಳ ಕಾಲ ಖಾಯಂ ಸಂಸ್ಥೆಯಾಗಿರದೆ ಮೇಳವು ತನ್ನ ನಿರಂತರತೆಯನ್ನು ಉಳಿಸಿಕೊಳ್ಳುವುದರಮಟ್ಟಿಗೆ ಚಟುವಟಿಕೆಯಿಂದ ಕೂಡಿತ್ತು.

೧೯೬೨ರಲ್ಲಿ ಈ ಮೇಳವು ಮೊದಲ ಬಾರಿಗೆ ಮುಂಬಯಿಗೆ ಪ್ರಯಾಣ ಮಾಡಿ ಕಲಾ ಪ್ರದರ್ಶನ ನೀಡಿತು. ಅದಕ್ಕೆ ಗೋಕರ್ಣದ ಶ್ರೀಯುತ ಚಿತ್ರಗಿಮಠ ಅವರು ತುಂಬ ಸಹಾಯ ಮಾಡಿದರು. ೧೯೬೫ನೇ ಇಸವಿಯಲ್ಲಿ 'ಕನ್ನಡ ಸಹೃದಯರ ಸಂಘ' ದವರ ವತಿಯಿಂದ ಕನ್ನಡ ರಾಯಭಾರಿಗಳಾದ ಶಾ.ಮಂ. ಕೃಷ್ಣರಾಯರ ಸಹಕಾರ, ಪ್ರಯತ್ನದಿಂದಾಗಿ ಗೋವಾದಲ್ಲಿ ಈ ಮೇಳವು ಮೂರು ಪ್ರದರ್ಶನಗಳನ್ನು ನೀಡಿತು. ಭಾಷೆ, ಧರ್ಮಗಳ ಬಂಧನವನ್ನು ಮೀರಿ ಯಕ್ಷಗಾನವು ಜನರ ಮನಸ್ಸನ್ನು ಸೂರೆ ಗೊಂಡು ಬೆಳೆಯಬಲ್ಲುದು; ರಂಜಿಸಬಲ್ಲುದು ಎಂಬುದನ್ನು ಸಾಬೀತುಗೊಳಿಸುವುದ ರೊಂದಿಗೆ ಇಂಥದು ಬೇರೆಲ್ಲೂ ಇಲ್ಲ, ಇದು ಕರ್ನಾಟಕದ್ದೇ ವೈಶಿಷ್ಟ್ಯ ಎಂಬ ಹೆಗ್ಗಳಿಕೆ ಯನ್ನೂ ಗಳಿಸಿತು. ಆ ವರ್ಷ ಈ ಮೇಳದ ಪ್ರಧಾನ ನಟರೂ ಸಂಸ್ಥಾಪಕರೂ ಆದ ಶಿವರಾಮ ಹೆಗಡೆಯವರಿಗೆ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿತು. ೧೯೬೮ರಲ್ಲಿ ದೆಹಲಿಯ ಕಲಾಭಿಮಾನಿಗಳಿಗೆ ಎರಡು ಯಕ್ಷಗಾನ ಪ್ರದರ್ಶನ ನೀಡಿದ್ದಲ್ಲದೆ, ಅದೇ ವರ್ಷ ಜರಾಸಂಧವಧೆಯ ಪೂರ್ಣಭಾಗ ದೆಹಲಿ ದೂರದರ್ಶನದಲ್ಲಿ ಪ್ರಸಾರವಾಯಿತು. ೧೯೭೧ರಲ್ಲಿ ಶಿವರಾಮ ಹೆಗಡೆ ಯವರಿಗೆ ರಾಷ್ಟ್ರಪ್ರಶಸ್ತಿ ದೊರಕಿತು. ಆ ವರ್ಷ ಮೈಸೂರು ರಾಜ್ಯ ಸಂಗೀತ ಅಕಾಡೆಮಿಯ ಆಶ್ರಯದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಈ ಮೇಳ ದಿಂದ 'ಜರಾಸಂಧವಧೆ' ಆಖ್ಯಾನವು ಅಭಿನಯಿಸಲ್ಪಟ್ಟಿತು.

ಇಡಗುಂಜಿ ಮೇಳವು ತನ್ನ ಸಂಚಾರ ನಿಲ್ಲಿಸಿದಾಗ, ಶ್ರೀಧರ ಹಂದೆಯವರ ಮುಂದಾಳತ್ವದಲ್ಲಿ ವ್ಯವಸ್ಥಿತ ಮೇಳವಾಗಿದ್ದ ಸಾಲಿಗ್ರಾಮ ಮೇಳವನ್ನು ಕೆರೆಮನೆ ಬಂಧುಗಳು ಸೇರಿದುದು ಬಡಗುತಿಟ್ಟಿನ ಇತಿಹಾಸದಲ್ಲಿ ಮಹತ್ವದ ಅಂಶ. ಅಂದು ಯಕ್ಷಗಾನವು ರಸಿಕರ ಹೃದಯವನ್ನು ತಣಿಸಿ, ಅವರಲ್ಲಿ ಕಲಾಭಿರುಚಿಯನ್ನು ಜೀವಂತ ವಾಗಿಸುವ ಮಹತ್ಕಾರ್ಯ ನಡೆಸಿದ್ದು ಕೆರೆಮನೆ ಬಂಧುಗಳಿಂದೊಡಗೂಡಿದ ಸಾಲಿ ಗ್ರಾಮ ಮೇಳ. ೧೯೬೯ರಲ್ಲಿ ಹೆಬ್ರಿಯಲ್ಲಿ ನಡೆದ 'ಚಂದ್ರಹಾಸ' ಪ್ರದರ್ಶನದಿಂದ ಪ್ರಾರಂಭವಾದ ಈ ಕಾರ್ಯ ೧೯೭೨ರ ವರೆಗೂ ಅವ್ಯಾಹತವಾಗಿ ನಡೆಯಿತು. ಈ ರೀತಿ ವಿಜಯದ ವೈಜಯಂತಿಯ ಮುಂಚೂಣಿಯಲ್ಲಿದ್ದ ಕೆರೆಮನೆ ಬಂಧುಗಳಿಗೆ ಸಾಲಿಗ್ರಾಮ ಮೇಳದ ಜೈತ್ರಯಾತ್ರೆ ಅಂತರಂಗ ಶೋಧನೆಗೆ ಪ್ರೇರೇಪಣೆ ನೀಡು ವಂತಾಯಿತು. ತಮ್ಮದೇ ಆದ ಮೇಳವಿದ್ದೂ, ಒಂದೇ ಮನೆಯಲ್ಲೇ ಪ್ರಧಾನ ಕಲಾವಿದ ರಿದ್ದೂ ಇನ್ನೊಬ್ಬರ ಮೇಳದಲ್ಲಿ ಸಂಬಳಕ್ಕಾಗಿ ದುಡಿಯುತ್ತ ಶಹಬಾಸ್‌ಗಿರಿ ಗಿಟ್ಟಿಸಿ ಕೊಳ್ಳುತ್ತ ಇರುವುದಕ್ಕಿಂತ ಸ್ವತಂತ್ರವಾಗಿ ತಮ್ಮ ಮೇಳವನ್ನೇ ಏಕೆ ಪುನಃ ಸಂಘಟಿಸ ಬಾರದು ? ಎಂಬ ಆಂತರಿಕ ಒತ್ತಡ ಬಲವಾಗತೊಡಗಿತು. ಎಷ್ಟಾದರೂ ಇನ್ನೊಬ್ಬರ

K398.7921
JOS

ಮೇಳದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಕಡಿವಾಣ ಇದ್ದೇ ಇರುತ್ತದೆ. ಆಗ ಒಬ್ಬ ಸೃಜನಶೀಲ ಕಲಾವಿದನಿಗೆ ತನ್ನದೇ ಆಗ ಅಭಿವ್ಯಕ್ತಿ ಮಾಧ್ಯಮ ಬೇಕೆಂಬ ಆಂತರಿಕ ತುಡಿತ ಇರುವುದು ಸಹಜ. ಸ್ವತಃ ಶ್ರೇಷ್ಟ ಕಲಾವಿದರೂ, ತಂದೆಯವರು ಮೇಳದ ಯಜಮಾನರಾಗಿದ್ದಾಗ ಅವರೊಂದಿಗೆ ಸಂಘಟನೆ ಮತ್ತು ಕಾರ್ಯಕ್ರಮ ಸಂಯೋಜನೆಯಲ್ಲಿ ಹೆಗಲಿಗೆ ಹೆಗಲು ನೀಡಿ ಸಹಕರಿಸಿದವರೂ ಆದ ಶಂಭು ಹೆಗಡೆಯವರು ತಮ್ಮ ಮೇಳವನ್ನು ತಿರುಗಿ ಸಂಘಟಿಸಲು ಯೋಚಿಸತೊಡಗಿದರು.

ಅದೇ ವರ್ಷ ಒಮ್ಮೆ ಶಂಭು ಹೆಗಡೆಯವರು ಕೆಲಸದ ನಿಮಿತ್ತ ಊರಿಗೆ ಹೋಗಬೇಕಾದಾಗ 'ಮರುದಿನ ಬರಲಾಗದಿದ್ದರೆ ರಜೆ ಹಾಕಿ' ಎಂದು ವಿನಂತಿಸಿ ಹೋಗಿದ್ದರೂ ಮರುದಿನ ಗೈರುಹಾಜರಿಯೆಂದು ಪರಿಗಣಿಸಿ ಅವರು ಬಂದ ಮೇಲೆ ಆ ದಿನ ಅವರಿಗೆ ಯಾವ ವೇಷವನ್ನೂ ಕೊಡಲಿಲ್ಲವಂತೆ. ಈ ಒಂದು ಪುಟ್ಟ ಘಟನೆ ಯಕ್ಷಗಾನ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ ತೆರೆಯುವಂತಾಯಿತು. ಸಾಲಿಗ್ರಾಮ ಮೇಳದಲ್ಲಿದ್ದಾಗಿನ ರಂಗುರಂಗಿನ ಅನುಭವ, ಆ ಮೇಳದ ಅನುಸರಣೀಯ ಸಾಂಸ್ಥಿಕ ವ್ಯವಸ್ಥೆ, ಸಂಚಾರ ಕ್ರಮ, ದಕ್ಷಿಣಕನ್ನಡದ ಬಹುತೇಕ ಸ್ಥಳಗಳ ಪರಿಚಯ, ಮಹಾಬಲ ಹೆಗಡೆ, ಶಿವರಾಮ ಹೆಗಡೆ, ಮೊದಲಾದ ಮೊದಲ ದರ್ಜೆಯ ಕಲಾವಿದರೆಲ್ಲರೂ ಮನೆಯವರೇ ಆದುದು ಈ ಎಲ್ಲ ಕಾರಣಗಳಿಂದ ಹಿಂದಿಗಿಂತ ಈಗ ಎಲ್ಲ ರೀತಿಯಿಂದಲೂ ಸುಸಜ್ಜಿತವಾಗಿ ಶಂಭು ಹೆಗಡೆಯವರ ಸಂಚಾಲಕತ್ವದಲ್ಲಿ ಇಡಗುಂಜಿ ಮೇಳವು ೧೯೭೩ರ ನವೆಂಬರ ೧೩ರಂದು ಪುನಃ ತನ್ನ ಸಂಚಾರ ಪ್ರಾರಂಭ ಮಾಡಿತು.

ಮೇಳದ ಪುನಸ್ಸಂಘಟನೆ

೧೯೭೩ನೆಯ ಜನವರಿಯಲ್ಲಿಯೇ ಮೇಳದ ತಿರುಗಾಟಕ್ಕೆ ಸಂಬಂಧಿಸಿದ ಯೋಜನೆಗಳು ಮತ್ತು ರೂಪರೇಖೆಗಳು ಸಿದ್ಧವಾದವು. ಅದೇ ವರ್ಷವೇ ಲಾರಿ, ಕಾರು, ಜನರೇಟರ್, ಟೆಂಟಿನ ಸಾಮಗ್ರಿಗಳು, ವೇಷಭೂಷಣಗಳು ಹೀಗೆ ಸರ್ವವಿಧದಿಂದಲೂ ಭೌತಿಕವಾಗಿ ಮೇಳವು ಸುಸಜ್ಜಿತವಾಗಿತ್ತು. ೧೩-೧೧-೭೩ ರಂದು ಇಡಗುಂಜಿ ಮಹಾಗಣಪತಿಯ ಸನ್ನಿಧಿಯಲ್ಲಿ ೨೦*೨೦ರ ಅರ್ಧಚಂದ್ರಾಕೃತಿಯ ರಂಗಮಂಚ ಮತ್ತು ಅದಕ್ಕೊಪ್ಪುವ ರಂಗಸಜ್ಜಿಕೆಯೊಂದಿಗೆ 'ಸುಭದ್ರಾ ಕಲ್ಯಾಣ' ಎಂಬ ಪ್ರದರ್ಶನ ನೀಡಿ ಈ ಮೇಳವು ತನ್ನ ವ್ಯಾವಸಾಯಿಕ ತಿರುಗಾಟವನ್ನು ಪುನರಾರಂಭಿಸಿತು.

ಹಿಂದಿಗಿಂತ ಅಂದಿನ ಮೇಳದ ಸಂಘಟನೆ ತುಂಬ ಸಂಕೀರ್ಣ ಜವಾಬ್ದಾರಿಯಿಂದ ಕೂಡಿದುದಾಗಿತ್ತು. ಇಲ್ಲಿನ ಜವಾಬ್ದಾರಿ ಮುಖ್ಯವಾಗಿ ಎರಡು ತೆರನಾದುದು. ಒಂದು ಆಡಳಿತಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಪ್ರದರ್ಶನಕ್ಕೆ ಸಂಬಂಧಿಸಿದ್ದು. ಇಡಗುಂಜಿ ಮೇಳದಲ್ಲಿ ಪ್ರದರ್ಶನಕ್ಕೆ ಸಂಬಂಧಿಸಿದಂತಹ ವೇಷ ವಿತರಣೆಯ ಜವಾಬ್ದಾರಿಯು ಭಾಗವತರು, ಮಹಾಬಲ ಹೆಗಡೆ ಮತ್ತು ಗಜಾನನ ಹೆಗಡೆಯವರದಾಗಿರುತ್ತಿದ್ದರೆ, ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು, ಸ್ಥಳವನ್ನು ಅನುಸರಿಸಿ ಪ್ರಸಂಗಗಳ ಆಯ್ಕೆ

ಶಂಭು ಹೆಗಡೆಯವರದಾಗಿರುತ್ತಿತ್ತು. ಪ್ರಧಾನ ಪಾತ್ರವನ್ನು ಸಾಮಾನ್ಯವಾಗಿ ಮಹಾಬಲ ಹೆಗಡೆಯವರೇ ವಹಿಸುತ್ತಿದ್ದರು. ಗಜಾನನ ಹೆಗಡೆಯವರು ಮುಖ್ಯ ಸ್ತ್ರೀವೇಷಧಾರಿಯಾಗಿ ಮತ್ತು ಶಿವರಾಮ ಹೆಗಡೆಯವರು ಅತಿಥಿ ಕಲಾವಿದರಾಗಿ ಭಾಗವಹಿಸುತ್ತಿದ್ದರು. ಆ ಸಮಯದಲ್ಲಿ ದಕ್ಷಿಣೋತ್ತರಕನ್ನಡ ಜಿಲ್ಲೆಗಳಲ್ಲಿ ಸುಮಾರು ಹತ್ತು-ಹನ್ನೆರಡು ವೃತ್ತಿ ಮೇಳಗಳು ಸಂಚಾರ ಮಾಡುತ್ತಿದ್ದವು. ಅವುಗಳಲ್ಲಿ ಇಡಗುಂಜಿ ಮೇಳವು ತನ್ನ ಕಲಾತ್ಮಕ ಸಾಮರ್ಥ್ಯದಿಂದಾಗಿ ತನ್ನದೇ ಆದ ಪ್ರೇಕ್ಷಕವರ್ಗವನ್ನು ನಿರ್ಮಿಸಿ, ಉಳಿಸಿಕೊಳ್ಳುವಲ್ಲಿ ಸಮರ್ಥವಾಗಿತ್ತು. ಪುನಸ್ಸಂಘಟನೆಯಾದ ಮೇಲೆ ಮೇಳದ ಸಂಚಾರ ಮೊದಲಿಗಿಂತ ವ್ಯಾಪಕವಾಗತೊಡಗಿತು. ದಕ್ಷಿಣಕನ್ನಡದ ಮೂಲೆ ಮೂಲೆಗಳಲ್ಲಿ ಕ್ಯಾಂಪ್ ಹಾಕಲು ಪ್ರಾರಂಭವಾಯಿತು. ಆಗಲೇ ಅಲ್ಲಲ್ಲ ಹೊಸ ಪ್ರಸಂಗಗಳ ಧಾಳಿ ಶುರುವಾಗಿತ್ತು. ಆದರೆ ಇಡಗುಂಜಿ ಮೇಳವು ಈ ಆಮಿಷಕ್ಕೆ ಒಳಗಾಗಲಿಲ್ಲ. ಉದಾ : 'ಸತಿಸುಶೀಲೆ' ಎಂಬ ಪ್ರಸಂಗವನ್ನು ಬೇರೆ ಮೇಳಗಳಲ್ಲಿ ಆಡುವಾಗ ಸಾಹೇಬ, ಜಟಕಾವಾಲಾ, ಇತ್ಯಾದಿ ಪಾತ್ರಗಳನ್ನು ರಂಗಕ್ಕೆ ತರುತ್ತಾರೆ. ಆದರೆ ಇಡಗುಂಜಿ ಮೇಳದಲ್ಲಿ ಅವೆಲ್ಲವೂ ಬಣ್ಣದ ವೇಷಗಳಾಗಿ ಕಲಾತ್ಮಕರೂಪ ತಳೆದು ಯಕ್ಷಗಾನದ ಆವರಣಕ್ಕೆ ಹೊಂದಿಕೊಂಡು ಪ್ರದರ್ಶಿತವಾಗುತ್ತವೆ.

೭೫-೭೭ರಲ್ಲಿ ದುರ್ಗಪ್ಪ ಗುಡಿಗಾರರು ಈ ಮೇಳಕ್ಕೆ ಮದ್ದಳೆವಾದಕರಾಗಿ ಸೇರಿದರು. ಅದೇ ವರ್ಷ ದೇವರು ಹೆಗಡೆ, ಎಕ್ಟರ್ ಜೋಶಿ, ಮಂಜುನಾಥ ಭಟ್ಟ ಹೊಸ್ತೋಟ, ಅನಂತ ಹೆಗಡೆ ಕೊಳಗಿ, ಜಂಬೂರು ರಾಮಚಂದ್ರ ಶಾನುಭಾಗ, ಸ್ತ್ರೀವೇಷಕ್ಕೆ ಹಳದಿಪುರ ಗಜಾನನ ಭಂಡಾರಿ, ಹಾಸ್ಯಕ್ಕೆ ಕುಂಜಾಲು ರಾಮಕೃಷ್ಣ ನಾಯಕ, ಮುಂತಾದ ಗಟ್ಟಿಯಾದ "ಇಮೇಜ್" ಇದ್ದ ಕಲಾವಿದರಿಂದ ಕೂಡಿದ ಪ್ರಬಲವಾದ ಸಂಘಟನೆಯಿದ್ದು, ಪ್ರದರ್ಶನಗಳು ಶ್ರೇಷ್ಠಮಟ್ಟದವಾಗಿದ್ದವು. ಭಾಸವತಿ, ಸುಭದ್ರಾಕಲ್ಯಾಣ, ಕೃಷ್ಣಸಂಧಾನ, ಗದಾಪರ್ವ, ಭೀಷ್ಮವಿಜಯ, ಪ್ರಚಂಡ ವಿಶ್ವಾಮಿತ್ರ, ಮುಂತಾದವು ಆ ಕಾಲದಲ್ಲಿ ತುಂಬ ಬೇಡಿಕೆಯಿದ್ದ ಪ್ರಸಂಗಗಳು. ಆದರೂ ಆರ್ಥಿಕವಾಗಿ ಮೇಳ ಅಷ್ಟೊಂದು ಭದ್ರವಾಗಿರದೆ ಅಲ್ಲಿಂದಲ್ಲಿಗೆ ಅಂತೂ-ಇಂತೂ ಸರಿತೂಗಿಸಿಕೊಂಡು ಹೋಗುತ್ತಲಿತ್ತು. ೭೭-೭೭ ರಲ್ಲಿ ಮೇಳದ ಪ್ರಧಾನ ಕಲಾವಿದರಾದ ಮಹಾಬಲ ಹೆಗಡೆಯವರು ವೃತ್ತಿ ರಂಗಭೂಮಿಯಿಂದ ದೂರ ಸರಿಯುವ ನಿರ್ಧಾರ ಮಾಡಿದರು. ಅದೇ ವರ್ಷ ಮೇಳದ ಜೀವನಾಡಿ ಯಾಗಿದ್ದ ಗಜಾನನ ಹೆಗಡೆಯವರು ಆಕಸ್ಮಿಕ ಮರಣಕ್ಕೆ ತುತ್ತಾದರು. ಆ ಒಂದು ತಿರುಗಾಟದಲ್ಲಿದ್ದ ಕೊಳಗಿ ಅನಂತ ಹೆಗಡೆಯವರು, ಎಕ್ಟರ್ ಜೋಶಿಯವರು, ದೇವರು ಹೆಗಡೆಯವರು ಮುಂದಿನ ತಿರುಗಾಟದ ಹೊತ್ತಿಗೆ ಮೇಳ ಬಿಟ್ಟರು. ಆಗ ಮೇಳಕ್ಕೆ ಸುಮಾರು ೭೫-೮೦ ಸಾವಿರ ಸಾಲವೂ ಇತ್ತು. ಇಂತಹ ಸಮಯದಲ್ಲಿ ಏಕಾಂಗ ಸಾಹಸಿಯಾಗಿ, ಮೇಳವನ್ನು ಮುನ್ನಡೆಸಿದ್ದು ಶಂಭು ಹೆಗಡೆಯವರ ಪ್ರಶಂಸಾರ್ಹ ಸಾಧನೆ.

ಸಂಘಟಕನಿಗೆ ಪರಿಸ್ಥಿತಿ ಸವಾಲಾದಾಗ ಅವನ ಹಠ, ರಂಗಭೂಮಿಯ ವಿಷಯ ದಲ್ಲಿ ನಿಷ್ಠೆ, ಕಾಳಜಿ, ಆಸಕ್ತಿ ಇದ್ದರೆ ಮಾತ್ರ ಆ ಸವಾಲನ್ನು ಎದುರಿಸಿ ಬದುಕಬಹುದು. ಇಲ್ಲವಾದರೆ ಮೇಳದ ಸಂಚಾರವನ್ನು ಸ್ಥಗಿತಗೊಳಿಸುವುದೊಂದೇ ಏಕೈಕ ದಾರಿ. ಕಲಾವಿದರನ್ನು ಮೇಳದಿಂದ ಮೇಳಕ್ಕೆ ಆಕರ್ಷಿಸುವ ವ್ಯಾವಹಾರಿಕ ಪೈಪೋಟಿಯೂ ವಿಪರೀತವಾಗಿದ್ದ ಆ ಸಮಯದಲ್ಲಿ ಮಹಾಬಲ ಹೆಗಡೆಯವರ ಜಾಗಕ್ಕೆ ಬಂದ ಕಲಾವಿದ ಮಹಾಬಲ ಹೆಗಡೆಯವರಿಗೆ ಕೊಡುತ್ತಿದ್ದಷ್ಟೇ ಸಂಬಳ ತನಗೂ ಬೇಕೆಂದು ಕೇಳಿದನೇ ಹೊರತು ಯಜಮಾನನಿಗಾಗಲಿ, ಕಲಾರಸಿಕರಿಗಾಗಲಿ ಮಹಾಬಲ ಹೆಗಡೆ ಯವರ ಪ್ರಯೋಜನ ಕೊಡಲಿಲ್ಲ. ಇದು ಸ್ವಾಭಾವಿಕವಾಗಿ ಸಂಘಟಕನಿಗೆ ಪೇಚಿನ ಪ್ರಸಂಗ. ಆಗ ಸ್ವತಃ ಸಂಚಾಲಕರೇ ಗೆಜ್ಜೆಕಟ್ಟಿ ಬೆಳಗಿನವರೆಗೆ ರಂಗದಲ್ಲಿ ವಿಜೃಂಭಿಸ ಬೇಕಾಯಿತು. ಆ ಸಮಯದಲ್ಲಿ ಮಾಮೂಲಿಯಾಗಿ ನಡೆದು ಬಂದ ದಾರಿಗಿಂತ ಹೊಸತನ್ನು ಹುಡುಕುವ ಪ್ರಯತ್ನ ಶಂಭು ಹೆಗಡೆಯವರಿಂದ ನಡೆಯಿತು. ತಮ್ಮ ಪ್ರದರ್ಶನ ಹಾಗೂ ಮೇಳದ ಪ್ರಯೋಗ ಹೆಚ್ಚು ಆಕರ್ಷಕವಾಗಲು ಶಾಬ್ದಿಕ ಅಭಿನಯವನ್ನು ಸಾರ್ಥಕವಾಗಿ ಬಳಸತೊಡಗಿದರು. ಇದು ಉತ್ತರಕನ್ನಡದ ಅಭಿನಯ ದಲ್ಲಿ ಹಿಂದೆಯೂ ಇತ್ತು, ಮೂಡ್ಕಣಿ ನಾರಾಯಣ ಹೆಗಡೆಯವರು ವಿಸ್ಮಯ, ಸಂತೋಷ ಮುಂತಾದ ಭಾವಗಳನ್ನು ಶಾಬ್ದಿಕಾಭಿನಯದ ಮೂಲಕ ಅಭಿವ್ಯಕ್ತಿಸು ತ್ತಿದ್ದರಂತೆ. ಶಿವರಾಮ ಹೆಗಡೆಯವರೂ ತಮ್ಮ ಅಭಿನಯದಲ್ಲಿ ಅದನ್ನು ಪರಿಣಾಮ ಕಾರಿಯಾಗಿ ಬಳಸಿದ್ದರು. ಅನಂತರ ಇದನ್ನು ಅಷ್ಟೊಂದು ಆಕರ್ಷಕವಾಗಿ ಯಾರೂ ಮುಂದುವರಿಸಿ ಕೊಂಡು ಹೋಗದ್ದರಿಂದ ಉಂಟಾದ ಅಂತರವನ್ನು ಶಂಭು ಹೆಗಡೆಯವರು ಹೋಗಲಾಡಿಸಿದರು. ಇದು ಪ್ರೇಕ್ಷಕರಿಗೂ ತುಂಬ ಆಪ್ಯಾಯಮಾನವಾಯಿತು. ಇಡಗುಂಜಿ ಮೇಳವು ಹಿಂದಿಗಿಂತಲೂ ಹೆಚ್ಚು ಪ್ರಕಾಶಮಾನವಾಗಲು ಅನುವಾಯಿತು. ರಂಗಭೂಮಿಯ ತಂತ್ರವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಯಜಮಾನನು ತನ್ನ ಪ್ರದರ್ಶನದಲ್ಲಿ ಅಭಿನಯದೊಂದಿಗೆ ನೃತ್ಯ ಸಂಯೋಜಿಸಿ ಚಲಾವಣೆಯಿಂದ ದೂರವಿದ್ದ ಕಥೆಗಳನ್ನು ಪುನಃ ರಂಗಭೂಮಿಗೆ ತಂದು ಪ್ರದರ್ಶಿಸಿ, ಸಾಂಪ್ರದಾಯಿಕ ಪ್ರೇಕ್ಷಕರೂ ಒಪ್ಪುವ ರೀತಿ ಮಾಡಿದ್ದು ಈ ಕಾಲದ ವಿಶೇಷತೆ.

ಈ ದಶಕದಲ್ಲಿ ದಕ್ಷಿಣೋತ್ತರಕನ್ನಡ ಜಿಲ್ಲೆಯಾದ್ಯಂತ ಕಲಾವಿದರ ತಯಾರಿಯೇ ನಿಂತಿದ್ದುದರಿಂದ ಕಲಾವಿದರ ಕೊರತೆ ಬಹಳವಾಗಿತ್ತು, ಇದ್ದ ನಾಲ್ಕಾರು ಕಲಾವಿದರಿ ಗಾಗಿ ಮೇಳಗಳಲ್ಲೇ ತೀವ್ರ ಸ್ಪರ್ಧೆ. ಅದರಿಂದಾಗಿ ಪ್ರತಿವರ್ಷ ಮೇಳದ ತಿರುಗಾಟ ಮುಗಿದಮೇಲೆ ಮುಂದಿನ ವರ್ಷದ ಕಲಾವಿದರ ಸಂಘಟನೆ, ಸವಾರಿಯ ಚಿಂತೆ ತಲೆ ತಿನ್ನುವಷ್ಟು. ಇದರ ಜೊತೆಗೆ ಮೇಳಗಳನ್ನೇ ತಲೆಕೆಳಗು ಮಾಡುಷ್ಟರ ಮಟ್ಟಿಗೆ ಅತಿಥಿ ಕಲಾವಿದರ ಹಾವಳಿ. ಇದಕ್ಕೆಲ್ಲ ಅವಕಾಶ ಕೊಡದೆ ಇಡಗುಂಜಿ ಮೇಳವು ಈ ಎಲ್ಲ ಸಮಸ್ಯೆಗಳನ್ನೂ ಧೈರ್ಯವಾಗಿ ಎದುರಿಸಿ ಮುನ್ನಡೆಯುತ್ತಲಿತ್ತು, ಕಲೆಯ ಅಭಿವೃದ್ಧಿಯ ದೃಷ್ಟಿಯಿಂದ ಕಲಾವಿದನೇ ಮಂಡಳಿಯ ಯಜಮಾನನೂ ಆಗಿರುವಂತಹ ವೃತ್ತಿನಿರತ

ನಾಟಕಮಂಡಳಿ ಹಾಗೂ ಜನಪದ ಕಲಾಮೇಳಗಳಿಗೆ ಸಹಾಯಧನ ನೀಡುವ ಕರ್ನಾಟಕ ಸರಕಾರದ ಯೋಜನೆಯಡಿಯಲ್ಲಿ ಇಡಗುಂಜಿ ಮೇಳಕ್ಕೆ ೭೮–೭೯ರಲ್ಲಿ ೨೫ ಸಾವಿರ ರೂಪಾಯಿಗಳ ಸಹಾಯಧನ ಸಿಕ್ಕಿತು. ಯಕ್ಷಗಾನ ಮೇಳವೊಂದು ಇಂತಹ ಸಹಾಯಧನ ಪಡೆದದ್ದು ಅದೇ ಮೊದಲು. ಈ ಅವಧಿಯಲ್ಲಿ ಶಂಭು ಹೆಗಡೆಯವರು 'ಜಾನಪದ ಮತ್ತು ಯಕ್ಷಗಾನ ಅಕಾಡೆಮಿ'ಯ ಸದಸ್ಯರಾದರು. ಒಂದು ಮೇಳದ ಯಜಮಾನನಾಗಿ, ಕಲಾವಿದನಾಗಿ ಅಲ್ಲಿನ ಎಲ್ಲ ಸಮಸ್ಯೆಗಳನ್ನು ಬಲ್ಲ ಅವರಂತಹವರು ಸದಸ್ಯರಾದುದು ಅದೇ ಮೊದಲು. ಇದರಿಂದ ಅಕಾಡೆಮಿಗೆ ಯಕ್ಷಗಾನ ಕ್ಷೇತ್ರದಲ್ಲಿನ ಎಲ್ಲ ಸಮಸ್ಯೆಗಳ ಬಗೆಗೆ ಅರಿವು ಮಾಡಿಕೊಡಲು ಸಹಾಯವಾಯಿತು. ಇಡಗುಂಜಿ ಮೇಳವು ೧೯೮೩ರ ಅಕ್ಟೋಬರಿನಲ್ಲಿ 'ಬೆಹರಿನ್' ಕನ್ನಡ ಸಂಘದ ಆಶ್ರಯದಲ್ಲಿ ಎರಡು ಪ್ರದರ್ಶನಗಳನ್ನು ನೀಡುವುದರ ಮೂಲಕ, ಯಕ್ಷಗಾನ ವೃತ್ತಿಮೇಳವೊಂದು ಮೊಟ್ಟಮೊದಲಿಗೆ ವಿದೇಶ ಪ್ರವಾಸ ಮಾಡಿದ ದಾಖಲೆಯನ್ನು ಸ್ಥಾಪಿಸಿತು.

೧೯೩೪ ರಿಂದ ೧೯೮೪ರವರೆಗೆ ಅಂದರೆ ಅರ್ಧ ಶತಮಾನ ಕಾಲ ತನ್ನ ಕಲಾಪ್ರದರ್ಶನದಿಂದ ನಿರಂತರವಾಗಿ ಕಲಾರಸಿಕರ ಮನಸೂರೆಗೊಂಡಿದ್ದ ಈ ಮೇಳವು ೧೯೮೪ರಲ್ಲಿ ವ್ಯವಸಾಯೀ ಸ್ವರೂಪವನ್ನು ಸ್ಥಗಿತಗೊಳಿಸಿದೆ. ಈಗ ಅದು ಶಂಭು ಹೆಗಡೆಯವರ ಮಗ ಶಿವಾನಂದ ಹೆಗಡೆಯವರ ಮುಂದಾಳತ್ವದಲ್ಲಿ ಸಹೃದಯರ ಬೇಡಿಕೆಯ ಮೇರೆಗೆ ರಾಜ್ಯದ ನಾನಾಕಡೆ ಹಾಗೂ ದೇಶ–ವಿದೇಶಗಳಲ್ಲಿ ಕಾಲಮಿತಿಯ ಪ್ರದರ್ಶನ ನೀಡುತ್ತಲಿದೆ. ವಿಭಿನ್ನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಪರಿಸರದ ಯುರೋಪಿನ ಕೆಲವು ರಾಷ್ಟ್ರಗಳಲ್ಲಿ ಮತ್ತು ಇತ್ತೀಚೆಗೆ ಬಾಂಗ್ಲಾ ದೇಶದಲ್ಲಿ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದೆ. ಮೇಳವು ಸಾಕಷ್ಟು ಏಳು–ಬೀಳು ಗಳನ್ನು ಕಂಡಿದ್ದರೂ ವೃತ್ತಿಲಾಭಕ್ಕಾಗಿ ಕಲಾಘನತೆಯನ್ನು ಬಿಟ್ಟು ಕೊಡದೆ, ಸಂಪ್ರದಾಯ ನಿಷ್ಠೆಯನ್ನು ಉಳಿಸಿಕೊಂಡು ಅದು ಸಾಗಿಬಂದ ದಾರಿ ಯಕ್ಷಗಾನ ಚರಿತ್ರೆ ಯಲ್ಲಿ ಮರೆಯದ ಅಧ್ಯಾಯ.

ಕಲಾವಿದರು

ಯಕ್ಷಗಾನ ಬಯಲಾಟದ ಇತಿಹಾಸದಲ್ಲಿ ಉತ್ತರಕನ್ನಡದ ಮತ್ತು ಇಡಗುಂಜಿ ಮೇಳದ ವೈಶಿಷ್ಟ್ಯ ಮಹತ್ವಪೂರ್ಣವಾದದ್ದು. ಈ ಮೇಳವು ನೂರಾರು ಪ್ರಸಂಗ ಗಳನ್ನು ಪ್ರಯೋಗಿಸಿ, ಜನಸಾಮಾನ್ಯರಲ್ಲಿ ಕಲಾಭಿರುಚಿಯನ್ನು ಬೆಳೆಸಿ, ಉಳಿಸಿ ಪ್ರದರ್ಶನದ ಸೀಮೆಯನ್ನು ವಿಸ್ತರಿಸಿ, ಪರಂಪರೆ ಸಂಪ್ರದಾಯಗಳ ಪರಿಶುದ್ಧತೆಯನ್ನು ಕಾಯ್ದುಕೊಂಡು ನಿರಂತರ ಪ್ರಯೋಗಕ್ಕೆ ಪಕ್ಕಾಗಿಯೂ ಹೊಸತನ್ನು ಔಚಿತ್ಯದ ಮೇರೆ ಮೀರದೆ ಅಳವಡಿಸಿಕೊಂಡು, ತನ್ನ ಅರವತ್ತೈದು ವರ್ಷಗಳ ಬದುಕನ್ನು ಸಾರ್ಥಕ ಪಡಿಸಿಕೊಂಡಿದೆ. ಈ ಹಿರಿಮೆಗೆ ಮೇಳದ ಪಾಲಿನಷ್ಟೇ ಆ ಮೇಳದಲ್ಲಿ ಸೇವೆ ಸಲ್ಲಿಸಿದ ಕಲಾವಿದರ ವ್ಯಷ್ಟಿ ಪ್ರತಿಭೆಯೂ ಮುಖ್ಯವಾದುದಾಗಿದೆ. ಕಲಾವಿದರ ವ್ಯಷ್ಟಿ ಪ್ರತಿಭೆ, ಮೇಳದ ಸಮಷ್ಟಿಯಲ್ಲಿ ಅರಳಿ ಸಮಗ್ರ ಯಕ್ಷಗಾನ ಕಲಾಪರಂಪರೆ ಹೆಮ್ಮರವಾಗಿ

ಬೆಳೆಯಲು ಅವಕಾಶವಾಯಿತು. ಅಂಥ ಕಲಾವಿದರ ಕಲಾಜೀವನ ಮತ್ತು ಕಲಾ ಪರಿಣತಿಗಳ ಪರಿಚಯ ಮಾಡಹೊರಟರೆ ಅದೇ ಒಂದು ಹೆಬ್ಬೊತ್ತಿಗೆಯಾದೀತು; ಅದರಿಂದ ಈ ಭಾಗದಲ್ಲಿ ಇಡಗುಂಜಿ ಮೇಳದಲ್ಲಿ ಸೇವೆ ಸಲ್ಲಿಸಿದ ಕಲಾವಿದರ ಹೆಸರನ್ನು ಮಾತ್ರ ಪರಿಚಯಿಸಲಾಗಿದೆ.

ಶಿವರಾಮ ಹೆಗಡೆ : ಯಕ್ಷಗಾನ ರಂಗಭೂಮಿಯಲ್ಲಿ ಒಂದೇ ವ್ಯಕ್ತಿಯಿಂದ ವೈವಿಧ್ಯಮಯವಾದ ನೂರಾರು ಪಾತ್ರಗಳನ್ನು ಕಂಡು ಸಂತಸಪಟ್ಟು 'ನಟರೊಳ್ ನಟ ನೆಂದೊಡೆ ನೀನಲ್ತೆ' ಎಂದು ಮುಕ್ತ ಮನಸ್ಸಿನಿಂದ ಆಬಾಲವೃದ್ಧರಾದಿಯಾಗಿ ಎಲ್ಲ ಸ್ಥಳದ, ಎಲ್ಲ ಬಗೆಯ ಯಕ್ಷಗಾನ ಕಲಾಭಿಮಾನಿಗಳಿಂದ ಪ್ರಶಂಸೆಗೊಳಗಾದವರು ರಾಷ್ಟ್ರಪ್ರಶಸ್ತಿ ವಿಜೇತ, ನಟಸಾರ್ವಭೌಮ ಕೆರೆಮನೆ ಶಿವರಾಮ ಹೆಗಡೆಯವರು. ಮೊದಲ ಶ್ರೇಣಿಯ ನಟರೂ, ಉತ್ತಮ ಸಂಘಟಕರೂ, ಕಲಾಭಿಜ್ಞರೂ ಆದ ಇವರು ಈ ಕಲಾರಂಗದಲ್ಲಿ 'ಸರ್ವಾಂಗ ಸಮರ್ಥ'ರಾಗಿ ಕಂಗೊಳಿಸಿದರು. ೧೯೩೪ರಲ್ಲಿ ಶ್ರೀ ಇಡಗುಂಜಿ ಮಹಾಗಣಪತಿ ಪ್ರಾಸಾದಿಕ ಯಕ್ಷಗಾನ ಮಂಡಳಿಯನ್ನು ಸಂಸ್ಥಾಪಿಸಿ, ಈ ಪ್ರದೇಶದಲ್ಲಿ ಯಕ್ಷಗಾನಕ್ಕೆ ಭದ್ರಬುನಾದಿ ಹಾಕಿದರು.

ಮಹಾಭಾರತ, ಭಾಗವತ, ರಾಮಾಯಣ, ಪೌರಾಣಿಕ ಕಥೆಯನ್ನೊಳಗೊಂಡ ಯಾವುದೇ ಪ್ರಸಂಗದ, ವಿವಿಧಸ್ತರದ ನಾನಾ ರಸಭಾವ ಸಂವೇದನೆಯ ಪಾತ್ರಗಳನ್ನು ನಿರ್ವಹಿಸಿ, ಪ್ರೇಕ್ಷಕರ ಹೃದಯ ತಂತಿಯನ್ನು ಮೀಟಿ ರಸಸ್ಥಾನವನ್ನು ಎಬ್ಬಿಸುವುದರಲ್ಲಿ ಶಿವರಾಮ ಹೆಗಡೆಯವರು ಸಿದ್ಧಹಸ್ತರು. ನೋಡಿದಷ್ಟೂ ಮತ್ತೆ ಮತ್ತೆ ನೋಡಿ ಆಸ್ವಾದಿಸಬೇಕೆನ್ನುವಂತೆ ಮಾಡುವ ಅವರ ಲಯಪ್ರಭುತ್ವವು ನವ್ಯ ಭವ್ಯದಿಂದ, ಆಂಗಿಕಭಂಗಿ ಬಾಹುಗಳಲ್ಲಿ, ಕಣ್ಣಿನ ನೋಟ, ಲಾಸ್ಯಗಳಲ್ಲಿ ಧ್ವನಿಪಡೆಯುತ್ತಿದ್ದ ಬಗೆ, ಅನ್ಯಾದೃಶವಾಗಿರುತ್ತಿತ್ತು. ಪಾತ್ರಕ್ಕಿರುವ ಕಲಾಭಿವ್ಯಕ್ತಿಯ ಅವಕಾಶವನ್ನು ಅತ್ಯುತ್ತಮ ಮಟ್ಟದ ಜಾಣ್ಮೆ ಮತ್ತು ಔಚಿತ್ಯ ಪ್ರಜ್ಞೆಯಿಂದ ಬಳಸಿ ಬೆಳಗಿದರು. ಯಕ್ಷಗಾನದ ನೈಜ ಸತ್ವವನ್ನು ತಮ್ಮ ವೈವಿಧ್ಯಪೂರ್ಣವಾದ ನೃತ್ಯ, ಭಾವಾಭಿನಯ, ನಡೆಯ ನಿಲುವುಗಳಿಂದ ಸಮರ್ಥವಾಗಿ ಅರ್ಥವತ್ತಾಗಿಸಿದರು. ರಂಗಚಲನೆಯ ನಾನಾಭಂಗಿಗಳಲ್ಲಿ ಯಕ್ಷಗಾನಗುಣಶೈಲಿಯ ಸರ್ವ ಶ್ರೇಷ್ಠತೆಯನ್ನು ಮೆರೆಯಿಸಿ, ಕಲಾಭಿಮಾನಿಗಳ ಮನಸ್ಸಿನಲ್ಲಿ ಅವರ ಸೃಷ್ಟಿ ಅಚ್ಚೊತ್ತಿ ನಿಲ್ಲುವಂತೆ ಮಾಡಿದ ಯಕ್ಷಗಾನದ ಕೀರ್ತಿಕಳಶರು ಅವರು. ಉತ್ತರಕನ್ನಡ ಜಿಲ್ಲೆಯ ಬಯಲಾಟದ ಪುನರುಜ್ಜೀವನ ಮಾಡಿ ಅದಕ್ಕೊಂದು ಶಾಶ್ವತ ಸ್ಥಾನ ಕಲ್ಪಿಸುವುದರ ಮೂಲಕ ಜಿಲ್ಲೆಯ ಕಲಾಕ್ಷೇತ್ರದಲ್ಲಿ ನವಚರಿತ್ರೆಯ ನಿರ್ಮಾಣ ಮಾಡಿದ ಹಿರಿಮೆ ದಿವಂಗತ ಶಿವರಾಮ ಹೆಗಡೆಯವರದು. ಅವರ ಈ ಸಾಧನೆಯನ್ನು ಮೆಚ್ಚಿ ಅನೇಕ ಸಂಘ-ಸಂಸ್ಥೆಗಳು, ಕಲಾಪ್ರೇಮಿಗಳು ಹಾಗೂ ಸರಕಾರ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ.

ಮಹಾಬಲ ಹೆಗಡೆ : ಯಕ್ಷಗಾನದ 'ಮಹಾಬಲ'ರೆಂದೇ ಹೆಸರು ಪಡೆದು ಮೂರು ದಶಕಗಳಿಗೆ ಮಿಕ್ಕಿ ರಂಗದಲ್ಲಿ ಜೀವತುಂಬಿದ, ಹಿಂದಿನ ಪ್ರಸಿದ್ಧ ಪಾತ್ರಧಾರಿ

ಗಳೊಂದಿಗೆ ಗೆಜ್ಜೆಕಟ್ಟಿ ಹೆಜ್ಜೆ ಇಟ್ಟ ಕೆರೆಮನೆ ಮಹಾಬಲ ಹೆಗಡೆಯವರು, ಶಿವರಾಮ ಹೆಗಡೆಯವರ ಅಣ್ಣನ ಮಗ. ಅಭಿಜಾತ ಕಲಾವಿದರು. ವ್ಯಕ್ತಿಯಾಗಿ, ಕಲಾವಿದನಾಗಿ ಜನಮನ್ನಣೆ ಗಳಿಸಿರುವ ಇವರು ಅಸ್ಖಲಿತ ಮಾತು, ಭಾವ–ರಸಪುಷ್ಟಿಗನುಗುಣವಾದ ನೃತ್ಯ, ಅಭಿನಯ, ಮಧುರಕಂಠ, ಔಚಿತ್ಯಪ್ರಜ್ಞೆ, ಸೂಕ್ಷ್ಮಸಂವೇದನಾಶೀಲತೆ– ಇವುಗಳನ್ನು ಮೈಗೂಡಿಸಿಕೊಂಡು ಒಬ್ಬ ಸಮರ್ಥ ಕಲಾವಿದನೆನ್ನಿಸಿಕೊಂಡವರು. ನಿರಂತರ ಅಧ್ಯಯನ ಮತ್ತು ಚಿಂತನ ಇವರ ವೈಶಿಷ್ಟ್ಯ. ಸುಮಾರು ಎರಡು ದಶಕಗಳ ಕಾಲ ಕಲಾಭಿಮಾನಿಗಳಿಗೆ 'ಕುಮಾರ ಮಹಾಬಲ ಹೆಗಡೆ' ಎಂದೇ ಚಿರಪರಿಚಿತರಾಗಿದ್ದ ಅವರು ಕೆಲವು ವಿಶಿಷ್ಟ ಪಾತ್ರಗಳ ಮೂಲಕ ಅಪಾರ ಜನಪ್ರಿಯತೆಗಳಿಸಿದುದಲ್ಲದೆ ಅನನ್ಯರೆನಿಸಿಕೊಂಡರು.

ಸದಾ ಸಾಹಿತ್ಯಾಭ್ಯಾಸಿಯಾದ ಹೆಗಡೆಯವರು ಯಕ್ಷಗಾನ ಪ್ರಸಂಗಗಳಲ್ಲಿ ಬರುವ ಪಾತ್ರಗಳನ್ನು ಅಭಿಜಾತ ಸಾಹಿತ್ಯದಲ್ಲಿನ ಪಾತ್ರದೊಂದಿಗೆ ತೂಗಿ ನೋಡಿ ಒಂದು ನಿಲುಮೆಗೆ ಬಂದು ತಮ್ಮ ಪ್ರಯೋಗದಲ್ಲಿ ತರುವ ಕಲಾನಿಷ್ಠರು. ಬಣ್ಣ ಹಚ್ಚುವುದರಲ್ಲಿ, ವೇಷ ಹಾಕುವುದರಲ್ಲಿ, ತೊಡುಗೆ ತೊಡುವುದರಲ್ಲಿ ಎಲ್ಲದರಲ್ಲಿಯೂ ಅರ್ಥವನ್ನು ಕಂಡುಕೊಂಡವರು; ಹಿನ್ನೆಲೆಯನ್ನು ವಿವರಿಸಬಲ್ಲರು. ಆಟ ಕುಣಿಯುವುದು ಅವರಿಗೆ ಚಟವಲ್ಲ, ಅಥವಾ ಕಾಟಾಚಾರವೂ ಅಲ್ಲ. ಒಂದು ಚಿಕ್ಕ ಪಾತ್ರವೂ 'ಪರಿಪೂರ್ಣ'ವಾಗಲು ಸದಾ ಚಿಂತನ–ಮನನ–ಪ್ರಯೋಗ ಮಾಡುವವರಾದುದರಿಂದ ಅವರ ಕೆಲವು ಪಾತ್ರಗಳು ಇಂದಿಗೂ ಯಕ್ಷಗಾನ ಕಲೆಗೆ ಅಪೂರ್ವ ಕೊಡುಗೆಗಳಾಗಿವೆ. ಯಕ್ಷಗಾನ ಕಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಕುರಿತು ಚಿಂತಿಸುವ ಹೆಗಡೆಯವರು ಉತ್ತಮ ಭಾಗವತರು ಹಾಗೂ ಕಲಾವಿಮರ್ಶಕರೂ ಆಗಿದ್ದಾರೆ.

ಶಂಭು ಹೆಗಡೆ : ಯಕ್ಷಗಾನ ಕಲಾಕ್ಷೇತ್ರದಲ್ಲಿ ಸರ್ವಾಂಗೀಣ ಸೇವೆ ಸಲ್ಲಿಸುತ್ತಿರುವ ಶಂಭು ಹೆಗಡೆಯವರು ಶಿವರಾಮ ಹೆಗಡೆಯವರ ಹಿರಿಯ ಮಗ. ನಾಲ್ಕು ದಶಕಗಳ ಅನುಭವ, ಸಾಧನೆಗಳ ಮೂಲಕ ಜನಾದರಣೆಯೊಂದಿಗೆ ಕಲಾಸೇವೆಗೈಯ್ಯುತ್ತಿರುವ ಇವರು ಕಾರಣಾಂತರದಿಂದ ವ್ಯಾವಸಾಯಿಕ ತಿರುಗಾಟವನ್ನು ನಿಲ್ಲಿಸಿದ್ದ ಮೇಳವನ್ನು ಪುನಶ್ಚೇತನಗೊಳಿಸಿ, ಆಧುನಿಕವಾಗಿ ಸಂಘಟಿಸಿ, ಇಂದಿಗೂ ಅದರ ನಿರ್ದೇಶಕರಾಗಿ ಮೇಳವನ್ನು ಮುನ್ನಡೆಸುತ್ತಿದ್ದಾರೆ.

ಜಾಹಿರಾತಿನ ಅತಿ ಒತ್ತಡದ ಈ ದಿನಗಳಲ್ಲಿಯೂ ಸಾಂಪ್ರದಾಯಿಕ ಅಂಶ ಕಾಪಾಡಿಕೊಳ್ಳುತ್ತ ಆಂಗಿಕಾಭಿನಯಗಳಾದ ನೃತ್ಯ, ಹಸ್ತಾಭಿನಯ, ಮುಖಭಾವಗಳ ಏಕಕಾಲಿಕ ಮತ್ತು ಸಕಾಲಿಕ ನಿರ್ವಹಣೆಯೊಂದಿಗೆ ಪಾತ್ರಗಳನ್ನು ಸಾಕಾರಗೊಳಿಸುವ ಅವರ ಪರಿ ಪರಿಣಾಮಕಾರಿಯಾದದ್ದು. ಜನಪದ ಕುಣಿತದ ಸೊಗಸನ್ನು ಯಕ್ಷಗಾನದಲ್ಲಿ ಸಂಯೋಜಿಸಿ ನಾವೀನ್ಯವನ್ನು ತರುವ ನೈಪುಣ್ಯ ಅವರಿಗಿದೆ. ಪಾತ್ರಧಾರಿಯಾಗಿ ವ್ಯಾವಹಾರಿಕ ಹಾಗೂ ಅನುಭವ ಸಂಪನ್ನವಾದ ಮಾತುಗಳನ್ನು ಪೌರಾಣಿಕ ಆವರಣಕ್ಕೆ ಧಕ್ಕೆ ತಾರದಂತೆ ಆಡಬಲ್ಲವರು. ಉತ್ತಮ ವಾಗ್ಮಿಗಳೂ ಚಿಂತಕರೂ ಆದ

ಹೆಗಡೆಯವರು ಸಭೆ, ಸಮಾರಂಭ, ಗೋಷ್ಠಿಗಳಲ್ಲಿ ಯಕ್ಷಗಾನ ಕುರಿತು ಅಧಿಕಾರವಾಣಿಯಿಂದ ನಿರರ್ಗಳವಾಗಿ ಭಾಷಣ ಮಾಡಬಲ್ಲವರು.

ಒಟ್ಟಿನಲ್ಲಿ ಕಲಾವಿದನಾಗಿ ಶಂಭು ಹೆಗಡೆ ಗಮನಾರ್ಹ ಸ್ಥಾನ ಪಡೆದಿದ್ದಾರೆ. ಒಂದೇ ಪಾತ್ರವನ್ನು ಹಲವಾರು ಬಾರಿ ನೋಡಬೇಕೆನ್ನಿಸುವಷ್ಟು ಪಾತ್ರದಲ್ಲಿ ವೈವಿಧ್ಯ ಮತ್ತು ನಾವೀನ್ಯವನ್ನು ತುಂಬುವುದರೊಂದಿಗೆ ಪರಂಪರೆಗೆ ಸೃಜನಶೀಲ ಆಯಾಮವನ್ನು ಕೊಟ್ಟವರು. ಸಂಪ್ರದಾಯದ ಸತ್ವ, ಹೊಸ ಪ್ರಯೋಗಗಳ ಸಾಧ್ಯತೆಯನ್ನು ಅವಕಾಶ ಸಿಕ್ಕಿದಾಗ ಮೇಳೈಸಿ, ಸಾಂಪ್ರದಾಯಿಕ ಕಲಾವಂತಿಕೆಯ ಕಸುವನ್ನು, ಕಲಾತ್ಮಕ ಚೈತನ್ಯವನ್ನು ನೀಡಿದ ಅಪ್ಪಟ ಸ್ಪಂತಿಕೆಯನ್ನು ಪಡೆದ ಕಲಾವಿದರು.

ಗಜಾನನ ಹೆಗಡೆ : ವೈವಿಧ್ಯಮಯ ಪಾತ್ರಗಳಲ್ಲಿ ಕಾಣಿಸಿಕೊಂಡು, ತಮ್ಮತನವನ್ನು ಮೆರೆದು ಅರಳುತ್ತಲೇ ಬಾಡಿದ ಯಕ್ಷಗಾನ ಕಲಾಕುಸುಮ ಗಜಾನನ ಹೆಗಡೆಯವರು, ಶಿವರಾಮ ಹೆಗಡೆಯವರ ಕಿರಿಯ ಮಗ. ಅನತಿ ಕಾಲದಲ್ಲೇ ಉಜ್ವಲ ಕಲಾ ಪರಿಣತಿಯನ್ನು ಮೆರೆದು, ಇಡಗುಂಜಿ ಮೇಳದ, ಅಷ್ಟೇ ಅಲ್ಲ, ಉತ್ತರಕನ್ನಡ ಜಿಲ್ಲೆಯ ಸ್ತ್ರೀಪಾತ್ರದ ಅರಕೆಯನ್ನು ಪೂರೈಸಿ, ಕಲಾಭಿಮಾನಿಗಳಿಂದ 'ಯಕ್ಷಲೋಕದ ಕನ್ಯೆ' ಎಂದು ಪ್ರಸಿದ್ಧಿ ಪಡೆದವರು.

ಚೆಲುವಾದ ರೂಪು, ಚುರುಕಾದ ನಾಲಗೆ, ಚತುರ ಹೆಜ್ಜೆ, ಚಾಕಚಕ್ಯಚರ್ಯೆ ಇವೆಲ್ಲ ಅವರ ಕಲಾಸಿದ್ಧಿಗೆ ಪೋಷಕವಾಗಿ ಹದಿನೈದು ವರ್ಷಗಳಲ್ಲಿ ಎರಡು ಸಾವಿರಕ್ಕೂ ಮಿಕ್ಕಿ ಪ್ರದರ್ಶನಗಳನ್ನು ನೀಡಿ ಅವಿಸ್ಮರಣೀಯರಾದರು. ಮುದ್ದಾದ ವೇಷ, ಚುರಾಕಾದ ಸುಂದರ ಮನಮೋಹಕ ಅಭಿನಯ, ಹಿತಮಿತವಾದ ಆಶು ಸಂಭಾಷಣಾ ಚಾತುರ್ಯ, ನಯನ ಮನೋಹರ ಪದಗತಿ ಇವುಗಳೊಂದಿಗೆ ಹಾವಭಾವಗಳನ್ನು ಮೆರೆಯಿಸುವ ಸುಮನೋಹರ ಮುಖಾಭಿವ್ಯಕ್ತಿ ಅಂಗಿಕಾಭಿನಯ ದಲ್ಲಿ ನಾನಾ ಬಗೆಯ ಭಾವಪ್ರದರ್ಶನ ಈ ಎಲ್ಲವುಗಳಿಂದಾಗಿ ಅವರು ಯಕ್ಷಲೋಕದ ಕನ್ಯೆಯೇ ಆಗಿದ್ದರು.

ಶಿವಾನಂದ ಹೆಗಡೆ : ಈಗ ಇಡಗುಂಜಿ ಮೇಳವು ನೋಂದಾಯಿತ ಸಂಸ್ಥೆಯಾಗಿದ್ದು ಅದರ ಕಾರ್ಯದರ್ಶಿಯಾಗಿ ಶಂಭು ಹೆಗಡೆಯವರ ಮಗ ಶಿವಾನಂದ ಹೆಗಡೆ ಕಾರ್ಯನಿರ್ವಹಿಸುತ್ತಲಿದ್ದಾರೆ. ತಲೆಮಾರುಗಳಿಂದ ಬಂದ ಕಲಾಸಕ್ತಿಯನ್ನು ಉಳಿಸಿಕೊಂಡು, ಕಲಾವಿದರಾಗಿ, ಸಂಘಟಕರಾಗಿ ಮೇಳವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಹಿಮ್ಮೇಳ-ಭಾಗವತರು : ಯಕ್ಷಗಾನವು ಸಮಷ್ಟಿರೂಪದ ಸಮ್ಮಿಶ್ರ ಕಲೆ. ಇದರಲ್ಲಿ ಸಂಗೀತ, ಸಾಹಿತ್ಯ, ನೃತ್ಯ, ಚಿತ್ರಗಳ ಔಚಿತ್ಯಪೂರ್ಣವಾದ ಮೇಳವಿದೆ. ಇಲ್ಲಿರುವಷ್ಟು ಮೇಳಕ್ರಿಯೆ, ಇನ್ನಿತರ ಯಾವುದೇ ಜನಪದ ಕಲಾಪ್ರಕಾರದಲ್ಲಿ ಕಾಣಸಿಗುವುದು ದುರ್ಲಭ. ಈ ಕಲಾಸಮುಚ್ಚಯದ ಪ್ರದರ್ಶನ ನಿರ್ವಹಣೆಗೆ ಸಂಬಂಧಿಸಿದಂತೆ ಹಿಮ್ಮೇಳ ಮತ್ತು ಮುಮ್ಮೇಳ ಎಂಬ ಎರಡು ವಿಭಾಗಗಳಿವೆ. ಮುಮ್ಮೇಳಕ್ಕೆ ಚಾಲನೆ

ಕೊಡುವ ಹಿಮ್ಮೇಳ ಕಟ್ಟಡಕ್ಕೆ ಪಂಚಾಂಗವಿದ್ದಂತೆ. ಇದರಲ್ಲಿ ಭಾಗವತ, ಅವನ ಸಹಾಯಕ ಸಂಗೀತಗಾರ, ಮದ್ದಳೆಯವ, ಶ್ರುತಿ ಹಿಡಿಯುವವ ಮತ್ತು ಚಂಡೆ ಬಾರಿಸುವವರಿರುತ್ತಾರೆ. ಇವರಲ್ಲಿ ಭಾಗವತನು ಆಟದ ಕೇಂದ್ರ ಬಿಂದು. ಅದರಿಂದಲೇ ಯಕ್ಷಗಾನದ ಇನ್ನೊಂದು ಜನಜನಿತವಾದ ಹೆಸರು 'ಭಾಗವತರಾಟ.' ಅಂದರೆ ಯಕ್ಷಗಾನಕ್ಕೆ ಭಾಗವತನೇ ಸೂತ್ರಧಾರ ಮತ್ತು ನಿರ್ದೇಶಕ. ಅವನೇ ವೀಳ್ಯಸ್ವೀಕರಿಸಿ, ಪ್ರಸಂಗನಿರ್ಧರಿಸಿ, ಪಾತ್ರಹಂಚಿ, ಪ್ರಾರಂಭದಿಂದ ಕೊನೆಯವರೆಗಿದ್ದು ಹಾಡಿ, ಆಡಿಸಿ, ಮಂಗಳ ಮಾಡುವ, ಮೊದಲ ಪಾತ್ರಧಾರಿಯಾದುದರಿಂದ ಇಡೀ ಆಟಕ್ಕೆ ಸ್ವಾಭಾವಿಕ ವಾಗಿಯೇ 'ಭಾಗವತರಾಟ' ಎಂಬ ಹೆಸರು ಬಂದಿದೆ.

ಇಡಗುಂಜಿ ಮೇಳದ ಭಾಗವತರು : ಇಡಗುಂಜಿ ಮೇಳವು ಪ್ರಾರಂಭದಿಂದ ಇಲ್ಲಿಯವರೆಗೆ ಈ ಜಿಲ್ಲೆಯ ವಿಶಿಷ್ಟ ಸಂಪ್ರದಾಯ–ಶೈಲಿಯನ್ನು ಉಳಿಸಿ, ಬೆಳೆಸಿದ ಹಲವಾರು ಪ್ರಸಿದ್ಧ ಭಾಗವತರುಗಳಿಗೆ ನೆಲೆಯಾಗಿದೆ. ಇಡಗುಂಜಿ ಮೇಳದ ಸಂಘಟಕ ರಲ್ಲೊಬ್ಬರಾಗಿ, ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಮೇಳದ ಹಿರಿಯಣ್ಣನಾಗಿ ತಮ್ಮ ಕೊನೆಯುಸುರಿನತನಕ ಸೇವೆ ಸಲ್ಲಿಸಿದವರು. ದಿವಂಗತ ವೆಂಕಟ್ರಮಣ ಯಾಜಿ ಭಾಗವತರು. ಇವರ ಅನಂತರ ದಕ್ಷಿಣಕನ್ನಡದ ಸುಪ್ರಸಿದ್ಧ ಉಪ್ಪೂರ ನಾರ್ಣಪ್ಪಯ್ಯ ನವರು. ಮುಂದೆ ಕಡತೋಕಾ ಕೃಷ್ಣ ಭಾಗವತರು, ಗಣಪತಿ ಹೆಗಡೆ ಕೆರೆಮನೆ, ಜನಾರ್ದನ ಹೆಬ್ಬಾರ ನಾಗೂರ, ನರಸಿಂಹದಾಸರು ಮರವಂತೆ, ನಾಗೇಂದ್ರ ಭಟ್ಟ ಅಚ್ವೆ, ಕೆ. ಜಿ. ರಾಮರಾವ್ ಪುರಪ್ಪೆಮನೆ, ವಿಶ್ವನಾಥ ಭಾಗವತ ಚಾರ್ಗಲ್, ಸುಬ್ರಾಯ ಹೆಗಡೆ ಕಪ್ಪೆಕೆರೆ, ಗುರುರಾಜ ಮಾರ್ಪಳ್ಳಿ, ವಿಘ್ನೇಶ್ವರ ಸಿರ್ಸಿಮಕ್ಕಿ, ಶ್ರೀಧರ ಕರ್ಜಗಿ, ಬೈಲಾರ ಬಾಬು, ಮಂಜುನಾಥ ಭಟ್ಟ ಹೊಸ್ತೋಟ, ಮುಂತಾದವರು ಸೇವೆ ಸಲ್ಲಿಸಿದ್ದಾರೆ. ನೆಬ್ಬೂರು ನಾರಾಯಣ ಹೆಗಡೆಯವರು ಈಗ ಮಂಡಳಿಯಲ್ಲಿ ಭಾಗವತರಾಗಿದ್ದಾರೆ.

ಮದ್ದಳೆ ವಾದಕರು : ಪಾತ್ರಧಾರಿಗೆ ಹಾಗೂ ಭಾಗವತನಿಗೆ ಸಹಕಾರಿಯಾಗು ವಂತಹ ವಾದನ ಮದ್ದಳೆ. ಭಾಗವತನ ಬಲಭಾಗದಲ್ಲಿ ಕುಳಿತು ಮದ್ದಳೆವಾದಕ ಇದನ್ನು ನುಡಿಸುತ್ತಾನೆ. ಇದನ್ನು ನುಡಿಸುವವನಿಗೆ ರಸಭಾವ ಮತ್ತು ಕಥಾಭಾಗಗಳ ಅರಿವಿದ್ದಲ್ಲಿ ಕುಣಿತ, ಅಭಿನಯಗಳಿಗೆ ಇದರಷ್ಟು ಸೂಕ್ತಪೋಷಣೆ ಒದಗಿಸುವ ವಾದನ ಬೇರೊಂದಿಲ್ಲ. ಉತ್ತರಕನ್ನಡ ಶೈಲಿಯ ಸಾಂಪ್ರದಾಯಿಕ ನುಡಿತ, ಪೆಟ್ಟುಗಳನ್ನು ಬಲ್ಲ ಮದ್ದಳೆವಾದಕರು ಈ ಮೇಳದಲ್ಲಿ ಸೇವೆ ಸಲ್ಲಿಸಿ, ತಮ್ಮ ಪ್ರತಿಭೆಯನ್ನು ಮೆರೆಯಿಸುವುದ ರೊಂದಿಗೆ ಮುಮ್ಮೇಳಕ್ಕೂ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಮೇಳದಲ್ಲಿ ಸೇವೆ ಸಲ್ಲಿಸಿದ ಬಹುತೇಕ ಮದ್ದಳೆಗಾರರಿಗೆ ಚಂಡೆವಾದನವೂ ಕರತಲಾಮಲಕ.

ಇಡಗುಂಜಿ ಮೇಳದಲ್ಲಿದ್ದ ಮದ್ದಳೆವಾದಕರು : ಮದ್ದಳೆವಾದಕರಾಗಿ ಗುಣವಂತೆ ಕನ್ನಯ್ಯ ಭಂಡಾರಿ, ಕೃಷ್ಣಯಾಜಿ ಇಡಗುಂಜಿ, ಕೇಶವ ಭಂಡಾರಿ, ಗಜಾನನ ಭಂಡಾರಿ, ದತ್ತ ಭಟ್ಟ ಮಾಳ್ಕೋಡು, ದುರ್ಗಪ್ಪ ಗುಡಿಗಾರ, ಮಣ್ಣಿಗೆ ಗಣಪತಿ ಯಾಜಿ,

ದೇವರಾಯ ನಾಗೂರು, ನಾಗೇಶ ಭಂಡಾರಿ, ನಾರಾಯಣ ಹೆಗಡೆ ಕಿನ್ನೀರು, ಕರ್ಕಿ ಮಂಜುನಾಥ ಭಂಡಾರಿ, ರಾಮಚಂದ್ರ ಶಾನುಭಾಗ ಗೋಳಿಹೊಳೆ, ಪ್ರಭಾಕರ ಭಂಡಾರಿ, ಶಂಕರ ಭಾಗ್ವತ, ಸತ್ಯನಾರಾಯಣ ಭಂಡಾರಿ, ಸದಾಶಿವ ಹೆಗಡೆ ಮೊದಲಾದವರು ಸೇವೆ ಸಲ್ಲಿಸಿದ್ದಾರೆ.

ಚಂಡೆವಾದಕರು : ಚಂಡೆಯು ಮೂಲದಲ್ಲಿ ಯಕ್ಷಗಾನವಾದ್ಯವಲ್ಲ. ಉತ್ತರ ಕನ್ನಡದಲ್ಲಿ ಹಿಂದೆ ಚಂಡೆಯ ಬದಲಿಗೆ ''ತಾಸುಮಾರು'ಅನ್ನು ಬಳಸುತ್ತಿದ್ದರು. ತೆಂಕು ಬಡಗುಗಳ ಸಂಪರ್ಕವಾದ ಮೇಲೆ ಅಲ್ಲಿಂದ ಇತ್ತ ಕಡೆ ಚಂಡೆ ಆಮದಾದಂತೆ ಕಂಡುಬರುತ್ತದೆ. ಮೊದಮೊದಲು ವೀರ–ರೌದ್ರರಸಗಳಿಗೆ ಬಳಸಲು ಪ್ರಾರಂಭ ವಾಗಿ, ಅನಂತರ ಒಡ್ಡೋಲಗ ಮತ್ತು ಏರು ಪದ್ಯ–ಸನ್ನಿವೇಶಗಳಿಗೆ ಬಾರಿಸುವ ರೂಢಿ ಬೆಳೆದು ಬಂದಿದೆ. ಇಡಗುಂಜಿ ಮೇಳದಲ್ಲಿ ಚಂಡೆ ಶ್ರುತಿ ನಿಬದ್ಧವಾಗಿದ್ದು ನುಡಿತಗಳಲ್ಲಿ ವೈವಿಧ್ಯವನ್ನು ಮೆರೆಯುತ್ತ ನೃತ್ಯಾಭಿನಯಕ್ಕೆ ಅನುವು ಒದಗಿಸುವಲ್ಲಿ ಪಳಗಿದ ಕಸುಬು ದಾರರು ಇದ್ದಾರೆ.

ಇಡಗುಂಜಿ ಮೇಳದಲ್ಲಿದ್ದ ಚಂಡೆವಾದಕರು : ಗಣಪತಿ ಭಂಡಾರಿ, ಪರಮೇಶ್ವರ ಭಂಡಾರಿ, ಕೃಷ್ಣ ಯಾಜಿ, ಮಾವಿನಕೆರೆ ಗಣೇಶ, ಜಟ್ಟಯ್ಯ ಭಂಡಾರಿ, ಗಾವಳಿ ಚಂದು, ಶಾಂತಾರಾಂ ಭಂಡಾರಿ, ಗಜಾನನ ಭಂಡಾರಿ, ಕೊಗ್ಗ ಆಚಾರಿ, ಸತ್ಯನಾರಾಯಣ ಭಂಡಾರಿಗಳ ಸೇವೆ ಈ ಮೇಳಕ್ಕೆ ಸಂದಿದೆ.

ಪುರುಷ ವೇಷಧಾರಿಗಳು : ಪುರುಷ ವೇಷಧಾರಿಗಳಲ್ಲಿ ಕಿರೀಟಧಾರಿಗಳಾಗಿ, ಉದ್ದ ತೋಳಿನ ಅಂಗಿ ತೊಟ್ಟು, ಮುಖಕ್ಕೊಪ್ಪುವ ಮೀಸೆ ಇಟ್ಟು ಸರ್ವಾಭರಣ ಭೂಷಿತರಾದ ರಾಜವೇಷದವರು ಅಥವಾ ಕಿರೀಟ ವೇಷದವರು, ಕೆಂಪು ಬಣ್ಣದ ಮುಂಡಾಸ, ಕಪ್ಪು ಅಂಗಿ, ಸರ್ವಾಭರಣಗಳಿಂದ ಅಲಂಕೃತರಾದ ಖಳನಾಯಕ ವೇಷ ದವರು, ಚಿಕ್ಕದಾದ ಕಪ್ಪು ಬಣ್ಣದ ಮುಂಡಾಸ ಕಟ್ಟಿ, ಕೆಂಪು ಅಂಗಿ ತೊಟ್ಟು, ಮೀಸೆ ಇಲ್ಲದೆ ಇರುವ ಪುಂಡು ವೇಷದವರು, ಕೇವಲ ಸಿರಿಮುಡಿಯನ್ನು ಧರಿಸುವ ರಾಜರ್ಷಿ ಗಳು, ಮೈಗೆ ಸೊಪ್ಪು ಕಟ್ಟಿ, ಓರೆ ಮುಂಡಾಸು ಕಟ್ಟುವ ಕಿರಾತವೇಷದವರು, ಹೀಗೆ ಹತ್ತಾರು ಬಗೆಯ ವೇಷಧಾರಿಗಳಿದ್ದಾರೆ. ಸಾಮಾನ್ಯವಾಗಿ ಇಲ್ಲಿನ ವೇಷ– ಭೂಷಣ ಗಳ ಸಾಂಕೇತಿಕತೆ ಮತ್ತು ಪಾತ್ರಧಾರಿಯು ಭಾಗವತರೊಂದಿಗೆ ನಡೆಸುವ ಸಂಭಾಷಣೆ ಅಥವಾ ಪಾತ್ರಧಾರಿ ನೀಡುವ ಪೀಠಿಕೆಯಿಂದ ಯಾವ ವೇಷವೆಂಬುದನ್ನು ಪ್ರೇಕ್ಷಕ ಅರ್ಥ ಮಾಡಿಕೊಂಡು ಮುಂದಿನ ಕಥಾನಕಕ್ಕೆ ಸಿದ್ಧನಾಗುವುದು ವಿಶೇಷತೆ. ಈ ರೀತಿಯ ಒಂದು ಕಲಾ ಒಡಂಬಡಿಕೆ, ಕಲಾವಿದ ಮತ್ತು ಸಹೃದಯನ ನಡುವೆ ಏರ್ಪಟ್ಟಿರುತ್ತದೆ. ತಾಪಸರಾಗಿ ವನದಲ್ಲಿ ಅಲೆಯುತ್ತಿರುವ ರಾಮ–ಲಕ್ಷ್ಮಣರು ರಾಜಕುಮಾರರ ಉಡುಪಿನಲ್ಲೇ ಇದ್ದರೂ ಇಲ್ಲಿ ಅಭಾಸವಲ್ಲ. ಸಾಮಾನ್ಯವಾಗಿ ಪಾತ್ರಗಳ ಸ್ಥಾನ–ಮಾನ, ಪ್ರಾಯ, ಗುಣ, ಶೀಲ, ಸ್ವಭಾವಗಳು, ವೇಷ–ಭೂಷಣ ಗಳಿಂದಲೇ ತಿಳಿಯುತ್ತದೆ. ಒಬ್ಬ ವೇಷಧಾರಿಯಾಗುವಾಗ ಅವನಿಗೆ ಕುಣಿತ, ವೇಷ ಗಾರಿಕೆ, ಮಾತುಗಾರಿಕೆ,

ಪ್ರಸಂಗಾನುಭವ, ಈ ಎಲ್ಲ ಅಂಶಗಳಲ್ಲಿ ಗತಿಯಿದ್ದರೆ ಮಾತ್ರ ಅವನು ವೇಷಧಾರಿ ಎಂದು ಕರೆಸಿಕೊಳ್ಳುತ್ತಾನೆ. ಇದಕ್ಕೆ ಹಿರಿಯ ನಟರ ಪ್ರೋತ್ಸಾಹ, ತಿದ್ದುವ ಪ್ರವೃತ್ತಿ ಇದ್ದರೆ ಅನುಕೂಲ, ಈ ದೃಷ್ಟಿಯಿಂದ ಇಡಗುಂಜಿ ಮೇಳವು ಅನೇಕ ಯಕ್ಷಗಾನ ಕಲಾವಿದರ ಸಾಧನೆಯ ಗರಡಿಯಾಗಿದೆ. ಇಲ್ಲಿ ಸಾಮಾನ್ಯವಾಗಿ ಕೆರೆಮನೆ ಬಂಧುಗಳೇ ಪ್ರಧಾನ ಕಲಾವಿದರಾಗಿರುತ್ತಿದ್ದುದರಿಂದ ಅವರೆದುರಿಗೆ ರಂಗದಲ್ಲಿ ನಿಂತು ಆಕರ್ಷಕವಾಗಿ ಕೆಲಸ ಮಾಡುವುದೇ ಉತ್ತಮ ಸಾಧನೆ. ಅದರೊಂದಿಗೆ ಇಲ್ಲಿಯ ಹಿರಿಯನಟರು ಉತ್ಸಾಹಿಗಳಿಗೆ, ನಾಯಕ– ಖಳನಾಯಕ ಪಾತ್ರಗಳನ್ನು ಕೊಟ್ಟು ತರಬೇತಿ ನೀಡುವ ಕಲಾವಂತಿಕೆ ಇರುವವರಾದುದರಿಂದ ಈ ಗರಡಿಯಲ್ಲಿ ನೂರಾರು ಕಲಾವಿದರು ಆಶ್ರಯ ಮತ್ತು ಕಲಾ ತರಬೇತಿ ಪಡೆಯಲು ಸಾಧ್ಯವಾಗಿದ್ದುದಲ್ಲದೆ ಅವರಲ್ಲಿ ಕೆಲವರು ಮೊದಲ ಶ್ರೇಣಿಯ ನಟರಾಗಿ ಮೆರೆಯಲು ಅವಕಾಶವಾಯಿತು.

ಇವರಲ್ಲಿದೆ ದಿವಂಗತರುಗಳಾದ ಗಣಪ ಹೆಗಡೆ ಮಾಳಕೋಡು, ತಿಮ್ಮಣ್ಣ ಹೆಗಡೆ ಅಣ್ಣುಹಿತ್ಲು, ಶಂಭು ಶಾಸ್ತ್ರಿ, ಲಕ್ಷ್ಮಣ ಹೆಗಡೆ ಕೊಂಡದಕುಳಿ, ಮಂಜಯ್ಯ ಶೆಟ್ಟಿ ಕೊಗ್ಗ, ವಿಷ್ಣು ಹೊಳೆಗದ್ದೆ, ವೆಂಕಟರಾವ್ ಪಾಂಡೇಶ್ವರ, ಸುಬ್ರಾಯ ಶೆಟ್ಟಿ ಬರ್ನಮಲೆ, ಹುಲಿಮನೆ ಪರಮೇಶ್ವರ ಶಾಸ್ತ್ರಿ, ಸುಬ್ರಾಯ ಭಟ್ಟ ನವಿಲುಗೋಣ, ಹನುಮಂತ ಶೆಟ್ಟಿ, ಗೋವಿಂದ ಶೇರೂಗಾರ, ಗೋಪಾಲ ಆಚಾರಿ, ನಾಗೇಂದ್ರ ಉಪ್ಪುಂದ, ಲಕ್ಷ್ಮಣ, ಉಮೇಶ, ಗಣೇಶ ಉಪ್ಪುಂದ, ಕೃಷ್ಣ ಭಂಢಾರಿ, ಗಣೇಶ ಹೆಬ್ಬಾರ, ಕೃಷ್ಣರಾಯ ಅಡಿಗ, ಮಹೇಶ, ಚಂದ್ರ ಮುಂತಾದವರು ಸ್ಮರಣಾರ್ಹರು, ಅನಂತ ಹೆಗಡೆ ಕೊಳಗಿ, ಅರ್ಜುನ ಜಲವಳ್ಳಿ, ಅಂಬಾತನಯ, ಕೃಷ್ಣ ಯಾಜಿ, ಕೃಷ್ಣ ಯಾಜಿ ಬಳ್ಕೂರು, ಕೃಷ್ಣಮೂರ್ತಿ, ಗಜಾನನ ಐನ್ಬೈಲ್, ಕುಮಾರ ಗಣೇಶ, ಗಣೇಶ ಭಟ್ಟ, ಗಣೇಶ ಭಟ್ಟ ನೇವಣಿ, ಗಣಪತಿ ಯಾಜಿ, ಜಿ. ಎಸ್. ಹೆಗಡೆ ದಂಟಕಲ್, ಗುರುರಾಜ ಭಟ್ಟ, ಜಗನ್ನಾಥ ಶೆಟ್ಟಿ ನಗರ, ತಿಮ್ಮಣ್ಣ ಯಾಜಿ ಮಣ್ಣಿಗೆ, ತಿಮ್ಮಪ್ಪ ಶಿರಳಗಿ, ದೇವರು ಹೆಗಡೆ ಮೂರೂರು, ನರಸಿಂಹ ಭಟ್ಟ ಯಲ್ಲಾಪುರ, ನರಸಿಂಹ ಹೆಗಡೆ ಕೆರೆಮನೆ, ನರಸಿಂಹ ಪೇತ್ರಿ, ನಾರಾಯಣ ಹೆಗಡೆ ಗೋಡೆ, ನಾಗಪ್ಪ ಗುಣವಂತೆ, ನಾಗೇಂದ್ರ, ಪರಮೇಶ್ವರ ಹೆಬ್ಬಾರ, ಪರಮೇಶ್ವರ ಯಾಜಿ, ಪ್ರಭಾಕರ ಕುಂಜಿಬೆಟ್ಟು, ಬಾಬು ಯಾಜಿ ಬಳ್ಕೂರು, ಎ. ಎಚ್. ಗೌಡ, ಮಂಜುನಾಥ ಹೆಗಡೆ, ಮಹಾಬಲೇಶ್ವರ ಹೆಗಡೆ, ಮಹದೇವ ಹೆಗಡೆ, ಮೂರ್ತಿ, ರಾಮ ಹೆಗಡೆ, ರಾಧಾಕೃಷ್ಣ ಭಟ್ಟ, ರಾಮಚಂದ್ರ ಯಾಜಿ, ಕುಮಾರ ರಾಮಚಂದ್ರ, ರಾಮ ಹೆಗಡೆ, ರಾಮಚಂದ್ರ ಹೆಗಡೆ ಚಿಟ್ಟಾಣಿ, ರಾಮಚಂದ್ರ ಶಾನುಭಾಗ, ಲಕ್ಷ್ಮೀನಾರಾಯಣ ಹೆಗಡೆ, ಲಕ್ಮಣ, ವಾಸುದೇವ ಅಡಿಗ, ವಿಷ್ಣು ಭಟ್ಟ, ಎಕ್ಟರ್ ಜೋಶಿ, ವಿಷ್ಣು ಆಚಾರಿ, ವೆಂಕಟಾಚಲ ಭಟ್ಟ, ವೆಂಕಟೇಶ ರಾವ್, ವೆಂಕಟ್ರಮಣಯ್ಯ, ಶಂಕರನಾರಾಯಣ ಸಾಮಗ, ಶಿವರಾಮ ಹೆಗಡೆ, ಶ್ಯಾಮ, ಶಿವರಾಮ, ಶ್ರೀಧರ ಭಟ್ಟ ಗೋಳೀಮಠ, ಶ್ರೀಧರ ಗೀಜಗಾರು, ಹಾಲಾಡಿ ಕೃಷ್ಣ, ಪದ್ಯ ಬೇಗಾರು, ಕೊಪ್ಪಟೆ ಮುತ್ತು ಮಳಲಿ ಶೀನಯ್ಯ,

ಶಿವರಾಮ ಅರಾಟೆ, ರಾಮಚಂದ್ರ ಜನಸಾಲೆ, ಲಕ್ಷ್ಮಣ ಗೌಡ, ಕೃಷ್ಣ ಯಾಜಿ, ಅಡಿಕೆ ಶೀನಯ್ಯ, ಶಿವಾನಂದ ಹೆಗಡೆ ಕೆರೆಮನೆ, ಇವರೆಲ್ಲರ ಪ್ರತಿಭೆ ಈ ಮಂಡಳಿಯಲ್ಲಿ ಮೆರೆದಿದೆ.

ಸ್ತ್ರೀ ವೇಷದವರು : ಯಕ್ಷಗಾನ ಪ್ರಸಂಗ ಪ್ರಯೋಗದಲ್ಲಿ ಸ್ತ್ರೀಪಾತ್ರಕ್ಕೆ ಹೇರಳವಾದ ಅವಕಾಶವಿದ್ದರೂ ಯಕ್ಷಗಾನ ಮೇಳಗಳಲ್ಲಿ ಹಿಂದೆ ಸ್ತ್ರೀಯರಿಗೆ ಎಂದೂ ಅವಕಾಶವಿದ್ದಿಲ್ಲ. ಸ್ತ್ರೀಪಾತ್ರ ನಿರ್ವಹಿಸುವವರು ಪುರುಷರು. ಇತ್ತಿತ್ತಲಾಗಿ ಮಕ್ಕಳ ಮೇಳಗಳಲ್ಲಿ ಬಾಲಿಕೆಯರು ತರಬೇತಿ ಪಡೆದು ಪುರುಷರಂತೆ ಉತ್ತಮ ಪ್ರದರ್ಶನಗಳನ್ನು ನೀಡುತ್ತಲಿದ್ದಾರೆ. ಶ್ರೀಮತಿ ಮಾರ್ಥಾ ಈ ದಿಸೆಯಲ್ಲಿ ಗಮನಾರ್ಹ ಮತ್ತು ಪ್ರಶಂಸಾರ್ಹ ಸಾಧನೆಮಾಡಿ ತೋರಿಸಿದ್ದಾರೆ. ಸ್ತ್ರೀವೇಷದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಮುಖ್ಯ ಸ್ತ್ರೀವೇಷ, ಸಖೀವೇಷ ಮತ್ತು ಮುಖೀವೇಷ. ಸಭಾಲಕ್ಷಣದಲ್ಲಿ ವಿಧವಿಧವಾದ ನರ್ತನ ಮಾಡುವವರು ಸಖಿ ಮತ್ತು ಮುಖೀವೇಷಗಳು. ಇವುಗಳನ್ನು ನಿತ್ಯ ಸ್ತ್ರೀವೇಷಗಳೆಂದೂ ಕರೆಯುತ್ತಾರೆ. ಯಕ್ಷಗಾನದ ಪುರುಷವೇಷದೊಂದಿಗೆ ಸ್ತ್ರೀವೇಷವನ್ನು ಹೋಲಿಸಿ ನೋಡಿದಾಗ, ಇದು ತುಂಬ ಬಡಕಲಾಗಿ ಕಾಣುತ್ತದೆ. ಈ ದಿಸೆಯಲ್ಲಿ ಇನ್ನೂ ಕಲಾತ್ಮಕ ಸುಧಾರಣೆಗಳಾಗಬೇಕಾಗಿದೆ.

ಉತ್ತರಕನ್ನಡ ಜಿಲ್ಲೆಯು ಯಕ್ಷಗಾನ ಕಲೆಗೆ ಪುರುಷ ವೇಷದವರನ್ನು ನೀಡಿದಷ್ಟು ಸ್ತ್ರೀವೇಷದವರನ್ನು ನೀಡಿಲ್ಲ. ಹಿಂದಿನಿಂದಲೂ ಈ ಜಿಲ್ಲೆಯಲ್ಲಿ ಸ್ತ್ರೀವೇಷಧಾರಿಗಳ ಕೊರತೆ ಇದ್ದದ್ದೆ. ಇದರ ಪರಿಣಾಮ ಮತ್ತು ಕಲಾತ್ಮಕ ನಷ್ಟವನ್ನು ಇಡಗುಂಜಿ ಮೇಳವು ಚನ್ನಾಗಿ ಅನುಭವಿಸಿದೆ. ಈ ಮೇಳದಲ್ಲಿ ಸೇವೆ ಸಲ್ಲಿಸಿದ ಪಾತ್ರಧಾರಿಗಳು: ಗಜಾನನ ಹೆಗಡೆ ಕೆರೆಮನೆ, ಕೊಕ್ಕರ್ಣೆ ನರಸಿಂಹ, ಹಂದಾಡಿ ಮಹಾಬಲ ಶೆಟ್ಟಿ, ಮೂಡ್ಕಣಿ ವಾಸು, ಲಕ್ಷ್ಮಣ ನಾಯ್ಕ, ಇವರೆಲ್ಲ ಸ್ಮರಣಾರ್ಹರು. ಅಣ್ಣಯ್ಯ ಹೆಗಡೆ ಮೂರೂರು, ಅಶೋಕ ಭಟ್ಟ, ಈಶ್ವರ ಗೌಡ, ಕೆ. ಈಶ್ವರ ಭಟ್ಟ, ಕೃಷ್ಣ ಕುಲಾಲ, ಕೃಷ್ಣ ಮೋಳಹಳ್ಳಿ, ಕೃಷ್ಣ ಭಟ್ಟ ಬಿಣಗಿ, ಗಜಾನನ ಭಂಡಾರಿ, ಕುಮಾರ ಜೋಗ, ತಮ್ಮಣ್ಣ ಹೆಗಡೆ, ಮಲ್ಲಗದ್ದೆ ಗಣೇಶ ಹೆಗಡೆ, ದತ್ತ ಹೆಗಡೆ ಕಲ್ಮನೆ, ದಯಾನಂದ ನಾಗೂರು, ಕುಮಾರ ನರಸಿಂಹ, ನರಹರಿ ಹೆಗಡೆ, ನಾರಾಯಣರಾವ್ ವಂಡ್ಸೆ, ನಾರಾಯಣ ಅಂಬಾಗಿಲು, ಪದ್ಮನಾಭ ಬೇಗಾರ, ಭಾಸ್ಕರ ಜೋಶಿ, ಮಹೇಶ್ ಅಡಿಗ, ಮಂಜು ನಾಯ್ಕ ಅರಾಟೆ, ಮಂಜುನಾಥ ಶಿರಳಗಿ, ಮಂಟಪ ಪ್ರಭಾಕರ ಉಪಾಧ್ಯಾಯ, ಮಾಧವ ಅಡಿಗ ಗೋಕರ್ಣ, ವೆಂಕಟ್ರಮಣ ಹೆರಂಜಾಲ, ಶ್ರೀಧರ ಷಡಕ್ಷರಿ, ಸರ್ವೇಶ್ವರ ಭಟ್ಟ, ಸೀತಾರಾಮ ಉಳವಿ, ಸುಬ್ರಾಯ ಹೆಗಡೆ ಕೊಡಗಿಪಾಲು, ಸುಬ್ಬಣ್ಣ ಹೆರಂಜಾಲ, ಹೊನ್ನಪ್ಪ ಗುನಗ ಗೋಕರ್ಣ, ಮಾಧವ ಪಟಗಾರ, ನಾಗೂರು ಗಣೇಶ ಹೆಬ್ಬಾರ, ಕೃಷ್ಣ ಮಾರಳಿ, ಅಜರಿ ಗೋಪಾಲ, ಅಮ್ಮಿನಳ್ಳಿ ರಾಜು ಮುಂತಾದವರು.

ಹಾಸ್ಯಗಾರರು ಮತ್ತು ಬಣ್ಣದ ವೇಷದವರು : ಯಕ್ಷಗಾನ ಪ್ರದರ್ಶನದಲ್ಲಿ ಹಾಸ್ಯಗಾರನ ಸ್ಥಾನ ಮತ್ತು ಪಾತ್ರ ತುಂಬ ಜವಾಬ್ದಾರಿಯದು. ಸಖ, ಮಂತ್ರಿ, ಚಾರಕ,

ಕಾವಲುಗಾರ, ಒಟ್ಟಿನಲ್ಲಿ ಅವಶ್ಯ ಬಿದ್ದಾಗ ಯಾವ ಪಾತ್ರವನ್ನಾದರೂ ನಿಭಾಯಿಸುವ ಸಾಮರ್ಥ್ಯ ಇವನದು. ಇಡೀ ರಾತ್ರಿ ನಡೆಯುವ ಪ್ರಸಂಗ ಪ್ರಯೋಗದಲ್ಲಿ ನಾನಾ ವಿಧದ ಪ್ರೇಕ್ಷಕರಿಗೆ ಬೇಸರ ಬರದಂತೆ, ಆಖ್ಯಾನದ ರಸಾವರಣಕ್ಕೆ ಭಂಗ ಬಾರದಂತೆ ನಗೆಯ ಹೊನಲನ್ನು ಹರಿಯಿಸಿ, ಉಲ್ಲಾಸ ಉಕ್ಕಿಸಿ, ಚಿತ್ರ ವಿಚಿತ್ರ ಕುಣಿತಗಳು, ವೇಷ ಭೂಷಣಗಳು, ಆಶುಭಾಷಣಚಾತುರ್ಯ, ಪ್ರತ್ಯುತ್ಪನ್ನಮತಿತ್ವದ ಹಾಸ್ಯದ ಚಟಾಕಿ ಗಳಿಂದೊಡಗೂಡಿದ ಹದವರಿತ ಮಾತುಗಾರಿಕೆಯ ಪ್ರತಿಭೆ ಹಾಸ್ಯಗಾರನದು. ಇಡಗುಂಜಿ ಮೇಳದಲ್ಲಿ ಇಂತಹ ಪ್ರತಿಭೆಯನ್ನು ಮೆರೆದವರೆಂದರೆ : ಎಲವಳ್ಳಿ ವಿನಾಯಕ ಭಟ್ಟ, ಈಶ್ವರ ಹೆಗಡೆ ಮೂರೂರು, ಗಣಪತಿ ಯಾಜಿ ಮಾವಿನಕೆರೆ, ಗಣಪತಿ ಹೆಗಡೆ ಸಾಲ್ಕೋಡು, ವೀರಭದ್ರ ಭಂಡಾರಿ, ಕುಂಜಾಲು ರಾಮಕೃಷ್ಣ ಮತ್ತು ಧಾರೇಶ್ವರ ಸುಬ್ಬ.

ಯಕ್ಷಗಾನ ಕಲೆಯ ಅದ್ಭುತ ಬಣ್ಣಗಾರಿಕೆಗೆ ಜ್ವಲಂತ ಸಾಕ್ಷಿಯಾದುದು ಬಣ್ಣದವೇಷ. ಭಯಾನಕ ವಾತಾವರಣ ನಿರ್ಮಾಣಕ್ಕಾಗಿ ರೂಪಿಸಿದ ಇಲ್ಲಿನ ಕಲಾತ್ಮಕ ವರ್ಣಸಂಯೋಜನೆ, ವೇಷ-ಭೂಷಣಗಳು, ವೈವಿಧ್ಯಮಯವಾಗಿ ಕುಣಿದು ಕುಪ್ಪಳಿಸಿ ಪ್ರೇಕ್ಷಕನಲ್ಲಿ ರಸರೋಮಾಂಚನಗೊಳಿಸುವ ರುದ್ರರಮಣೀಯ ದೃಶ್ಯ ಹಾಗೂ ಪರಿಣಾಮ ಅನನ್ಯ ಮತ್ತು ಪ್ರಗಲ್ಭವಾದುದು. ಈ ಅದ್ಭುತ ಕಲಾಸೃಷ್ಟಿ ತೆಂಕು ಬಡಗಿನಷ್ಟು ಪರಿಣಾಮಕಾರಿಯಾಗಿ ಉತ್ತರಕನ್ನಡದಲ್ಲಿಲ್ಲ. ಇಡಗುಂಜಿ ಮೇಳದಲ್ಲಿ ಜಲವಳ್ಳಿ ಹನುಮಂತ ಶೆಟ್ಟಿ, ಜಲವಳ್ಳಿ ಕುಷ್ಟ, ಜಲವಳ್ಳಿ ಗಣಪಯ್ಯ ಶೆಟ್ಟಿ ಮುಂತಾದವರು ಸೇವೆ ಸಲ್ಲಿಸಿದ್ದಾರೆ.

ಅತಿಥಿ ಕಲಾವಿದರು : ಯಕ್ಷಗಾನ ರಂಗದಿಂದ ನಿವೃತ್ತಿಯಾದವರು ಮತ್ತು ಈಗ ರಂಗದಲ್ಲಿ ಖಾಯಂ ಕಲಾವಿದರಾಗಿ ಇರಲಾಗದ ಪ್ರತಿಭಾವಂತರು, ಆಗಾಗ ಮೇಳದ ಅಥವಾ ಪ್ರೇಕ್ಷಕರ ಆಹ್ವಾನದ ಮೇರೆಗೆ ಬಂದು ತಮ್ಮ ಕಲಾವೈಭವ, ಮೆರೆಸುವ ವರನ್ನು ಅತಿಥಿ ಕಲಾವಿದರು ಎಂದು ಕರೆಯುವುದು ವಾಡಿಕೆ. ಕೆಲವೊಮ್ಮೆ ಉತ್ತಮ ಜೋಡಿವೇಷಗಳಿಗಾಗಿಯೂ ಅತಿಥಿ ಕಲಾವಿದರನ್ನು ಆಹ್ವಾನಿಸುವ ವ್ಯವಹಾರವೂ ಇದೆ. ಮೇಳದ ಸಂಘಟನೆ ಮತ್ತು ಸುರಕ್ಷಿತತೆಯ ದೃಷ್ಟಿಯಿಂದ ಅತಿಥಿ ಕಲಾವಿದರ ಆಹ್ವಾನ ದೊಡ್ಡ ಸಮಸ್ಯೆಯಾದರೂ ಹಳಬರ ಕಲಾವೈಭವ ಮತ್ತು ಪ್ರತಿಭೆಯನ್ನು ನೋಡಬೇಕಾದರೆ ಅತಿಥಿಯಾಗಿಯೇ ಸಾಧ್ಯ. ಮೇಳದ ಕಿರಿಯರಿಗೆ ಮಾರ್ಗದರ್ಶನಕ್ಕೆ ಒಳ್ಳೆಯ ಅವಕಾಶ, ಪ್ರೇಕ್ಷಕರಿಗೆ ಕಲಾದೃಷ್ಟಿಯಿಂದ ಉತ್ತಮ ಪ್ರದರ್ಶನವನ್ನು ಅನುಭವಿಸುವ ಸನ್ನಿವೇಶ ಇದರಿಂದ ಲಭ್ಯವಾಗುತ್ತದೆ. ಹಾರಾಡಿ ಕುಷ್ಟ ಗಾಣಿಗ, ವಿ. ಟಿ. ಹೆಗಡೆ, ಪಾತಾಳ ವೆಂಕಟ್ರಮಣ ಭಟ್ಟ, ಮಳಗಿಮನೆ ರಾಮಕೃಷ್ಣ ಹೆಗಡೆ, ಪಿ. ವಿ. ಹಾಸ್ಯಗಾರ, ಚಂದ್ರಶೇಖರ ಧಾಮ್ಲೆ, ಗಣಪತಿ ಹೆಗಡೆ, ಹಸ್ರಗೋಡು ಲಕ್ಷ್ಮೀ ನಾರಾಯಣ ಹೆಗಡೆ, ಡಾ. ಪದ್ಮನಾಭಯ್ಯ ಹೈಗುಂದ, ಕೆ.ಜಿ. ನಾರಾಯಣ, ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ಎಂ. ಎ. ಹೆಗಡೆ, ಕಡತೋಕಾ

ಮಂಜುನಾಥ ಭಾಗ್ವತ, ಮುಂತಾದವರು ಇಡಗುಂಜಿ ಮೇಳದಲ್ಲಿ ಅತಿಥಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ.

ವ್ಯವಸ್ಥಾಪಕರು : ಯಕ್ಷಗಾನ ಮೇಳದಲ್ಲಿ ವ್ಯವಸ್ಥಾಪಕ ಹುದ್ದೆ ತುಂಬ ಜವಾಬ್ದಾರಿಯುತವಾದುದು. ಪ್ರತಿದಿನ ಒಂದೂರಿಂದ ಇನ್ನೊಂದೂರಿಗೆ ಮೇಳವನ್ನು ಸಾಗಿಸುವದು, ಆ ಊರಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳ ಅರಿವು ಪಡೆಯುವುದು, ಕಾರ್ಯಕ್ರಮ ನಿಶ್ಚಯಿಸುವುದು, ಇಡೀರಾತ್ರಿ ನಿದ್ದೆಗೆಟ್ಟ ಕಲಾವಿದರನ್ನು ಸಂಭಾಳಿಸಿಕೊಂಡು ಹೋಗುವದು, ಪ್ರದರ್ಶನ ಮತ್ತು ಲಾಭಹಾನಿಯ ಸಂಪೂರ್ಣ ಜವಾಬ್ದಾರಿ, ಈ ಎಲ್ಲವುಗಳಿಂದಾಗಿ ಯಕ್ಷಗಾನ ಮೇಳದ ವ್ಯವಸ್ಥಾಪಕನು ಹಗ್ಗದ ಮೇಲೆ ಕಸರತ್ತು ಮಾಡುವವನಾಗಿರುತ್ತಾನೆ. ಕೆಲವೊಮ್ಮೆ ಯಜಮಾನ ಮತ್ತು ವ್ಯವಸ್ಥಾಪಕ ಬೇರೆಯಾಗಿರುವಾಗ ಈ ಜವಾಬ್ದಾರಿಗಳೆಲ್ಲ ಹಂಚಿ ಹೋಗಿ ಸುಲಭವಾಗಿರುತ್ತದೆ. ಇಡಗುಂಜಿ ಮೇಳದಲ್ಲಿ ಪ್ರಧಾನ ಕಲಾವಿದ ಮತ್ತು ವ್ಯವಸ್ಥಾಪಕ ಒಬ್ಬನೇ ಆಗಿರುವುದರಿಂದ ಕಲಾತ್ಮಕವಾಗಿ ಉಪಯುಕ್ತವಾದುದಾದರೂ ವ್ಯಾವ ಹಾರಿಕವಾಗಿ ತುಂಬ ತ್ರಾಸದಾಯಕವಾದದ್ದು. ಆದರಿಂದ ಪುನಸ್ಸಂಘಟನೆಯಾದ ಮೇಲೆ ವ್ಯವಸ್ಥಾಪಕ ಹುದ್ದೆ ಜಾರಿಗೆ ಬಂದು ಯಜಮಾನರಿಗೆ ಸಹಾಯವಾಯಿತು.

ಇಡಗುಂಜಿ ಮೇಳದಲ್ಲಿ ವ್ಯವಸ್ಥಾಪಕರಾಗಿ ಕೆರೆಮನೆ ರಾಮಕೃಷ್ಣ ಹೆಗಡೆ, ಕಲಭಾಗ ಗೋವಿಂದ ಹೆಗಡೆ, ಅಂಬಾತನಯ ಮುದ್ರಾಡಿ, ಅಡಿಕೆ ಶೀನಯ್ಯ, ನಾರಾಯಣ ಭಟ್ಟರು ಮೇಲಿನಗಂಟಿಗೆ, ಎಂ. ಆರ್. ಹೆಗಡೆ, ವೀರಶೇಖರ ಮಾಸ್ತರ್, ಕೇಶವ ಶೆಟ್ಟಿಗಾರ್, ಭೋಜ ಶೆಟ್ಟಿ, ಶ್ಯಾಮ ಭಾಗವತ ಅಮಾಸೆಬೈಲು ಮುಂತಾದವರು ಸೇವೆ ಸಲ್ಲಿಸಿದ್ದಾರೆ. ಇಡಗುಂಜಿ ಮೇಳವು ಪ್ರತಿಭಾನ್ವಿತ ಕಲಾವಿದರ ತಾಯ್ಮನೆಯಾಗಿದ್ದಿತಲ್ಲದೆ, ಆಯಾ ಕಲಾವಿದರು ಒಟ್ಟು ಕಲೆಯ ವಿಕಾಸ ಹಾಗೂ ಪ್ರಗತಿಗೆ ನೀಡಿದ ವೈಯಕ್ತಿಕ ಕೊಡುಗೆಗಳ ಸ್ಫೂರ್ತಿ ಕೇಂದ್ರವೂ ಆಗಿದ್ದಿತು. ಇವೆಲ್ಲವೂ ಯಕ್ಷಗಾನ ಬಯಲಾಟ, ಕಲೆಗೆ, ಇಡಗುಂಜಿ ಮೇಳ ನೀಡಿದ ಕೊಡುಗೆಗಳು. ಸಮಗ್ರ ಕರ್ನಾಟಕದ ಯಕ್ಷಗಾನ ಬಯಲಾಟದ ಇತಿಹಾಸದಲ್ಲಿ ಇಡಗುಂಜಿ ಮೇಳದ ಕಲಾವಿದರ ಸಾಧನೆ–ಸಿದ್ಧಿಗಳು ನಿತ್ಯನೂತನ ಮತ್ತು ಶಾಶ್ವತ ಕಲಾಮೌಲ್ಯವುಳ್ಳವು.

ಮೇಳದ ಕೊಡುಗೆ

ಇತರ ಜನಪದ ಕಲಾಪ್ರಕಾರಗಳಂತೆ ಯಕ್ಷಗಾನವೂ ಒಂದು ಸಮಷ್ಟಿ ಕಲೆ. ಈ ಕಲಾಸಮುಚ್ಚಯದ ಒಂದೊಂದು ಅಂಗವೂ ಸ್ವತಂತ್ರವಾಗಿ ಒಂದೊಂದು ಕಲಾಪ್ರಕಾರವಾಗುವ ಸತ್ವವನ್ನು ಪಡೆದಿದ್ದರೂ ಇವೆಲ್ಲ ಯಕ್ಷಗಾನದಲ್ಲಿ ಒಟ್ಟಾಗಿ ಮೇಳೈಸಿ ಕಲಾ ಸಮಾರಾಧನೆಯನ್ನು ಮಾಡುವ ಪರಿ, ಸೊಗಸು ಜನಪದ ಕಲಾಪ್ರಕಾರಗಳಲ್ಲಿಯೇ ವಿಶಿಷ್ಟ ಹಾಗೂ ಸುಮನೋಹರವೆಂದು ಹೇಳಬಹುದು. ಒಬ್ಬ ವ್ಯಕ್ತಿ ತನ್ನ ಪ್ರತಿಭೆ ಪರಿಶ್ರಮಗಳಿಂದ ಉತ್ತಮ ಕಲಾವಿದನಾಗಬಲ್ಲ, ತನ್ನತನವನ್ನು ಮೆರೆಯಬಲ್ಲ,

ಆದರೆ ಸಮಷ್ಟಿಕಲೆಯಾದ ಇಲ್ಲಿ ಕಲಾವಿದ ತನ್ನ ಏಕಾಂಗಿ ಪ್ರದರ್ಶನದಿಂದ ಪರಿಪೂರ್ಣನಾಗಲು ಸಾಧ್ಯವಿಲ್ಲ. ಭಾಗವತರ, ವಾದಕರ, ಸಹಕಲಾವಿದರ ಸರಿಯಾದ ಸಾಹಚರ್ಯ ಸಿಕ್ಕಾಗ ಮಾತ್ರ ಕಲಾವಿದನೊಬ್ಬ ತನ್ನ ಪ್ರತಿಭೆಯ ಮಿಂಚನ್ನು ಹರಿಸಬಲ್ಲ. ತನ್ನ ಸಾಮರ್ಥ್ಯವನ್ನು ತೋರಿಸಬಲ್ಲ. ಅಂದರೆ ಯಕ್ಷಗಾನದಲ್ಲಿ ಹಿಮ್ಮೇಳ ಮತ್ತು ಮುಮ್ಮೇಳದ ಕ್ರಿಯೆಗಳು ಒಂದು ಹದದಲ್ಲಿ ಮೇಳನಗೊಂಡಾಗ ಮಾತ್ರ ಅದೊಂದು ಉತ್ತಮ ಪ್ರದರ್ಶನವಾಗಲು ಸಾಧ್ಯ. ಈ ರೀತಿ ಇಲ್ಲಿನ ಕಲೆಗಳ ಏಕೋದ್ದೇಶಿತ ಸಮ್ಮಿಳನ ಅನಿವಾರ್ಯವಾದುದರಿಂದ ಕಲಾವಿದನಿಗಿಂತ ಮೇಳವೇ ಮುಖ್ಯ. ಆದರೆ ಮೇಳ ಮತ್ತು ಕಲಾವಿದರ ಸಂಬಂಧ ಒಂದಕ್ಕೊಂದು ಪೂರಕವಾಗಿದ್ದು ಒಂದಿಲ್ಲದೆ ಇನ್ನೊಂದರ ಅಸ್ತಿತ್ವವನ್ನು ಗುರುತಿಸುವುದು ಸಾಧ್ಯವಿಲ್ಲ. ಅದರಿಂದಲೇ ಯಕ್ಷಗಾನದಲ್ಲಿ ಪ್ರಸಂಗ ಪ್ರಯೋಗವೇ ಹೊರತು ಪಾತ್ರಪ್ರಯೋಗವಲ್ಲ. ಆದರೆ ಕಲೆಯ ಬೆಳವಣಿಗೆಯಲ್ಲಿ ಸಮಷ್ಟಿಯು ಎಷ್ಟು ಮುಖ್ಯವೋ ಅಷ್ಟೆ ವ್ಯಷ್ಟಿಯೂ ಮುಖ್ಯ. ಇಂಥ ಬೆಳವಣಿಗೆಯಾಗುವಾಗ ಕಲೆಯು ಮೇಳಗಳಿಂದ ಸ್ವಾಭಾವಿಕವಾಗಿ ಅನೇಕ ಪ್ರಯೋಗಗಳಿಗೆ ಒಳಗಾಗುತ್ತದೆ. ಇಂತಹ ಪ್ರಯೋಗವು ಕಲೆಯ ಪ್ರಗತಿಗೆ, ಜೀವಂತಿಕೆಗೆ ಸಾಧಕ. ಸಾಧನೆಯಿಂದ ತಾನು ಸಿದ್ಧಿಯತ್ತ ಹೋಗುವುದರೊಂದಿಗೆ ಕಲಾವಿದ ತನ್ನ ಕೊಡುಗೆಯನ್ನು ಕಲೆಗೆ ನೀಡುವುದರ ಮೂಲಕ ಸಾಧಕನಾಗುತ್ತಾನೆ. ಇಲ್ಲಿ ಎಲ್ಲವೂ ಗಟ್ಟಿಯೆಂದೇನೂ ಅರ್ಥವಲ್ಲ, ಕೆಲವು ಜಳ್ಳೂ ಬರಬಹುದು. ಆದರೆ ಅದನ್ನು ವಸ್ತುನಿಷ್ಠವಾಗಿ ಗುರುತಿಸುವ ಕೆಲಸ ಇನ್ನೂ ನಡೆದಿಲ್ಲ. ಜನಪ್ರಿಯ ಮಾಧ್ಯಮವಾದ ಸಿನಿಮಾದ ಈ ಭಾರೀ ಪ್ರಚಾರ ಯುಗದಲ್ಲೂ ಯಕ್ಷಗಾನ ಬಯಲಾಟವು ತನ್ನ ಸತ್ವವನ್ನು ಉಳಿಸಿಕೊಂಡು, ಹಳ್ಳಿ ಮತ್ತು ಪಟ್ಟಣಗಳಲ್ಲಿ ಪ್ರೇಕ್ಷಕ ಸಮೂಹವನ್ನು ಗಳಿಸಿ ಬೆಳೆಸಿಕೊಳ್ಳುತ್ತ ಜನಪ್ರಿಯವಾಗುತ್ತಲೇ ನಡೆದಿದೆ. ಅಂದರೆ ಇಲ್ಲಿನ ಕಲಾವಿದರ ಕೊಡುಗೆ ಅಸಾಮಾನ್ಯವಾದುದಾಗಿರದಿದ್ದರೆ, ಜನರು ೧೦೦, ೫೦. ರೂಗಳ ಟಿಕೇಟು ಪಡೆದು ಆಟ, ಕೂಟಗಳಿಗೆ ಬರುವುದಾಗಲಿ ಇಂತಹ ಒಳ್ಳೆಯ ಪ್ರತಿಕ್ರಿಯೆ ಪ್ರೋತ್ಸಾಹಗಳನ್ನು ಕೊಡುವುದಾಗಲಿ ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ದೇಶ ವಿದೇಶಗಳ ಸಹೃದಯರ ಕಲಾಭಿರುಚಿಗೆ ಪ್ರೇರಕವಾಗುವ ಕಲಾಮಾಧ್ಯಮವಾಗಿಯೂ ಉಳಿಯುತ್ತಿರಲಿಲ್ಲ.

ಈ ದಿಸೆಯಲ್ಲಿ ಯಕ್ಷಗಾನದ ಉತ್ತರಕನ್ನಡತಿಟ್ಟಿನ ಪರಂಪರೆಯನ್ನು ಕಾಯ್ದುಕೊಂಡು ಅಭಿರುಚಿಯನ್ನು ಪೋಷಿಸುತ್ತ ಕಲೆಯ ಜೀವಂತಿಕೆಯನ್ನು ಉಳಿಸಿ, ಬೆಳೆಸುತ್ತ ತನ್ನ ಸ್ವಂತಿಕೆಯನ್ನೂ ಮೆರೆಸುತ್ತ ಯಕ್ಷಗಾನ ಕಲೆಗೆ ಹಲವು ವಿಶಿಷ್ಟವಾದ ಕೊಡುಗೆಗಳನ್ನು ನೀಡಿದೆ ಇಡಗುಂಜಿ ಮೇಳ.

ಕೇವಲ ಪೌರಾಣಿಕ ಪ್ರಸಂಗಗಳ ಪ್ರದರ್ಶನ : ಇಡಗುಂಜಿ ಮೇಳವು ಪ್ರಾರಂಭವಾದಂದಿನಿಂದ ಇಂದಿನವರೆಗೂ ಈ ಆಧುನಿಕತೆಯ ಸುಳಿಗಾಳಿಯಲ್ಲಿ ಕೂಡ ಕೇವಲ ಪೌರಾಣಿಕ ಪ್ರಸಂಗಗಳನ್ನು ಪ್ರದರ್ಶಿಸುತ್ತ ಯಕ್ಷಗಾನದ ಪರಂಪರಾಗತ ಸಂಪ್ರದಾಯ

ವನ್ನು ಉಳಿಸಿಕೊಂಡು ಬರುತ್ತಿರುವುದು ಈ ಮೇಳದ ಹಿರಿಯ ಕೊಡುಗೆಯಾಗಿದೆ. ಇಲ್ಲಿ ಆಡುವ ಆಡುತ್ತಿರುವ ಪ್ರಸಂಗಗಳೆಲ್ಲ ಹಳೇ ಪ್ರಸಂಗಗಳು, ಪೌರಾಣಿಕ ಪ್ರಸಂಗಗಳು. ಗದಾಪರ್ವ, ಕರ್ಣಾರ್ಜುನ, ಸತ್ಯಹರಿಶ್ಚಂದ್ರ, ಕಾರ್ತವೀರ್ಯ, ನಳದಮಯಂತಿ, ಕೃಷ್ಣಸಂಧಾನ ಮುಂತಾದ ಸುಮಾರು ಎಂಬತ್ತು ಪ್ರಸಂಗಗಳು. ಇಷ್ಟೊಂದು ಪೌರಾಣಿಕ ಪ್ರಸಂಗಗಳನ್ನು ಬೇರೆ ಯಾವ ವೃತ್ತಿಮೇಳವೂ ಈವರೆಗೆ ಆಡಿಲ್ಲ. ಈ ಎಲ್ಲ ಹಳೆಯ ಪೌರಾಣಿಕ ಪ್ರಸಂಗಗಳ ಪ್ರದರ್ಶನದಲ್ಲೇ ಇಲ್ಲಿನ ಪಾತ್ರಧಾರಿಗಳೆಲ್ಲ ತಮ್ಮ ಸ್ವೋಪಜ್ಞತೆಯನ್ನು ಮೆರೆಸುತ್ತ ಆಯಾ ಪಾತ್ರಗಳ ರಸಸ್ಥಾನ ಮೀಂಟುತ್ತ ಸಾಧ್ಯತೆ ಗಳನ್ನು ಹಿಗ್ಗಿಸುತ್ತ ರಸಿಕರ ಮನಸ್ಸನ್ನು ಸೂರೆಗೊಳ್ಳುವುದರೊಂದಿಗೆ, ಪ್ರೇಕ್ಷಕರ ಅಭಿರುಚಿಯನ್ನು ತಿದ್ದಿರುವುದು ಈ ಮೇಳದ ವೈಶಿಷ್ಟ್ಯವಾಗಿದೆ. ಇಡಗುಂಜಿ ಮೇಳವು ಒಂದೆರಡು ಹೊಸ ಪ್ರಸಂಗಗಳನ್ನು ಆಡುತ್ತಿದೆ. ಆದರೆ ಆ ಪ್ರಸಂಗಗಳು ಯಕ್ಷಗಾನ ಕಲಾ ಸಂಪ್ರದಾಯಕ್ಕೆ ಒಗ್ಗುವಂತಿದ್ದು ಅಂದರೆ ಪೌರಾಣಿಕ ಆವರಣವನ್ನು, ವಾತಾವರಣವನ್ನು ಸೃಷ್ಟಿಸುವಂತಿದ್ದು ಕಲಾಪ್ರಕಾರಕ್ಕೆ ಪೂರಕವಾದುದಾಗಿದೆ. ಉದಾ : ಭಾಸವತಿ, ಸುಹಾಸಿನಿಪರಿಣಯ. ಇವುಗಳನ್ನು ಪ್ರಪ್ರಥಮವಾಗಿ ರಂಗಕ್ಕೆ ತಂದು ಯಶಸ್ವಿಯಾಗಿದೆ. ಯಕ್ಷಗಾನದ ಆವರಣವನ್ನು ಬಳಸಿ ರೂಢಿಸಿದ ಪ್ರಸಂಗ. ಭಾಸವತಿ ಮತ್ತು ಕಾಂತಿಮತಿಪರಿಣಯವಾದರೆ; ಸಾಂಪ್ರದಾಯಿಕ, ಪೌರಾಣಿಕ ಆವರಣವನ್ನು ಕೊಟ್ಟು, ಯಶಸ್ವಿಗೊಳಿಸಿದ್ದು 'ಸತಿಸುಶೀಲೆ' ಪ್ರಸಂಗ, ಧನಾರ್ಜನೆಯ ಏಕೋದ್ದೇಶಿ ಯಾಗಿ, ಅಗ್ಗದ ಸಿಳ್ಳು, ಚಪ್ಪಾಳೆಗಳಿಗಾಗಿ ಪರಂಪರೆಗೆ ಒಗ್ಗದ ಯಾವುದೇ ಪ್ರಸಂಗ ಗಳನ್ನೂ ಆಡದೆ ಸಾಮಾಜಿಕರಲ್ಲಿ ಉತ್ತಮವಾದ, ಆರೋಗ್ಯಕರವಾದ ಅಭಿರುಚಿ ಯನ್ನು ಬೆಳೆಸುವುದರೊಂದಿಗೆ ಮೇಲ್ಮಟ್ಟದ ಪ್ರೇಕ್ಷಕ ವರ್ಗವನ್ನು ಗಳಿಸಿಕೊಂಡು ತನ್ಮೂಲಕ ಸಾಮಾಜಿಕ ಸಾಂಸ್ಕೃತಿಕ ಮತ್ತು ಕಲಾಪ್ರಜ್ಞೆಯ ಮಟ್ಟವನ್ನು ಎತ್ತರಕ್ಕೆ ಏರಿಸಿಟ್ಟುಕೊಳ್ಳುವಲ್ಲಿ ಈ ಮೇಳವು ಪರಿಣಾಮಕಾರಿಯಾದ ಕೆಲಸ ಮಾಡಿದೆ.

ಕಲಾವಿದರನ್ನು ತಯಾರಿಸುವ ಕುಲುಮೆ : ಪ್ರತಿಭೆಯಿದ್ದೂ ಅವಕಾಶವಿಲ್ಲದೆ ಮುದುರಿಹೋಗುತ್ತಿರುವಂತಹ ಅನೇಕ ಕಿರಿಯ ಕಲಾವಿದರನ್ನು ಹಿರಿಯ ಕಲಾವಿದರ ನ್ನಾಗಿ ಮಾಡುವಲ್ಲಿ ನಾಯಕ ಪ್ರತಿನಾಯಕ ಪಾತ್ರಗಳನ್ನು ಕೊಡುವುದರ ಮೂಲಕ ಅವರ ಕಲಾಪ್ರತಿಭೆ ವಿಕಸಿಸಲು ಅನುವು ಮಾಡಿಕೊಟ್ಟ ಅಮೂಲ್ಯ ಕೊಡುಗೆ ಇಡಗುಂಜಿ ಮೇಳದ್ದು, ಇಂದು ಉತ್ತರಕನ್ನಡ ಜಿಲ್ಲೆಯ ಹೆಸರಾಂತ ಕಲಾವಿದರಲ್ಲಿ ಹೆಚ್ಚಿನವರು ಗುಂಡಬಾಳಾ ಅಥವಾ ಇಡಗುಂಜಿ ಮೇಳದಲ್ಲಿ ತಮ್ಮ ಕಲಾಜೀವನ ಪ್ರಾರಂಭಿಸಿದವರು. ಕೆಲವರು ಮೊದಲು ಗೆಜ್ಜೆ ಕಟ್ಟಿದ್ದು ಗುಂಡಬಾಳಾ ಮೇಳ ದಲ್ಲಾದರೂ, ಅಲ್ಲಿ ನಡೆಯುತ್ತಿದ್ದುದು ಹರಕೆ ಆಟವಾದುದರಿಂದ, ಹೆಚ್ಚಿನ ಕಲಾ ಪರಿಣತಿಯನ್ನು ಪ್ರತಿಭೆಯನ್ನು ಮೆರೆಸಿದ್ದು ಇಡಗುಂಜಿ ಮೇಳದಲ್ಲೇ. ಕಾರಣ ಈ ಮೇಳದಲ್ಲಿ ಸಂಚಾಲಕರೆ ಹಿರಿಯ ಕಲಾವಿದರೂ ಆದುದರಿಂದ ಕಲಾವಿದನ ಕುಂದು ಕೊರತೆಗಳನ್ನು ಅರ್ಥ ಮಾಡಿಕೊಂಡು, ಅದನ್ನು ಪರಿಹರಿಸಲು ಪ್ರಯತ್ನಿಸಿ ಕಿರಿಯ

ಕಲಾವಿದರಿಗೆ ಪ್ರೋತ್ಸಾಹವನ್ನಿತ್ತು ಅವರಿಗೆ ಸಾಧ್ಯವಾಗುವ ಪಾತ್ರಗಳನ್ನು ಕೊಡುವುದರೊಂದಿಗೆ, ಅವರ ಪ್ರತಿಭೆಗೆ ಅವಕಾಶ ಮಾಡಿಕೊಟ್ಟುದಲ್ಲದೆ, ಯಕ್ಷಗಾನ ಕಲೆಯ ಬಗೆಗೆ ಕಲಾವಿದರೊಂದಿಗೆ ಚರ್ಚಿಸಿ ಅವರನ್ನೂ ಕಲಾಪರಿಣತರನ್ನಾಗಿ ಮಾಡಲಾಗಿದೆ. ಈ ರೀತಿಯಲ್ಲಿ ಕಿರಿಯ ಕಲಾವಿದರ ತರಬೇತಿ ಮತ್ತು ತಯಾರಿ, ಕಲೆಯ ನಿರಂತರತೆಗೆ ಕಾರಣವಾಗಿ ಕಲಾಪರಂಪರೆಗೆ ಪೋಷಕವಾದುದು ಈ ಮೇಳದ ಮಹಾನ್ ಕೊಡುಗೆಯಾಗಿದೆ.

ಕೊಡಗಿಪಾಲು ಶಿವರಾಮ ಹೆಗಡೆ, ಶಿರಳಗಿ ಭಾಸ್ಕರ ಜೋಶಿ, ಬಳ್ಕೂರು ಕೃಷ್ಣಯಾಜಿ, ತಿಮ್ಮಣ್ಣ ಯಾಜಿ, ಮೊದಲಾದವರ ಕಲಾಜೀವನ ಪ್ರಾರಂಭವಾದುದೇ ಇಲ್ಲಿ. ಸುಬ್ರಾಯ ಭಾಗವತ, ಕಡತೋಕಾ ಕೃಷ್ಣ ಭಾಗವತ, ನೆಬ್ಬೂರು ನಾರಾಯಣ ಹೆಗಡೆ ಇದೇ ಗರಡಿಯಲ್ಲಿ ತಯಾರಾದವರು. ದಕ್ಷಿಣೋತ್ತರಕನ್ನಡ ಜಿಲ್ಲೆಯಲ್ಲೇ ಹೆಸರಾಂತ ಭಾಗವತರಾದ ಕಡತೋಕಾ ಮಂಜುನಾಥ ಭಾಗವತರ ಭಾಗವತಿಕೆಯ ಪ್ರಾರಂಭ ಇಲ್ಲಿಂದಲೇ, ಅವರಿಗೆ ಪ್ರೋತ್ಸಾಹವೂ ಶಿವರಾಮ ಹೆಗಡೆಯವರಿಂದ. ಹೆಸರಾಂತ ಮದ್ದಳೆ ಮತ್ತು ಚಂಡೆ ವಾದಕರಾದ ಇಡಗುಂಜಿ ಕೃಷ್ಣಯಾಜಿಗಳು ಇಲ್ಲಿ ಪಳಗಿದವರು. ಚಿಟ್ಟಾಣಿ ರಾಮಚಂದ್ರ ಹೆಗಡೆ, ಗೋಡೆ ನಾರಾಯಣ ಹೆಗಡೆ. ಗೋಕರ್ಣದ ಎಕ್ಟರ್ ಜೋಶಿ, ಯಲ್ಲಾಪುರ ನರಸಿಂಹ ಭಟ್ಟ, ಧಾರೇಶ್ವರ ಸುಬ್ಬ, ಜಲವಳ್ಳಿ ವೆಂಕಟೇಶ ರಾವ್, ಕುಂಜಾಲು ರಾಮಕೃಷ್ಣ, ಗಜಾನನ ಭಂಡಾರಿ, ಕಪ್ಪೆಕೆರೆ ಮಾಧವ ಹೆಗಡೆ, ಮೂರೂರು ದೇವರ ಹೆಗಡೆ, ಮೂರೂರು ಈಶ್ವರ ಹೆಗಡೆ, ಮೊದಲಾದ ಸುಪ್ರಸಿದ್ಧ ಕಲಾವಿದರೆಲ್ಲ ಇಡಗುಂಜಿ ಮೇಳದಲ್ಲಿದ್ದು ಕಲಾಪರಿಣತಿ ಪಡೆದವರು. ಮುಮ್ಮೇಳದ ಕಲಾವಿದರಂತೆ ಹಿಮ್ಮೇಳ ವಾದಕರಾದ ಕಿನ್ನೀರು ನಾರಾಯಣ ಹೆಗಡೆ, ಸತ್ಯನಾರಾಯಣ ಭಂಡಾರಿ, ಪ್ರಭಾಕರ ಭಂಡಾರಿ, ದುರ್ಗಪ್ಪ ಗುಡಿಗಾರ ಮುಂತಾದವರನ್ನು ಆಹ್ವಾನಿಸಿ ಅವರ ಕೈಚಳಕ ತೋರಿಸಲು ಅವಕಾಶ ಮಾಡಿಕೊಟ್ಟಿದೆ.

ಮೊತ್ತಮೊದಲಿಗೆ ಉತ್ತರಕನ್ನಡ ಮೇಳಕ್ಕೆ ದಕ್ಷಿಣಕನ್ನಡದ ಕಲಾವಿದರನ್ನು ಆಹ್ವಾನಿಸಿ, ಅಲ್ಲಿನದನ್ನು ಇಲ್ಲಿಯವರಿಗೆ ನೋಡುವ, ಕಲಿಯುವ ಅವಕಾಶ ಮತ್ತು ಇಲ್ಲಿನದನ್ನು ಆ ಕಲಾವಿದರಿಗೆ ಉಣಬಡಿಸುವ, ಕೊಡುಕೊಳ್ಳುವ ಅವಕಾಶ ಕಲ್ಪಿಸಿ ಕೊಟ್ಟದ್ದು ಇಡಗುಂಜಿ ಮೇಳ. ಈ ಮಂಡಳಿಯ ಸಂಸ್ಥಾಪಕರಾದ ಶಿವರಾಮ ಹೆಗಡೆಯವರು ದಕ್ಷಿಣಕನ್ನಡದ ಭಾಗವತರನ್ನು, ಹಿಮ್ಮೇಳದ ವಾದಕರನ್ನು, ಕಲಾವಿದರನ್ನು ಆಹ್ವಾನಿಸಿ, ಅವರಿಗೆ ತಮ್ಮೊಂದಿಗೆ ಜೋಡಿ ಪಾತ್ರಧಾರಿಗಳಾಗಿ ಮೆರೆಯಲು ಅವಕಾಶವಿತ್ತು ಕಲೆಗೆ ಹೊಸ ಚೈತನ್ಯ ನೀಡಿದರು. ರಾಜ್ಯಪ್ರಶಸ್ತಿ ವಿಜೇತ ಉಪ್ಪೂರು ಭಾಗವತರು, ಕೊರ್ಕ್ಕರ್ಣೆ ನರಸಿಂಹ ಕಮ್ತಿ, ಹೆರಂಜಾಲ ವೆಂಕಟ್ರಮಣ, ಶಂಕರನಾರಾಯಣ ಸಾಮಗ, ಅರಾಟೆ ಮಂಜು ನಾಯ್ಕ, ವಂಡ್ಸೆ ನಾರಾಯಣರಾವ್ ಮುಂತಾದವರೆಲ್ಲ ಈ ಮೇಳದ ನಟರಾಗಿ ಮೆರೆದವರು.

ಈ ರೀತಿಯಲ್ಲಿ ಇಡಗುಂಜಿ ಮೇಳವು ಕಲಾವಿದರನ್ನು ತಯಾರಿಸುವ 'ಕುಲುಮೆ' ಯಾಗಿ ಕೆಲಸ ಮಾಡಿದೆ. ಈ ಮೇಳದ ನಿರಂತರತೆ ಇಲ್ಲದೆ ಇರುತ್ತಿದ್ದರೆ ಉತ್ತರಕನ್ನಡ ತಿಟ್ಟಿನ ಈ ಭವ್ಯವಾದ ಕಲಾಪರಂಪರೆಯೇ ಮೂಲೆಗುಂಪಾಗುತ್ತಿತ್ತು, ಈಗ 'ಹಿಂದೆ ಹಾಗಿತ್ತು, ಹೀಗಿತ್ತು, ಇದ್ದಿರಬಹುದು' ಎಂದು ಕಲ್ಪನೆಯ ಕುದುರೆಯನ್ನು ಓಡಿಸುವ ಸಂದರ್ಭ ಬರುತ್ತಿತ್ತು.

ಸಾಮಾಜಿಕ ಬದ್ಧತೆ ಮತ್ತು ಕಲಾಪ್ರಸಾರ : ಇಡಗುಂಜಿ ಮೇಳವು ತನ್ನ ಐವತ್ತು ವರ್ಷಗಳ ಬದುಕಿನಲ್ಲಿ ಕರ್ನಾಟಕದ ಮೂಲೆಮೂಲೆಗಳಲ್ಲಿ ಸಂಚರಿಸಿ, ಪ್ರದರ್ಶನಗಳನ್ನು ನೀಡಿ, ರಸಿಕರ ಮನದಲ್ಲಿ ಯಕ್ಷಗಾನ ಜೀವಂತವಾಗಿರುವಂತೆ ಮಾಡಿ ಅನಾಸಕ್ತರಿಗೆ ಆಸಕ್ತಿ ಹುಟ್ಟಿಸಿ, ಅಪರಿಚಿತರಿಗೆ ಪರಿಚಯ ಮಾಡಿಸಿದೆ. ಈ ಕಲೆಯನ್ನು ಸರ್ವಾದರಣೀಯಗೊಳಿಸಿ ಸಂಸ್ಕೃತಿ ಮತ್ತು ಕಲಾಪ್ರಸಾರದಲ್ಲಿ ಅತ್ಯಂತ ಪ್ರಭಾವಶಾಲಿ ಸಮೂಹಮಾಧ್ಯಮವಾಗಿ ಸಾಮಾಜಿಕ ಬದ್ಧತೆ ಮತ್ತು ಕಲಾಪ್ರಸಾರದಲ್ಲಿ ಮಹತ್ವವಾದ ಪಾತ್ರವಹಿಸಿದೆ. ಜಾತ್ರೆ, ಉತ್ಸವಗಳು, ಸಭೆ ಸಮ್ಮೇಳನಗಳು, ಶಾಲಾ ಕಾಲೇಜುಗಳು, ಇಲ್ಲೆಲ್ಲ ಪ್ರದರ್ಶನವನ್ನು ನೀಡಿದ್ದಲ್ಲದೆ, ಪಡುವಲಪಾಯದ ಹೊರಗಿನ ಪ್ರದೇಶಗಳಲ್ಲೂ ಯಕ್ಷಗಾನ ಪ್ರದರ್ಶನ ನೀಡಿ, ಈ ಕಲೆಯ ಬಗ್ಗೆ ಅಲ್ಲಿನವರಿಗೆ ಆದರ, ಅಭಿಮಾನಗಳು ಮೂಡುವಂತೆ ಮಾಡಿದ ಈ ಮೇಳದ ಸಾಧನೆ ಹಿರಿದಾದುದಾಗಿದೆ. ಕನ್ನಡೇತರ ಪ್ರದೇಶಗಳಲ್ಲೂ ಯಕ್ಷಗಾನವನ್ನು ಪ್ರದರ್ಶಿಸಿ, ಆ ಮೂಲಕ ಅಲ್ಲಿಯ ಕಲಾರಸಿಕರಿಗೆ ಈ ಕಲೆಯ ಹಿರಿಮೆ-ಗರಿಮೆಯನ್ನು ಪರಿಚಯಿಸಿ, ಕಲಾಭಿರುಚಿಯನ್ನು ಬೆಳೆಸುವಲ್ಲಿ ಈ ಮೇಳ ವಹಿಸಿದ ಪಾತ್ರ ಪ್ರಶಂಸಾರ್ಹವಾದುದು. ಕರ್ನಾಟಕದ ಜಾನಪದದ ಹಿರಿಮೆಯನ್ನು ಅಖಿಲಭಾರತ ಮಟ್ಟದಲ್ಲಿ ಬೆಳಗಿದ ಕೀರ್ತಿ ಇತರ ಮೇಳಗಳೊಂದಿಗೆ ಇಡಗುಂಜಿ ಮೇಳಕ್ಕೆ ಸಲ್ಲುತ್ತದೆ. ದೇಶದ ತುಂಬ ಸ್ವಾತಂತ್ರ್ಯ ಚಳುವಳಿಯ ಕಾವು ಜೋರಾಗಿ ಹಬ್ಬುತ್ತಿರುವಾಗ ಇಡಗುಂಜಿ ಮೇಳವೂ ಔಚಿತ್ಯ ಪೂರ್ಣವಾಗಿ, ಪರಿಣಾಮಕಾರಿಯಾಗಿ ಈ ಚಳುವಳಿಯಲ್ಲಿ ತನ್ನನ್ನು ತೊಡಗಿಸಿಕೊಂಡು ತನ್ನ ಸಾಮಾಜಿಕ ಬದ್ಧತೆಯನ್ನು ಚನ್ನಾಗಿ ಪ್ರದರ್ಶಿಸಿತು. ಅದನ್ನು ಕುರಿತು ಶಂಕರ ಗುಲ್ವಾಡಿಯವರು ಹೀಗೆ ಬರೆದಿದ್ದಾರೆ. ''ಹೊನ್ನಾವರದಲ್ಲಿ ಎಸ್. ಎಸ್. ಶಾಸ್ತ್ರಿ, ರಾಘವೇಂದ್ರರಾವ್ ಬಸ್ರೂರು, ಎಂ.ಪಿ. ನಾಡಕರ್ಣಿ, ಇವರಲ್ಲದೆ ಕೆರೆಮನೆ ಹೆಗ್ಡೆ ಮನೆತನದವರು ತಮ್ಮ ಯಕ್ಷಗಾನದಿಂದ ಜನಜಾಗ್ರುತಿಗೆ ನೆರವಾದರು. ಆರಂಭದ ದಿನಗಳಲ್ಲಿ ಯಕ್ಷಗಾನ ಕಾರ್ಯಕ್ರಮ ಇದ್ದಲ್ಲೇ ಮೊದಲು ನಮ್ಮ ಭಾಷಣಗಳಾಗುತ್ತಿದ್ದವು.''

ಈ ಮೇಳದ ಸಂಚಾಲಕರು ದೇಶದ ವಿವಿಧ ಭಾಗಗಳಿಗೆ ತಮ್ಮ ಮಂಡಳಿಯನ್ನು ಒಯ್ದು ಪ್ರದರ್ಶನ ನೀಡುವುದರೊಂದಿಗೆ ಪೇಪರ್ ಪಲ್ಪಿನಿಂದ ಹಗುರವಾದ ಯಕ್ಷಗಾನದ ಬೊಂಬೆಗಳು, (ಷೋಕೇಸಿನಲ್ಲಿ ಇಡಲು ಯೋಗ್ಯವಾದದ್ದು) ಯಕ್ಷಗಾನ ವೇಷದ ಬಣ್ಣದ ಕ್ಯಾಲೆಂಡರುಗಳು, ಕಾರ್ಡುಗಳು, ಪ್ರೇಕ್ಷಕರ ಅನುಕೂಲತೆಗಾಗಿ ಆಧುನಿಕ ಸುಸಜ್ಜಿತ ಡೇರೆ, ಸಂಚಾಲಕರೇ ವಿನ್ಯಾಸ ಮಾಡಿ ಪ್ರಪ್ರಥಮವಾಗಿ ರೂಢಿಗೆ

ತಂದ ರಂಗಸ್ಥಳ, ಕಬ್ಬಿಣದ ಸುಖಾಸನ, ಈ ರೀತಿ ನಾನಾ ವಿಧದಲ್ಲಿ ಈ ಮೇಳ ವಿಶೇಷತೆಯನ್ನು ರೂಢಿಗೆ ತಂದಿದೆ.

ಕಲಾತ್ಮಕ ಬದಲಾವಣೆಗಳು : ಕಲೆ, ಸಾಹಿತ್ಯ, ಭಾಷೆ ಇವೆಲ್ಲ ನಿಂತ ನೀರಲ್ಲ ಹರಿಯುತ್ತಿರುವ ಗಂಗೆ. ಹಾಗಾಗಿ ಇಲ್ಲೆಲ್ಲ ಪ್ರಯೋಗ, ಬದಲಾವಣೆ ಅನಿವಾರ್ಯ. ಈ ಬದಲಾವಣೆಯೇ ಜೀವಂತಿಕೆಯ ಲಕ್ಷಣವೂ ಹೌದು. ಶಾಸ್ತ್ರ ಸಂಪ್ರದಾಯಗಳ ಹೆಸರಿನಲ್ಲಿ ಬದಲಾವಣೆಯನ್ನು ಒಪ್ಪಿಕೊಳ್ಳದೆ, ಇದ್ದಂತೆಯೇ ಸ್ಥಗಿತಗೊಳಿಸಿದರೆ ಅದು ಹಳತಾಗಿ ಕೊಳೆಯುವುದರಲ್ಲಿ ಸಂಶಯವಿಲ್ಲ. ಯಕ್ಷಗಾನದಲ್ಲಿ ಸಂಪ್ರದಾಯ ಎನ್ನುವುದು ತುಂಬ ವಿವಾದಕ್ಕೊಳಗಾದ ಪದ. ಜಾನಪದ ಸತ್ವ, ಸಲಕರಣೆ, ಪ್ರೇಕ್ಷಕರನ್ನು ಪಡೆದು, ಶಾಸ್ತ್ರೀಯ ದೃಷ್ಟಿಯನ್ನು ಹೊಂದಿದ ಈ ಕಲೆಯಲ್ಲಿ ಒಂದು ತಲೆಮಾರಿನ ಹಿಂದಿನ ಸಂಪ್ರದಾಯವನ್ನು ಮಾತ್ರ ಸಂಪ್ರದಾಯವೆಂದು ಆಧಾರವಾಗಿ ಬಳಸಿಕೊಳ್ಳಬಹುದು. ಮುಂದೆ ಅದನ್ನೇ ಮಕ್ಕೀಕಾಮಕ್ಕಿಯಾಗಿ ಅನುಸರಿಸುವುದು ಕಲಾಸಂಪ್ರದಾಯವಾಗಲಾರದು. ಏಕೆಂದರೆ ಈ ಕಲಾಪ್ರದರ್ಶನಕ್ಕೆ ಬೇಕಾಗುವ ಪರಿಕರಗಳು, ನೋಡಿ ಆನಂದಿಸುವ ಪ್ರೇಕ್ಷಕವರ್ಗ ಹಾಗೂ ಸಾಮಾಜಿಕ ಪರಿಸರ ಇವು ಬದಲಾಗುವುದರಿಂದ ಇಲ್ಲೂ ಬದಲಾವಣೆ ಅನಿವಾರ್ಯ. ಕಲೆ ಕಾಲಕ್ಕೆ ತಕ್ಕಂತೆ ಸಮಾಜದೊಡನೆ ಒಂದು ರೀತಿಯ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಲೇ ಬೆಳೆದು ಬರಬೇಕಾದ್ದು ಎಷ್ಟು ಅನಿವಾರ್ಯವೋ ಅಷ್ಟೇ ಸಹಜವೂ ಹೌದು.

ಮೂಲಸ್ವರೂಪವನ್ನು ತತ್ಕಾಲೀನ ಪರಿಸರಕ್ಕೆ ಹೆಚ್ಚು ಅರ್ಥವತ್ತಾಗಿಸಲು, ಸಂಪೂರ್ಣವಾಗಿ ಸಹೃದಯರಿಗೆ ಮುಟ್ಟುವಂತೆ ಮಾಡಲು ಪ್ರಯತ್ನಿಸಿದರೆ ಸಂಪ್ರದಾಯವನ್ನು ಮುರಿದಂತೇನೂ ಆಗುವುದಿಲ್ಲ, ಬದಲಿಗೆ ಸಂಪ್ರದಾಯವನ್ನು ಕಾಪಾಡಿದಂತೆಯೇ ಆಗುತ್ತದೆ. ಈ ಕೆಲಸವನ್ನು ಇಡಗುಂಜಿ ಮೇಳವು ಅರ್ಥವತ್ತಾಗಿ, ಪರಿಣಾಮಕಾರಿಯಾಗಿ ಸೊಗಸಾಗಿ ನಡೆಸಿಕೊಂಡು ಬರುತ್ತಿದೆ. ಉದಾ : ೫೦–೬೦ ವರ್ಷಗಳ ಹಿಂದೆ ದೊಂದಿಯ ಬೆಳಕಿನಲ್ಲಿ ಆಡುತ್ತಿರುವಾಗ ಬಳಸುತ್ತಿದ್ದ ಬಣ್ಣಗಾರಿಕೆಯನ್ನು ಈಗ ರೂಢಿಯಲ್ಲಿಟ್ಟುಕೊಳ್ಳದೆ, ವಿದ್ಯುದ್ದೀಪದ ಬೆಳಕಿಗೆ ಹೊಂದಿಕೆಯಾಗುವ ಮುಖವರ್ಣಿಕೆಗಳನ್ನು ರೂಢಿಗೆ ತರಲಾಗಿದೆ. ಹಿಂದೆ ಹಳದಿ ಬಣ್ಣದ ಬಳಕೆ ಇರಲಿಲ್ಲ. ಇಂದಿನ ಆಧುನಿಕ ದೀಪದ ವ್ಯವಸ್ಥೆಗೆ ಹಳದಿ ಬಣ್ಣ ಶೋಭಾಯಮಾನವಾಗಿದೆ. ಅದರಂತೆ ವೇಷ–ಭೂಷಣಗಳಲ್ಲೂ ಸಾಂಪ್ರದಾಯಿಕರು ಬೆಟ್ಟು ಮಾಡಿ ಆಕ್ಷೇಪಿಸುವ ಬದಲಾವಣೆಗಳಾಗಿವೆ. ಉದಾ : ಈ ಮೇಳದಲ್ಲಿ ವೃತ್ತಾಕಾರದ ಎದೆಹಾರದೊಂದಿಗೆ ಕತ್ರಿ ಎದೆಹಾರವೂ ಬಳಕೆಯಲ್ಲಿದೆ. ಹರಳಿನ ಭುಜಕೀರ್ತಿ, ಮುಳ್ಳಿನ ಭುಜಕೀರ್ತಿ ಎರಡೂ ಈ ಮಂಡಳಿಯಲ್ಲಿ ಬಳಕೆಯಲ್ಲಿವೆ. ಸಾಂಪ್ರದಾಯಿಕವಾದ ರಂಗತೆರೆಯನ್ನು ಬದಿಗಿಟ್ಟು ಆಧುನಿಕ ರಂಗಕ್ಕೆ ಒಪ್ಪುವ ತಿಳಿನೀಲಿ ಬಣ್ಣದ ರಂಗತೆರೆ, ಅದಕ್ಕೊಪ್ಪುವ ರಂಗದ ಇತರ ತೆರೆ ಮತ್ತು ಬಟ್ಟೆಗಳು ರೂಢಿಯಲ್ಲಿವೆ. ಅದರಂತೆ ಪ್ರಸಂಗಗಳಲ್ಲೂ ಪೌರಾಣಿಕ ಮಹನೀಯರ ಜೀವನದ ಸುತ್ತ ಹೆಣೆದ ಪ್ರಸಂಗ (ಉದಾ : ಪ್ರಚಂಡ

ವಿಶ್ವಾಮಿತ್ರ)ಗಳನ್ನು ರೂಢಿಗೆ ತಂದು ಸಂಪೂರ್ಣ ಯಶಸ್ವಿಯಾಗಿದೆ. ಹಾಗೆಯೇ ಕುಣಿತ, ಹಿಮ್ಮೇಳ ಎಲ್ಲದರಲ್ಲೂ ಯಶಸ್ಸು ಗಳಿಸಿದೆ. ಕೆಲವು ಕಡೆ ಪರಂಪರಾಗತ ಪ್ರೇಕ್ಷಕರು ಒಲ್ಲದಿದ್ದರೂ, ಪ್ರಜ್ಞಾವಂತ ಪ್ರೇಕ್ಷಕರು ತಲೆದೂಗುವ ರೀತಿಯಲ್ಲಿ ಸಂಪ್ರದಾಯ ಉಳಿಸಿ, ಬೆಳೆಸುವ ಸದಾಶಯದಿಂದ ಹಲವಾರು ಕಲಾತ್ಮಕ ಬದಲಾವಣೆ ಗಳನ್ನು ತಂದು ಇಡಗುಂಜಿ ಮೇಳವು ಉತ್ತಮ ಮಾರ್ಗದರ್ಶಿಯಾಗಿದೆ. ಇಡಗುಂಜಿ ಮೇಳದ ಚೌಕಿ ಉಳಿದ ಮೇಳದ ಚೌಕಿಗಿಂತ ವಿಶೇಷ ವ್ಯವಸ್ಥೆಯಿಂದ ಕೂಡಿದೆ. ಸಾಮಾನ್ಯವಾಗಿ ಚೌಕಿಗೆ ವಿದ್ಯುದ್ದೀಪದ ಬುರುಡೆ (Bulb) ಹಾಕುವುದೇ ರೂಢಿ. ರಂಗಸ್ಥಳ ಟ್ಯೂಬ್‌ಲೈಟಿನಿಂದ ಅಲಂಕೃತವಾಗಿ ಆ ಬೆಳಕಿನಲ್ಲಿ ವೇಷಗಳು ಮೆರೆಯ ಬೇಕಾದ್ದರಿಂದ, ಚೌಕಿ ಬಲ್ಬಿನಿಂದ ಬೆಳಗಿದರೆ ಕಲಾತ್ಮಕವಾಗಿ ವರ್ಣಿಕೆಗೆ ಅನನುಕೂಲ. ಅದರಿಂದ ಈ ಮೇಳ ಚೌಕಿಗೂ ಟ್ಯೂಬಲ್ಯೆಟಿನ ವ್ಯವಸ್ಥೆ ಮಾಡಿದೆ. ಇಡಗುಂಜಿ ಮೇಳದಲ್ಲಿ ಒಂದು ತಿರುಗಾಟ ಪೂರ್ತಿ ಬೇಕಾಗುವಷ್ಟು ಬಣ್ಣವನ್ನು ಪ್ರಾರಂಭದಲ್ಲೇ ಸಿದ್ಧ ಮಾಡುವ ವ್ಯವಸ್ಥೆಯಿದೆ. ಸಾಮಾನ್ಯವಾಗಿ ಉಳಿದ ಯಾವ ಮೇಳದಲ್ಲೂ ಈ ವ್ಯವಸ್ಥೆ ಕಾಣಬರುವುದಿಲ್ಲ. ಕಲಾವಿದರೇ ಅಂದಂದು ಕಲಸಿ ಕೊಳ್ಳುವುದು ಪದ್ಧತಿ. ಇಡಗುಂಜಿ ಮೇಳದ ಈ ವ್ಯವಸ್ಥೆ, ಅತ್ಯುತ್ತಮವಾದ ಕಲಾತ್ಮಕ ಮತ್ತು ವ್ಯಾವಸಾಯಿಕ ಕೊಡುಗೆಯಾಗಿದೆ. ರಾತ್ರಿ ಪೂರ್ತಿ ಆಟ ಕುಣಿದು, ಮರುದಿನ ಇನ್ನೊಂದು ಊರಿಗೆ ಹೋಗಿ ಅರೆ-ಬರೆ ನಿದ್ದೆಯಲ್ಲಿ ಬಣ್ಣ ಸಿದ್ಧಪಡಿಸುವುದು ಕಲಾವಿದ ನಿಗೂ ತೊಂದರೆ. ಹದ ವ್ಯತ್ಯಾಸವಾಗಬಹುದು, ಮುಖವರ್ಣಿಕೆ ಒಂದೊಂದು ತರಹ ಬರಬಹುದು. ಈ ಬಣ್ಣ ಕಲಸಿಡುವಿಕೆಯಿಂದ ಇದ್ಯಾವುದಕ್ಕೂ ಅವಕಾಶವಾಗದೆ, ವರ್ಣಿಕೆಯಲ್ಲಿ ಸಾಂಗತ್ಯ ಸಾಧ್ಯವಾಗುತ್ತದೆ. ವ್ಯಾವಸಾಯಿಕ ದೃಷ್ಟಿಯಿಂದ ನೋಡುವು ದಾದರೆ, ಅಂದಂದು ಕಲಸುವುದರಿಂದ ಕೊನೆಯಲ್ಲಿ ಅಲ್ಪ-ಸ್ವಲ್ಪ ಬಣ್ಣ ಉಳಿದರೂ ಅದರ ದುರ್ವಿನಿಯೋಗ ವಾಗುವ ಸಂಭವವೇ ಹೆಚ್ಚು. ಮುಂಚಿತವಾಗಿ ಕಲಸಿಡುವಿಕೆಯಿಂದ ಅದಕ್ಕೆ ಅವಕಾಶ ವಾಗುವುದಿಲ್ಲ. ಅಷ್ಟೇ ಅಲ್ಲ, ಕಲಸಿದ ಬಣ್ಣ ಹಳತಾದಷ್ಟು ವರ್ಣಿಕೆಯ ಕಾಂತಿ ಹೆಚ್ಚುತ್ತದೆ. ಈ ಎಲ್ಲ ಕಾರಣದಿಂದ ಇದೊಂದು ಅನುಸರಣೀಯವಾದ ವ್ಯವಸ್ಥೆ ಯಾಗಿದೆ. ಈ ಆಧುನಿಕ ಕಾಲದಲ್ಲೂ ಮಾರುಕಟ್ಟೆಯಲ್ಲಿ ಸಿಗುವ ಕಾಡಿಗೆಯನ್ನು ಬಳಸದೆ ಹೊನ್ನೆಣ್ಣೆಯ ದೀಪದಿಂದ ಕಾಡಿಗೆಯನ್ನು ಸಿದ್ಧಪಡಿಸಿ ವರ್ಣಿಕೆಗೆ ಬಳಸುವುದು ಇಡಗುಂಜಿ ಮೇಳದ ವೈಶಿಷ್ಟ್ಯವಾಗಿದೆ.

ಕಲಾವಿದನೇ ಯಜಮಾನ : ಮೇಳದ ಯಜಮಾನ ಮತ್ತು ಕಲಾವಿದ ಬೇರೆ ಬೇರೆಯಾದಾಗ ವ್ಯಾಪಾರ ಮತ್ತು ಕಲೆಯ ಪೈಪೋಟಿ ನಡೆದು, ಕಲೆ ಮೂಲೆ ಗುಂಪಾಗಿ, ಗುಂಪಿಗೆ ತಲೆಬಾಗುವ ಪ್ರಸಂಗ ಒದಗುತ್ತದೆ. ಇದು ಅಪಾಯಕಾರಿ ಧೋರಣೆಯಷ್ಟೇ ಅಲ್ಲ, ಕಲೆಗೆ ಮಾರಕವೂ ಹೌದು. ಆದರೆ ಇಡಗುಂಜಿ ಮೇಳದಲ್ಲಿ ಉಳಿದ ಕೆಲವು ಮೇಳಗಳಂತೆ ಯಜಮಾನ ಮತ್ತು ಕಲಾವಿದ ಬೇರೆ ಇರದೆ, ಮೇಳದ ಯಜಮಾನನೇ ಪ್ರಧಾನ ಕಲಾವಿದನೂ ಆದುದರಿಂದ ಕಲೆಗೆ ಮತ್ತು ಕಲಾ

ವ್ಯವಸಾಯಕ್ಕೆ ಇದೊಂದು ಅತ್ಯುತ್ತಮ ಮಾರ್ಗದರ್ಶಿಯಾಗಿದೆ. ಈ ಮೇಳದಲ್ಲಿ ವ್ಯವಸ್ಥಾಪಕ ಇದ್ದರೂ ಅವನ ಕೆಲಸ ಲೆಕ್ಕಪತ್ರಗಳಿಗೆ ಮತ್ತು ಡೇರೆ ಹಾಕಲಿಕ್ಕೆ ಮಾತ್ರ ಸೀಮಿತ. ಉಳಿದಂತೆ ಆಡಬೇಕಾದ ಪ್ರಸಂಗಗಳ ನಿರ್ಣಯ, ಮೇಳಕ್ಕೆ ಕಲಾವಿದರ ಆಯ್ಕೆ, ಪಾತ್ರಗಳ ಹಂಚಿಕೆ, ಲಾಭ-ನಷ್ಟ, ಎಲ್ಲಕ್ಕೂ ಮೇಳದ ಯಜಮಾನನೇ ಜವಾಬ್ದಾರ. ಹಾಗಾಗಿ ಇಲ್ಲಿ ವ್ಯಾಪಾರೀ ದೃಷ್ಟಿಗಿಂತ ಕಲಾದೃಷ್ಟಿಗೇ ಹೆಚ್ಚು ಒತ್ತು ಬೀಳುವುದರಿಂದ ಕಲಾಪ್ರಸಾರಕ್ಕೆ ಕಲೆಯ ಸುಷ್ಠು ಬೆಳವಣಿಗೆಗೆ ಹೆಚ್ಚಿನ ಅವಕಾಶ ದೊರಕುವಂತಾಯಿತು. ಕಲಾವಿದನ ಕೈಗೆ ರಂಗಸ್ಥಳದ ನಿಯಂತ್ರಣ ಸಿಕ್ಕಾಗ ಹೇಗಿರುತ್ತದೆಂಬುದಕ್ಕೆ ಉತ್ತಮ ಉದಾಹರಣೆ ಇಡಗುಂಜಿ ಮೇಳ. ನಾನು ಭೇಟಿಯಾದ ಬಹುತೇಕ ಕಲಾವಿದರೆಲ್ಲ 'ಇಡಗುಂಜಿ ಮೇಳದಲ್ಲಿದ್ದಾಗಿನ ಕಲಾಜೀವನ ತಮಗೆ ತುಂಬ ತೃಪ್ತಿ ತಂದಿದೆ' ಎನ್ನುವವರೆ. ಸಾಮಾನ್ಯವಾಗಿ ಕಲಾವಿದರು ನಾಲ್ಕಾರು ಮೇಳಗಳಲ್ಲಿ ವೇಷ ಮಾಡಿ ಅಲ್ಲಿನ ಜೀವನದೊಂದಿಗೆ ಹೋಲಿಸಿ ನೋಡಬಲ್ಲವರಾದುದರಿಂದ ಅವರ ಈ ಅಭಿಪ್ರಾಯ ತುಂಬ ಮಹತ್ವದ್ದಾಗಿದೆ. ಕಲಾವಿದನ ಕಲಾ ಜೀವನ ದಲ್ಲಿ ತೃಪ್ತಿ ನೀಡಿ ಅವನಿಗೆ ಅದರಲ್ಲಿ ಮೇಲೇರಲು ಸಾಧನವಾಗಿ ನಿಂತಿದ್ದು ಈ ಮೇಳದ ಮಹತ್ವದ ಸಾಧನೆ.

ಕಲಾರಾಧನೆ : ಕಲಾವಿದರ ಶೀಲಸಂವರ್ಧನೆ ಈ ಮೇಳದ ಇನ್ನೊಂದು ಶ್ರೇಷ್ಠ ಅನುಸರಣೀಯ ಕೊಡುಗೆ. ೪-೫ ದಶಕಗಳ ಮೊದಲು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಕಲಾವಿದರಿಗೆ ಸಾಮಾಜಿಕ ಸ್ಥಾನಮಾನಗಳಿಲ್ಲದೆ ಅವರನ್ನು ಕೀಳಾಗಿ ಕಾಣುತ್ತಿದ್ದ ಕಾಲವಿತ್ತು. ದಕ್ಷಿಣಕನ್ನಡದಲ್ಲಿ ಯಕ್ಷಗಾನ ಕಲಾವಿದರನ್ನು 'ಪಾತ್ರದವು' 'ಆಟದವು' ಎಂತಲೂ ಉತ್ತರಕನ್ನಡದಲ್ಲಿ 'ಮೇಳದವು' ಎಂತಲೂ ನಿಕೃಷ್ಟವಾಗಿ ಕಾಣುತ್ತಿದ್ದರು. ಅದಕ್ಕೆ ಭಾಗಶಃ ಕಲಾವಿದರೂ ಕಾರಣರಾಗಿರಬಹುದು. ಸಾಧಾರಣವಾಗಿ ಇಂಥ ಕಲಾವಿದರು ಅಶಿಸ್ತಿನವರು ಮತ್ತು ವ್ಯಸನಿಗಳೂ ಆಗಿರುತ್ತಿದ್ದರೆಂದು ಕಾಣುತ್ತದೆ. ಆದರೆ ಇಡಗುಂಜಿ ಮೇಳದಲ್ಲಿ ಮೇಳದ ಯಜಮಾನರೇ ಹಿರಿಯ ಕಲಾವಿದರಾಗಿದ್ದು, ಅವರು ಮತ್ತು ಕೆರೆಮನೆ ಬಂಧುಗಳು ಯಾವುದೇ ಚಟಕ್ಕೆ ಬಲಿಯಾಗದೆ, ಶುದ್ಧ ಚಾರಿತ್ರ್ಯ ಉಳ್ಳವರಾಗಿದ್ದುದರಿಂದ ಇತರ ಕಲಾವಿದರೂ ಅವರನ್ನು ಅನುಸರಿಸುವುದು ಅನಿವಾರ್ಯವಾಯಿತು. ಮೇಳದ ಯಜಮಾನರಿಗೆ ಮತ್ತು ಕೆರೆಮನೆ ಬಂಧುಗಳಿಗೆ ಸಮಾಜದ ಸುಸಂಸ್ಕೃತ ವರ್ಗದವರ ಸ್ನೇಹ, ಅಪಾರವಾದ ಅಭಿಮಾನಿ ಬಳಗ, ಅವರೆಲ್ಲ ಚೌಕಿಗೆ ಬಂದು ಮಾತನಾಡುವುದು, ಹಗಲಿನಲ್ಲಿ ಅವರೊಡನಾಟ, ಸಭೆ ಸಮಾರಂಭಗಳಲ್ಲಿನ ಪ್ರದರ್ಶನ ಈ ಎಲ್ಲವುಗಳಿಂದಾಗಿ ಕಲಾವಿದರಲ್ಲೂ ಕಲೆಯ ಬಗ್ಗೆ ಮತ್ತು ಶೀಲಸಂವರ್ಧನೆಯ ಬಗ್ಗೆ ಜಾಗೃತಿ ಮೂಡುವಲ್ಲಿ ಸಹಕಾರಿಯಾಯಿತು. ಇದರಿಂದಾಗಿ ಸಮಾಜದಲ್ಲಿ ಕಲಾವಿದರ ಬಗ್ಗೆ ಆದರ ಅಭಿಮಾನಗಳು ಮೂಡಿ ಅವರ ಸಾಮಾಜಿಕ ಅಂತಸ್ತು ಭದ್ರವಾಗಲು ಸಹಾಯವಾಯಿತು. ಇಂದಿಗೂ ಈ ಮೇಳವು ಚೌಕಿಯಲ್ಲಿ ಬೀಡಿ, ಸಿಗರೇಟು ಸೇದುವುದನ್ನು, ಚಪ್ಪಲಿ ಧರಿಸಿ ಪ್ರವೇಶಿಸುವುದನ್ನು

ನಿಷೇಧಿಸಿರುವುದರೊಂದಿಗೆ ಬಣ್ಣದ ಪೆಟ್ಟಿಗೆಯನ್ನು ಕೆಳಗೆ ಇಡುವುದು ಕೂಡ ಕಲೆಗೆ ಅವಮಾನ ಎಂದು ಭಾವಿಸಿ ಕಲಾಮಂದಿರವನ್ನು ದೇವಸ್ಥಾನದಂತೆ ಕಾಣುತ್ತಲಿದೆ. ಹಾಗಾಗಿ ಇಲ್ಲಿಯ ಕಲಾವಿದರಿಗೆ ಕಲಾಸೇವೆ ಎನ್ನುವುದು 'ಹೊಟ್ಟೆಪಾಡಿಗಾಗಿ' ಆಗಲಿ 'ಕಲೆಗಾಗಿ ಕಲೆ' ಆಗಲಿ, ಆಗದೆ ನಿಜವಾದ ಅರ್ಥದಲ್ಲಿ 'ಕಲಾರಾಧನೆಯೆ' ಆಗಿದೆ.

ಸುಧೋರಣೆಯ ಸುಧಾರಣೆಗಳು : ಇಡಗುಂಜಿ ಮೇಳವು ಇತರ ಮೇಳಗಳಂತೆ ಯದ್ವಾತದ್ವಾ ಸುಧಾರಣೆಗೆ ಅವಕಾಶವೀಯದೆ ಕೆಲವು ಸುಧೋರಣೆಯ ಸುಧಾರಣೆಯನ್ನು ಮಾತ್ರ ಬಳಕೆಗೆ ತಂದಿದೆ. ಈ ಮನೋವೃತ್ತಿಯು ತತ್ಕಾಲೀನ ಜನಪ್ರಿಯತೆ ಗಳಿಸುವುದಕ್ಕಿಂತ ಹೆಚ್ಚಾಗಿ, ನಿಧಾನವಾಗಿ ಕಲೆಯ ಪರಿಣತಿಯನ್ನು ಸಾಧಿಸುವುದಾಗಿದೆ. ಈ ಬಗೆಯ ಸುಧಾರಣೆ ಯಕ್ಷಗಾನ ಕ್ಷೇತ್ರದಲ್ಲಿಯೇ ಅಪೂರ್ವವಾದುದು.

ಯಕ್ಷಗಾನದಲ್ಲಿ ದುಃಖದ ಪ್ರಸಂಗಗಳಲ್ಲಿ ಕುಳಿತೇ ದುಃಖವನ್ನು ಅಭಿವ್ಯಕ್ತಿಸುವುದು ಪರಂಪರಾಗತವಾಗಿ ನಡೆದು ಬಂದ ರೀತಿ. ಆದರೆ ಯಕ್ಷಗಾನವು ಒಂದು ನೃತ್ಯ ಮಾಧ್ಯಮದ ಕಲೆಯಾದುದರಿಂದ ಅದರಲ್ಲಿ ಕುಣಿತಕ್ಕೆ ಹೆಚ್ಚು ಪ್ರಾಧಾನ್ಯವೆಂದರಿತ ಈ ಮೇಳದ ಪ್ರಧಾನ ಕಲಾವಿದರು ದುಃಖದ ಪ್ರಸಂಗಗಳಲ್ಲಿ ಆ ಭಾವವು ರಸಿಕರಲ್ಲೂ ಉದ್ಬೋಧಗೊಳ್ಳುವಂತೆ ಔಚಿತ್ಯಪೂರ್ಣವಾದ ಭಾವಾಭಿನಯವನ್ನೊಳಗೊಂಡ ಮೆಲುಗೆಜ್ಜೆಯ ನಾದದಿಂದ ಕೂಡಿದ ಮೆಲುಹೆಜ್ಜೆಯ ಕುಣಿತವನ್ನು ಅಳವಡಿಸಿ ಅದರಲ್ಲಿ ಅದ್ಭುತ ಯಶಸ್ಸು ಗಳಿಸಿದರು. 'ಶಿವ-ಶಿವಾ ಸಮರದೊಳು', 'ರುಧಿರ ತೋಯದಿ ಕೆಸರಾಯ್ತು' ಮುಂತಾದ ಪದ್ಯಗಳಲ್ಲಿನ ದುಃಖವು ಕೂಡ ಹಿತ ಮಿತವಾದ ಕುಣಿತ, ಅಭಿನಯಗಳಿಂದ ಕೂಡಿದಾಗ ಕರುಣರಸವು ನೇರವಾಗಿ ಸಹೃದಯನನ್ನು ತಟ್ಟಲು ತುಂಬ ಸುಲಭವಾಗುತ್ತದೆ. ಈ ರೀತಿಯ ಸುಧಾರಣೆಯು ಯಕ್ಷಗಾನ ಕಲಾಪರಿಧಿಯ ಒಳಗೇ ಇದ್ದು ಕಲೆಗೆ ಮಾರಕವಾಗದೆ ಪುಷ್ಟಿಯನ್ನು ಒದಗಿಸಿದೆ. ಇಂದಿಗೂ ಈ ರೀತಿಯ ಪ್ರಯತ್ನವನ್ನು ಮಂಡಳಿಯ ಪ್ರಯೋಗಗಳಲ್ಲಿ ಕಾಣಬಹುದಾಗಿದೆ.

ಹಿಮ್ಮೇಳ ಮುಮ್ಮೇಳಗಳ ಸುಸಾಂಗತ್ಯವು ಈ ಮೇಳದ ಇನ್ನೊಂದು ವಿಶೇಷತೆ. ಈ ಮೇಳದಲ್ಲಿ ವೇಷಧಾರಿಗಳು, ಮುಖ್ಯವಾಗಿರುವ ಪದ್ಯವನ್ನು ಎತ್ತುಗಡೆ ಮಾಡಿ ಕೊಟ್ಟು, ಅಂದಿನ ಅವರ ಲಯದ ಸಾಮರ್ಥ್ಯವನ್ನು ಹಿಮ್ಮೇಳಕ್ಕೆ ಸೂಚಿಸುವುದರ ಮೂಲಕ ಭಾಗವತರ ನಿರ್ವಹಣೆಯನ್ನು ಸುಲಭಗೊಳಿಸುವ ಪರಿ ತುಂಬ ಪರಿಣಾಮ ಕಾರಿಯಾದುದು. (ಹೆಚ್ಚಿನ ಜಾನಪದ ಕಲಾಪ್ರಕಾರಗಳಲ್ಲಿ ಪಾತ್ರಧಾರಿಯೇ ಹಾಡಿ ಕೊಳ್ಳುವ ಸಂಪ್ರದಾಯವನ್ನು ಇಂದಿಗೂ ನಾವು ಕಾಣಬಹುದಾಗಿದೆ.) ಹಿರಿಯ ನಟ ಮಹಾಬಲ ಹೆಗಡೆಯವರು ತಮ್ಮ ಕಂಠಶ್ರೀಯಿಂದ ರಂಗದಲ್ಲಿ ಹಾಡಿ ಅಭಿನಯಿಸುವುದು. ಶಿವರಾಮ ಹೆಗಡೆಯವರು ಪದ್ಯವನ್ನು ಎತ್ತುಗಡೆ ಮಾಡಿ ತಾಳದ ನಡೆಯನ್ನು ಸೂಚಿಸುವ ರೀತಿ, ಇವೆಲ್ಲವೂ ಪ್ರಯೋಗ ಯಶಸ್ವಿಯಾಗುವಲ್ಲಿನ ಉತ್ತಮ ಮಾದರಿಗಳು. ಅನುಸರಣೀಯ ಮಾರ್ಗವೂ ಕೂಡ. ಆದರೆ ಈ ಪದ್ಧತಿಯಲ್ಲಿ ಕೆಲವೊಮ್ಮೆ ಹಾಡುಗಾರಿಕೆಯ ಹಾಗೂ ವೈವಿಧ್ಯಮಯ ನೃತ್ಯಾಭಿನಯದ ಸಾಮರ್ಥ್ಯವಿಲ್ಲದವರಿಂದ

ಆಭಾಸವೂ ಉಂಟಾಗಬಹುದು. ಈ ಅಂಗಗಳಲ್ಲಿ ಪರಿಶ್ರಮವಿರುವವರಿಂದ ಈ ಪದ್ಧತಿ ಪ್ರದರ್ಶನದ ಯಶಸ್ಸಿಗೆ ಸಹಾಯಕಾರಿ ಹಾಗೂ ಹೆಚ್ಚಿನ ಪರಿಣಾಮಕಾರಿ.

'ವ್ಯವಸಾಯಿ ಮೇಳದವರು ಕಲೆಯನ್ನು ಪ್ರೋತ್ಸಾಹಿಸುತ್ತಿಲ್ಲ. ಅವರಿಗೆ ವ್ಯಾಪಾರಿ ದೃಷ್ಟಿ ಮಾತ್ರ ಇರುತ್ತದೆ' ಎಂಬ ಟೀಕೆಯಿಂದ ಹೊರತಾದ ಇಡಗುಂಜಿ ಮೇಳದ ಬಹುತೇಕ ಪ್ರದರ್ಶನಗಳು ಯಕ್ಷಗಾನದಲ್ಲಿ ಔಚಿತ್ಯಪ್ರಜ್ಞೆಗೆ ಉತ್ತಮ ಉದಾಹರಣೆಯಾಗಿವೆ. ಯಕ್ಷಗಾನದ ಮೂಲೋದ್ದೇಶದ ಚೌಕಟ್ಟನ್ನು ಮೀರದೆ ಹೊಸ ಸಾಧ್ಯತೆಗಳನ್ನು ಅರಸುವ ಪ್ರಯತ್ನ ಇಲ್ಲಿ ನಡೆದಿದ್ದರೂ, ಇಲ್ಲಿನ ಕಲಾವ್ಯವಹಾರ ತುಂಬ ಸಂಯಮದಿಂದ ಸಾಗಿದೆ. ಉದಾ: ಪ್ರಚಂಡವಿಶ್ವಾಮಿತ್ರದಲ್ಲಿ ಮೇನಕೆಯೊಂದಿಗಿನ (ಮೇನಕೆಯಾಗಿ ಗಜಾನನ ಹೆಗಡೆ, ವಿಶ್ವಾಮಿತ್ರ ಮಹಾಬಲ ಹೆಗಡೆ) ಶೃಂಗಾರ, ರಾಜೋಚಿತವಾದ ಉನ್ನತ ಸ್ತರದಲ್ಲಿ ನಡೆದು, ಅಂತೆಯೇ ಜನ ಸಾಮಾನ್ಯರೂ ಅರಿತು ಆನಂದಿಸಬಹುದಾದಷ್ಟು ಸರಸವಾಗಿ ಸಭ್ಯವಾಗಿ ನಡೆಯುವುದು ಸಂಯಮಕ್ಕೆ ಒಂದು ನಿದರ್ಶನ. ಕೆಲವು ಪ್ರಸಂಗಗಳು ಕೇವಲ ಕೂಟಕ್ಕೆ ಮಾತ್ರ ಯೋಗ್ಯ, ರಂಗದಲ್ಲಿ ಆ ಪ್ರಸಂಗಗಳ ನಿರ್ವಹಣೆಯಲ್ಲಿ ತೊಡಕು ಬಹಳ ಎಂದು ಬಿಟ್ಟವು, ಇಡಗುಂಜಿ ಮೇಳದವರಿಂದ ಸಂಪೂರ್ಣ ಯಶಸ್ವಿಯಾಗಿ ಒಂದೇ ಸ್ಥಳದಲ್ಲಿ ಹತ್ತಾರು ಬಾರಿ ಪ್ರದರ್ಶನಗೊಂಡ ನಿದರ್ಶನಗಳೂ ಇವೆ. ಉದಾ : 'ಕೃಷ್ಣಸಂಧಾನ' ಇಡಗುಂಜಿ ಮೇಳದವರ ಯಶಸ್ವೀ ಪ್ರಸಂಗ. ಸದಾನಂದ ಹೆಗಡೆಯವರ ಕಾಲದಿಂದಲೇ ಇದು ಚಾಲ್ತಿಗೆ ಬಂದಿರಬೇಕೆಂದು ಶಿವರಾಮ ಹೆಗಡೆಯವರ ಅಭಿಪ್ರಾಯ. ಅಂದಿನಿಂದ ಇಂದಿನವರೆಗೂ ಅತ್ಯಧಿಕ ಬೇಡಿಕೆಯಿರುವ ಪ್ರಸಂಗ ಇದು. ಯಕ್ಷಗಾನ ಪ್ರೇಕ್ಷಕನನ್ನು ಸೆರೆ ಹಿಡಿದು ಭಾವಸಮಾಧಿಗೆ ಸಾಗಿಸುವುದು ಇಲ್ಲಿ ಬಲುಕಷ್ಟ. ಕಾರಣ ಈ ಆಖ್ಯಾನದಲ್ಲಿ ಯಾವ ರಸ-ಭಾವಗಳೂ ಪ್ರಧಾನವಲ್ಲ. ಸ್ತ್ರೀವೇಷ ಮುಖ್ಯವಲ್ಲ, ರಾಕ್ಷಸವೇಷ ಇಲ್ಲ, ಕೇವಲ ಕಥೆ ನಡೆಸುವ ತಂತ್ರ, ಲವ-ಲವಿಕೆ, ವಾಚಿಕಾಭಿನಯಗಳನ್ನು ಆಕರ್ಷಕವಾಗಿ ಮಾಡಿ ಪ್ರಯೋಗವನ್ನು ಯಶಸ್ವಿಯಾಗಿಸಬೇಕು.

ಬೇರೆ ಮೇಳಗಳು ದಾಖಲೆಗಾದರೂ ಒಮ್ಮೆ ಆಡಿವೆಯೋ ಇಲ್ಲವೋ ತಿಳಿಯದು. ಆದರೆ ಇದು ಇಡಗುಂಜಿ ಮೇಳದವರ 'ಮಾಸ್ಟರ್‌ಪೀಸ್' ಆಗಿದ್ದಂತೂ ನಿಜ. ಇನ್ನೊಂದು ವಿಶೇಷವೆಂದರೆ ಈ ಪ್ರಸಂಗದಲ್ಲಿ ಈ ಘರಾಣೆಯ ಒಬ್ಬನಾದರೂ ಕಲಾವಿದ ಪಾಲ್ಗೊಂಡು ಮಿಂಚುತ್ತಿದ್ದುದು. ಪ್ರಾರಂಭದ ಕಾಲದಲ್ಲಿ : ಶಿವರಾಮ ಹೆಗಡೆ-ಕೃಷ್ಣ, ಸದಾನಂದ ಹೆಗಡೆ-ಕೌರವ, ಮೂಡ್ಕಣಿ ನಾರಾಯಣ ಹೆಗಡೆ-ಕೃಷ್ಣ, ಶಿವರಾಮ ಹೆಗಡೆ-ಕೌರವ. ಆನಂತರದ ಕಾಲದಲ್ಲಿ ಮಹಾಬಲ ಹೆಗಡೆ ಮತ್ತು ಶಂಭು ಹೆಗಡೆ.

ಅಂದರೆ ಒಟ್ಟಿನಲ್ಲಿ ಈ ಘರಾಣೆಯ ಒಬ್ಬನಾದರೂ ಕಲಾವಿದನಿಲ್ಲದೆ ಈ ಪ್ರಸಂಗವು ಯಶಸ್ವಿಯಾದದ್ದು ವಿರಳವು. ಗದಾಪರ್ವವಂತೂ ಸಂಪೂರ್ಣವಾಗಿ ಈ

ಮೇಳದ ಕೊಡುಗೆಯೆ. ಇದರೊಂದಿಗೆ ಕರ್ಣಪರ್ವ, ಭೀಷ್ಮವಿಜಯ, ಐರಾವತ ಇವೆಲ್ಲ ನೂರಾರು ಪ್ರಯೋಗಗಗಳನ್ನು ಕಂಡು, ಇನ್ನೂ ಬೇಡಿಕೆಯಲ್ಲಿರುವ ಪ್ರಸಂಗಗಳು.

ಹಳತನ್ನು ಬಿಡದೆ ಹೊಸತನ್ನು ರೂಢಿಸಿಕೊಂಡು ಈ ಕಲೆ ನವನವೋನ್ಮೇಷ ಶಾಲಿನಿಯಾಗಲು, ಇಡಗುಂಜಿಮೇಳವು, ಸತತ ಪ್ರಯತ್ನ ನಡೆಸುತ್ತ ಬಂದಿದೆ. ಸಾಂಪ್ರ ದಾಯಿಕ ಪ್ರೇಕ್ಷಕರನ್ನು ತನ್ನಲ್ಲಿ ಇಟ್ಟುಕೊಂಡು, ತನ್ನ ಪ್ರಯೋಗಶೀಲತೆಯಿಂದಾಗಿ ಮೇಲ್ಮಟ್ಟದ ಬುದ್ಧಿಜೀವಿ ಪ್ರಜ್ಞಾವಂತ ಪ್ರೇಕ್ಷಕರನ್ನೂ ತನ್ನೆಡೆಗೆ ಆಕರ್ಷಿಸುವುದ ರೊಂದಿಗೆ ಹೊಸ ಪ್ರೇಕ್ಷಕ ಸಮುದಾಯವನ್ನೇ ಸೃಷ್ಟಿಮಾಡಿ, ಕಲಾವಿದನಿಗೆ ಕಲಾತ್ಮಕ ತೃಪ್ತಿಕೊಟ್ಟು, ಪ್ರೇಕ್ಷಕನಿಗೂ ಒಮ್ಮೆ ನೋಡಿದ್ದನ್ನೇ 'ಇಂದೂ ನೋಡಬೇಕು., ಮತ್ತೂ ನೋಡಬೇಕು, ನಿನ್ನೆಗಿಂತ ಇಂದು ಇನ್ನೂ ರಸಾಸ್ವಾದಕ್ಕೆ ಅವಕಾಶವಿರಬಹುದು' ಎಂಬ ಲವಲವಿಕೆಯನ್ನು ಜೀವಂತವಾಗಿರಿಸುವುದರ ಮೂಲಕ ಯಕ್ಷಗಾನ ಕಲೆಯಲ್ಲೆ ಕ್ರಾಂತಿ ನಡೆಸಿದೆ.

ಅರ್ಧ ಚಂದ್ರಾಕೃತಿಯ ರಂಗಸ್ಥಳ : ಸಾಂಪ್ರದಾಯಿಕ ಚಚ್ಚೌಕಾಕಾರದ ರಂಗಸ್ಥಳದ ಬದಲಿಗೆ ೨೦' x ೨೦'ರ ಅರ್ಧ ಚಂದ್ರಾಕಾರದ ರಂಗಸ್ಥಳವನ್ನು ಯಕ್ಷಗಾನದಲ್ಲಿ ಬಳಕೆಗೆ ತಂದ ಮೊದಲ ಹೆಗ್ಗಳಿಕೆ ಇಡಗುಂಜಿ ಮೇಳದ್ದು. ಪಾರಂಪರಿಕ ರಂಗಭೂಮಿ ನೃತ್ಯಾಭಿನಯಕ್ಕೆ ಇಕ್ಕಟ್ಟಾಗಿದ್ದುದನ್ನು ಮನಗಂಡ ಮೇಳದ ಸಂಚಾಲಕ ಶಂಭು ಹೆಗಡೆ ಯವರು ೧೯೭೩ ರಲ್ಲಿ ಇದನ್ನು ರೂಢಿಗೆ ತಂದರು. ಯಕ್ಷಗಾನದ ಬಹುತೇಕ ನೃತ್ಯಗತಿ ಗಳು ಅರ್ಧಚಂದ್ರಾಕೃತಿಯಲ್ಲಿ ಗತಿಚಕ್ರ ಪಡೆದಿರುವುದರಿಂದ ಈ ಹೊಸ ರಂಗಸ್ಥಳವು ಕಲಾವಿದರಿಗೆ ತುಂಬ ಅನುಕೂಲವಾದುದಾಗಿದೆ. ಈ ನಮೂನೆಯ ರಂಗಸ್ಥಳವು ಹೆಚ್ಚು ವೈಶಾಲ್ಯವನ್ನು ಪಡೆಯುವುದರೊಂದಿಗೆ, ಮಧ್ಯೆಯೂ, ಕಂಬಗಳ ಹಾವಳಿ ಇರುವು ದಿಲ್ಲ. ಪ್ರೇಕ್ಷಕನಿಗೂ ಪ್ರದರ್ಶನ ವೀಕ್ಷಣೆಗೆ ತುಂಬ ಸಹಕಾರಿ. ಒಟ್ಟಿನಲ್ಲಿ ಪ್ರದರ್ಶ ನದ ಪರಿಣಾಮದ ದೃಷ್ಟಿಯಿಂದ ವ್ಯಾವಹಾರಿಕ ಮತ್ತು ಕಲಾತ್ಮಕ ದೃಷ್ಟಿಯಿಂದ ಅನುಕೂಲಕರ ಸುಧಾರಣೆ.

ಸ್ವಯಂ ಪರಿಶ್ರಮ : 'ಶ್ರೀ ಇಡಗುಂಜಿ ಮಹಾಗಣಪತಿ ಪ್ರಾಸಾದಿಕ ಯಕ್ಷಗಾನ ಮಂಡಳಿ ಕೆರೆಮನೆ' ಈ ಮಂಡಳಿಗೆ ಇಡಗುಂಜಿಯ ಮಹಾಗಣಪತಿಯ ಪ್ರಸಾದ ಮಾತ್ರ, ದೇವಾಲಯದಿಂದ ಸಿಗುತ್ತಿದೆ. ಯಾವುದೇ 'ಪ್ರಭು'ಗಳ ದೇವಾಲಯಗಳ ಆಶ್ರಯ ಪೋಷಣೆಯೂ ಇಲ್ಲದೆ ಕಲಾಸಕ್ತಿಯಿಂದಲೇ ಈ ಕಲೆಯನ್ನು ಉಳಿಸಿ ಬೆಳೆಸಿ ಕೊಂಡು ಬಂದುದು ಈ ಮೇಳದ ಹಿರಿಮೆ. ನಮ್ಮ ದೇಶದಲ್ಲಿ ಕಲೆ-ಸಾಹಿತ್ಯಗಳೆಲ್ಲ ಸಾಮಾನ್ಯವಾಗಿ ರಾಜರ, ಸರಕಾರದ, ವಿಶ್ವವಿದ್ಯಾಲಯಗಳ, ಸಂಸ್ಥಾನಗಳ, ಮಂದಿರ ಗಳ, ಗುರುಗಳ ಕೃಪಾಕಟಾಕ್ಷದಡಿಯಲ್ಲೇ ಬೆಳೆದುಬಂದುದು ಸರ್ವವಿದಿತ. ಆದರೆ ಇಡಗುಂಜಿ ಮೇಳಕ್ಕೆ ಯಕ್ಷಗಾನ ಕಲೆಯನ್ನು ಉಳಿಸಿ, ಬೆಳೆಸಿ, ಜನಪ್ರಿಯಗೊಳಿಸುವ ದಾರಿಯಲ್ಲಿ ಈ ಬಗೆಯ ಯಾವುದೇ ಆಶ್ರಯಗಳು ದೊರೆಯಲಿಲ್ಲ, ಕೆಲವು ಸಲ ಪ್ರೇಕ್ಷಕ ಸಮೂಹವೂ ಪ್ರೋತ್ಸಾಹ ನೀಡಲಿಲ್ಲ, ಆದರೂ ಕೇವಲ ಕಲೆಯ ಮೇಲಿನ

ಪ್ರೀತ್ಯಾದರಗಳಿಂದ ಮುನ್ನಡೆಯುತ್ತ ಬರುವಲ್ಲಿ ಈ ಮೇಳವು ತೋರಿದ ಸ್ಥೈರ್ಯ ಸಾಹಸಗಳು, ಇಟ್ಟ ದಿಟ್ಟ ಹೆಜ್ಜೆ ಇಂದಿನ, ಮುಂದಿನ ಕಲಾಬೆಳವಣಿಗೆಗೆ ಬುನಾದಿ ಮತ್ತು ಮಾರ್ಗದರ್ಶಿಯಾಗಿದೆ.

ಉತ್ತರಕನ್ನಡದಲ್ಲಿ ಯಕ್ಷಗಾನ ರಂಗಭೂಮಿಯನ್ನು ಜೀವಂತವಾಗಿರಿಸಿದ್ದು

ಇಂದು ಉತ್ತರಕನ್ನಡತಿಟ್ಟನ್ನು ಗುರುತಿಸುವುದು ಇಡಗುಂಜಿ ಮೇಳ ಮತ್ತು ಕರ್ಕಿ ಹಾಸ್ಯಗಾರರ ಮೇಳದ ಮೂಲಕ ಮಾತ್ರ. ಆದರೆ ಹಾಸ್ಯಗಾರ ಮೇಳಕ್ಕೆ ಕಲಾ ಪ್ರಸಾರ ದಲ್ಲಿ ಕಲಾವಿದರ ಸಂಘಟನೆಯಲ್ಲಿ ಮತ್ತು ಕಲಾಚಟುವಟಿಕೆಯಲ್ಲಿ ಇಡಗುಂಜಿ ಮೇಳ ದಷ್ಟು ಪ್ರಭಾವೀ ಪಾತ್ರ ವಹಿಸಲಾಗಲಿಲ್ಲ, ಜೊತೆಗೆ ಅದು ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುವಲ್ಲಿಯೂ ಸಫಲವಾಗಲಿಲ್ಲ. ಇಡಗುಂಜಿ ಮೇಳವು ಈ ಎಲ್ಲ ದೃಷ್ಟಿ ಯಿಂದಲೂ ಉತ್ತರಕನ್ನಡ ಶೈಲಿಯನ್ನು ಪ್ರತಿನಿಧಿಸುವ ಪ್ರಾತಿನಿಧಿಕ ಮೇಳವಾಗಿದ್ದು, ಈ ಜಿಲ್ಲೆಯ ಯಕ್ಷಗಾನ ರಂಗಭೂಮಿಯನ್ನು ಜೀವಂತವಾಗಿರಿಸಿದೆ. ಒಂದೇ ಒಂದು ವೃತ್ತಿಪರವಾದ ಯಕ್ಷಗಾನ ಮೇಳವೂ ಉತ್ತರಕನ್ನಡದಲ್ಲಿ ಇಲ್ಲದಿರುವಾಗ, ಕಲಾವಿದ ರನ್ನು ಸಂಘಟಿಸಿ, ಅಭಿನಯದ ಅಭಿವ್ಯಂಜನೆಯಲ್ಲಿ, ಭಾವಪ್ರಕಾಶದಲ್ಲಿ, ನೃತ್ಯ ವಿಲಾಸದಲ್ಲಿ, ಮುದ್ರೆಗಳ ಬಳಕೆಯಲ್ಲಿ, ಹಸ್ತ, ಮುಖ, ಕಣ್ಣು, ಹುಬ್ಬು, ತುಟಿ, ಬೆರಳು ಹೆಜ್ಜೆಗಳ ಚಲನೆಯಲ್ಲಿನ ವಿಶೇಷತೆಯಲ್ಲಿ, ಬಣ್ಣಗಾರಿಕೆಯಲ್ಲಿ, ವೇಷ ಕಟ್ಟುವಲ್ಲಿ, ಮೃದಂಗದ ನಾದದಲ್ಲಿ, ಚಂಡೆಯ ನುಡಿತದಲ್ಲಿ ಹಾಡುಗಾರಿಕೆಯೇ ಮೊದಲಾದ ವಿವಿಧ ಅಂಗಗಳಲ್ಲಿ ಈ ಶೈಲಿಯನ್ನು ಪೋಷಿಸುತ್ತ, ಕಲಾಸೇವೆಯನ್ನು ನಡೆಸುವ ಸಾಹಸಕ್ಕೆ ತಂದೆ ಶಿವರಾಮ ಹೆಗಡೆಯವರು ಕೈಯಿಕ್ಕಿದ್ದರೆ, ಅದನ್ನು ಅಷ್ಟೇ ವ್ಯವಸ್ಥಿತವಾಗಿ ನಡೆಯಿಸಿಕೊಂಡು ಬರುತ್ತಿರುವವರು ಮಗ ಶಂಭು ಹೆಗಡೆ. ಈ ತಂದೆ ಮಕ್ಕಳ ಸಂಘಟನಾ ಚಾತುರ್ಯ, ಕಲಾಶ್ರದ್ಧೆಯಿಂದಾಗಿ ಈ ಭಾಗದಲ್ಲಿ ಯಕ್ಷಗಾನದ ರಂಗಭೂಮಿ ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುವುದರ ಮೂಲಕ ಕಲಾಭಿಮಾನಿ ಗಳ ಕಲಾಸ್ವಾದನೆಗೂ ಅವಕಾಶವಿತ್ತಿದೆ. ಯಕ್ಷಗಾನ ಕ್ಷೇತ್ರದ ಬೆಳವಣಿಗೆಯ ಅಥವಾ ವಿಸ್ತೃತವಾದ ಹಂತಗಳನ್ನು ಸೂಚಿಸುವ 'ತಿಟ್ಟು'ಗಳಲ್ಲಿ ಉತ್ತರಕನ್ನಡದ ತಿಟ್ಟು ಎಂಬು ದನ್ನು ನಿರ್ಮಿಸಿದ ಕೀರ್ತಿ ಮುಖ್ಯವಾಗಿ ಇಡಗುಂಜಿ ಮೇಳಕ್ಕೇ ಸಲ್ಲುತ್ತದೆ.

ದಾಖಲೆಗಳು : ಒಬ್ಬ ಕಲಾವಿದನಾಗಲಿ ಅಥವಾ ಒಂದು ಮೇಳವೇ ಆಗಲಿ ಕಲೆಯ ಬಗ್ಗೆ ಹೆಚ್ಚಿನ ಪರಿಣತಿ ಪಡೆಯುತ್ತ, ಕಲಾಸಾಧನೆ ಗೈಯುವುದರೊಂದಿಗೆ ಪರಿಪೂರ್ಣತೆಯತ್ತ ಸಾಗುವಾಗ ಆ ದಾರಿಯಲ್ಲಿ ಅನೇಕ ಮೈಲಿಗಲ್ಲುಗಳು ನಿರ್ಮಾಣ ವಾಗುವುದು ಸಹಜ. ಅದೇ ರೀತಿ ಇಡಗುಂಜಿ ಮೇಳವು ಇದುವರೆಗಿನ ತನ್ನ ಕಲಾ ಸಾಧನೆಯ ಮಾರ್ಗದಲ್ಲಿ ಅನೇಕ ದಾಖಲೆಗಳಿಗೆ ಕಾರಣವಾಗಿದೆ. ಈ ದಾಖಲೆಗಳು ದಾಖಲೆಗಾಗಿಯೇ ನಿರ್ಮಾಣಗೊಂಡವಾಗದೆ, ಮೇಳದ ಸಿದ್ಧಿಸಾಧನೆಗಳ ಹಾದಿಯಲ್ಲಿ ತೀರ ಸಹಜವಾಗಿ ನಿರ್ಮಾಣಗೊಂಡವು. ಈ ರೀತಿಯಲ್ಲಿ ಯಕ್ಷಗಾನ ಕಲೆಗೆ ವಿಶಿಷ್ಟ ಕೊಡುಗೆಯನ್ನು ನೀಡುತ್ತಲೆ ನಿರ್ಮಿಸಿದ ದಾಖಲೆಗಳೆಂದರೆ:

೧೯೪೪ರಲ್ಲಿ, ಆಗತಾನೆ ಚಲನಚಿತ್ರವು ಹೆಚ್ಚು ಪ್ರಚಾರ ಪಡೆಯುತ್ತಿರುವ ಕಾಲದಲ್ಲಿ ಇಡಗುಂಜಿ ಮೇಳದ 'ಭೀಷ್ಮವಿಜಯ' ಬಯಲಾಟ ನೋಡಿದ ಕಲಘಟಗಿಯ ಶ್ರೀಮಂತರೊಬ್ಬರು ಅದನ್ನು ಚಲನಚಿತ್ರಕ್ಕೆಂದು ಚಿತ್ರೀಕರಿಸಿದರು. ಯಕ್ಷಗಾನವನ್ನು ಮೊದಲ ಬಾರಿಗೆ ಚಲನಚಿತ್ರಕ್ಕೆ ಅಳವಡಿಸುವ ಪ್ರಯತ್ನ ಮಾಡಿದ್ದು ಈ ಮೇಳ.

೧೯೫೦ರಲ್ಲಿ, ಧಾರವಾಡ ಆಕಾಶವಾಣಿ ಸ್ಥಾಪನೆಯಾದ ವರ್ಷವೇ ಇಡಗುಂಜಿ ಮೇಳದ 'ಶ್ರೀಕೃಷ್ಣಸಂಧಾನ' ಯಕ್ಷಗಾನ ಬಯಲಾಟದ ರೂಪಕವೊಂದು ಧಾರವಾಡ ಆಕಾಶವಾಣಿಯಲ್ಲಿ ಮೊದಲ ಬಾರಿಗೆ ಪ್ರಸಾರವಾಯಿತು. ದೃಶ್ಯ ಮಾಧ್ಯಮವಾದ ಯಕ್ಷಗಾನ ಬಯಲಾಟವನ್ನು ಶ್ರವ್ಯವಾಗಿ ಪ್ರಪ್ರಥಮವಾಗಿ ಧಾರವಾಡ ಆಕಾಶವಾಣಿಯಲ್ಲಿ ರಸಿಕರಿಗೆ ನೀಡಿದ ಕೀರ್ತಿ ಇಡಗುಂಜಿ ಮೇಳದ್ದು.

೧೯೭೮ರಲ್ಲಿ ಇಡಗುಂಜಿ ಮೇಳ ಅಭಿನಯಿಸಿದ 'ಜರಾಸಂಧವಧೆ' ಎಂಬ ಆಖ್ಯಾನವು ಪ್ರಪ್ರಥಮವಾಗಿ ಟೆಲಿವಿಷನ್ನಿನಲ್ಲಿ ಪ್ರದರ್ಶನಗೊಂಡು, ಯಕ್ಷಗಾನ ಕಲೆಯನ್ನು ಸಾರ್ವತ್ರಿಕವಾಗಿಸುವ ಕೀರ್ತಿಗೆ ಈ ಮೇಳ ಭಾಜನವಾಯಿತು. ೧೯೮೩ರಲ್ಲಿ ಬೆಹರಿನ್ ಕನ್ನಡ ಸಂಘದ ಆಮಂತ್ರಣದ ಮೇರೆಗೆ ಅಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ನೀಡಿ ವಿದೇಶದಲ್ಲಿ ಪ್ರಪ್ರಥಮವಾಗಿ ಪ್ರದರ್ಶನಕೊಟ್ಟ ವೃತ್ತಿಮೇಳವೆಂಬ ಶ್ರೇಯಸ್ಸಿಗೆ ಪಾತ್ರವಾಗಿದೆ.

ಕೇವಲ ಆಟ ಕುಣಿಯಬೇಕೆಂಬ ತುಡಿತದಿಂದ ಸಂಘಟನೆಗೊಂಡ ಇಡಗುಂಜಿ ಮೇಳವು ಕಾಲಕ್ಕನುಗುಣವಾಗಿ ಮೊದಲು ಬಯಲಾಟದ ಮೇಳವಾಗಿ ರೂಪುಗೊಂಡು, ಕ್ರಮೇಣ ವೃತ್ತಿಮೇಳವಾಗಿ ಮಾರ್ಪಟ್ಟು ೭೫ ವರ್ಷಗಳ ತನ್ನ ಸುದೀರ್ಘ ವರ್ಣಮಯ ಬದುಕಿನಲ್ಲಿ ಇಟ್ಟ ಹೆಜ್ಜೆಗಳು ಈ ನೆಲದ ಪರಂಪರೆಯಲ್ಲಿ ಅಚ್ಚಳಿಯದೆ ಮೂಡಿ ನಿಂತಿವೆ. ಪರಂಪರೆಯ ಚೌಕಟ್ಟಿನಲ್ಲಿಯೇ ಹೊಸ ಸಾಧ್ಯತೆಗಳನ್ನು ಅರಸುತ್ತ ಎಂತಹ ವ್ಯಾವಹಾರಿಕ ರಭಸದಲ್ಲೂ ತನ್ನ ಧೋರಣೆಗಳಿಗೆ ಬದ್ಧವಾಗಿ ಉಳಿದು, ಕಲೆಯ ರೂಪ ಸಂರಕ್ಷಣೆ ಮಾಡುತ್ತ, ಪಂಥಾಹ್ವಾನಗಳನ್ನು ಎದುರಿಸುತ್ತ ಸಶಕ್ತ ಕಲಾವಿದರ ನಿರ್ಮಾಣ ಮಾಡುತ್ತ ಸಹೃದಯರಲ್ಲಿ ಮೇಲ್ಮಟ್ಟದ ಕಲಾಭಿರುಚಿ–ಕಲಾ ಪ್ರಜ್ಞೆಗಳನ್ನು ಜಾಗ್ರತಗೊಳಿಸುವ ಮಹಾಕಾರ್ಯವನ್ನು ಈ ಮೇಳ ಕೈಗೊಂಡಿದೆ; ಅದರ ಈ ವೈಶಿಷ್ಟ್ಯವೇ ಶತಮಾನದ ಯಕ್ಷಗಾನದ ಚರಿತ್ರೆಯಲ್ಲಿ ಪ್ರತ್ಯೇಕ ಪರಿಗಣನೆಗೂ, ಮನ್ನಣೆಗೂ ಅರ್ಹವಾಗಿ, ಈ ಕ್ಷೇತ್ರದಲ್ಲಿ ಮೇಳದ ಸಾಧನೆ ಏನು ಎಂಬುದನ್ನು ಹಿಂದಿನ ಭಾಗಗಳು ಸ್ಪಷ್ಟಪಡಿಸುತ್ತವೆ. ಇಂತಹ ವಿಶಿಷ್ಟ ಸಶಕ್ತ ಮೇಳವು ಇಂದಿನ ವಿಲಕ್ಷಣ, ವಿಚಿತ್ರ, ವ್ಯಾವಸಾಯಿಕ ರಭಸಗಳ ವಿರುದ್ಧ ತನ್ನ ವೃತ್ತಿಸ್ವರೂಪವನ್ನು ಸ್ಥಗಿತಗೊಳಿಸಿ ತನ್ನದೇ ದಾರಿಯಲ್ಲಿ ಗಂಭೀರವಾಗಿ ಮುನ್ನಡೆಯಲು ಕಲೆಯ ಸುಪುಷ್ಟ ಬೆಳವಣಿಗೆಗೆ ಯೋಗ್ಯವಾದ ಈ ಕೆಳಗಿನ ಕೆಲವು ಸಾಂದರ್ಭಿಕ ಮತ್ತು ಸ್ಥಾಯೀ ಯೋಜನೆಗಳನ್ನು ಹಮ್ಮಿಕೊಂಡಿದೆ.

ಸಾಂದರ್ಭಿಕ ಯೋಜನೆಗಳು : ಯಕ್ಷಗಾನದ ವಿವಿಧ ಅಂಗೋಪಾಂಗಗಳ ವಿಷಯದ ಮೇಲೆ ವಿಚಾರಗೋಷ್ಠಿ, ಕಲಾವಿದರ ಭಾವಚಿತ್ರಗಳ ಪ್ರದರ್ಶನ, ಸನ್ಮಾನ, ಪ್ರಾತಿನಿಧಿಕ ಕಲಾಪ್ರಕಾರಗಳ ಪ್ರದರ್ಶನ, ತಜ್ಞರಿಂದ ಉಪನ್ಯಾಸ, ಇತ್ಯಾದಿ. ಸಂಸ್ಮರಣ ಸಂಚಿಕೆ ಮತ್ತು ಸಂಶೋಧನಾ ಗ್ರಂಥಗಳ ಪ್ರಕಾಶನ ಇವುಗಳನ್ನು ಈಗಾಗಲೇ ನಿರ್ವಹಿಸಿಕೊಂಡು ಬರುತ್ತಲಿದೆ.

ರಂಗಮಂದಿರ ನಿರ್ಮಾಣ : ಯಕ್ಷಗಾನಸಂಬಂಧೀ ಚಟುವಟಿಕೆಗಳಿಗೆ ಅನುಕೂಲ ವಾಗುವ ರೀತಿಯಲ್ಲಿ ಮಂಡಳಿಯದೇ ಆದ ಶಾಶ್ವತ ಆವರಣ ನಿರ್ಮಾಣಕ್ಕಾಗಿ ರಂಗಮಂದಿರವೊಂದನ್ನು ನಿರ್ಮಾಣ ಮಾಡುತ್ತಲಿದೆ.

ತರಬೇತಿ ಕೇಂದ್ರ : ಹಿಂದಿನಂತೆ ರಂಗಕ್ಕಾಗಿ ತರಬೇತಿಗೊಂಡ ಕಲಾವಿದರು ಇತ್ತೀಚಿನ ದಿನಗಳಲ್ಲಿ ತೀರ ಅಪರೂಪವಾಗುತ್ತಿರುವುದರಿಂದ ಅಂತಹ ಕಲಾವಿದರ ನಿರ್ಮಾಣಕ್ಕಾಗಿ ಮೇಳವು ತರಬೇತಿ ಕೇಂದ್ರವೊಂದನ್ನು ನಡೆಸುತ್ತಿದೆ. ಹೀಗೆ ತರಬೇತಿ ಪಡೆದ ಕಲಾವಿದರಿಂದ ಪ್ರಾಯೋಗಿಕ ಪ್ರದರ್ಶನಗಳನ್ನು ನೀಡುವ ಉದ್ದೇಶ ಮಂಡಳಿಯದಾಗಿದೆ.

ನಶಿಸುತ್ತಿರುವ ವಿವಿಧ ಯಕ್ಷಗಾನ ಸಂಬಂಧೀ ಸಾಮಗ್ರಿಗಳ ಸಂರಕ್ಷಣೆಗೆ ಹಾಗೂ ಸಂಶೋಧನೆಗೆ ಅವಕಾಶವಾಗುವಂತಹ ಸಂಶೋಧನಾ ಕೇಂದ್ರವೊಂದರ ಸ್ಥಾಪನೆ, ಯಕ್ಷಗಾನ ಕುರಿತ ವೈಚಾರಿಕ ಬರಹಗಳಿಗೆ ಪ್ರಾಶಸ್ತ್ಯವಿರುವ, ಸುತ್ತಮುತ್ತಣ ರಂಗ ಸಂಸ್ಕೃತಿ ಅಧ್ಯಯನಕ್ಕೆ ಅನುಕೂಲವಾಗುವಂತಹ ನಿಯತಕಾಲಿಕವೊಂದರ ಪ್ರಕಟಣೆ, ಯಕ್ಷಗಾನ ಮತ್ತು ಇತರ ರಂಗ ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನಾತ್ಮಕ ಹಾಗೂ ಸೃಜನಶೀಲ ಕೃತಿಗಳ ಪ್ರಕಟಣೆ ಮತ್ತು ಅಧ್ಯಯನ ಯೋಗ್ಯವಾದ ಅಮೂಲ್ಯ ಗ್ರಂಥ ಗಳನ್ನುಳ್ಳ ಗ್ರಂಥಾಲಯ ವ್ಯವಸ್ಥೆ– ಇವು ಮೇಳದ ಉದ್ದೇಶಿತ ಯೋಜನೆಗಳು.

ಸಾಂಸ್ಕೃತಿಕ ಪುನರುತ್ಥಾನ ಮತ್ತು ಸಾಮಾಜಿಕ ಪರಿವರ್ತನೆಯ ಕಾರ್ಯಕ್ಕೆ ಸಮರ್ಥ ಸಮೂಹ ಮಾಧ್ಯಮವಾಗಿ ಯಕ್ಷಗಾನ ಕಲೆಯನ್ನು ಬಳಸಿಕೊಳ್ಳುವ ಸಾಧ್ಯತೆ ಯನ್ನು ಇಡಗುಂಜಿ ಮೇಳವು ತನ್ನ ಚಟುವಟಿಕೆಗಳ ಮೂಲಕ ತೋರಿಸಿಕೊಟ್ಟಿದೆ. ಇಂತಹ ಚಟುವಟಿಕೆಗಳನ್ನು ಸೃಜನಶೀಲವಾಗಿ ವಿಸ್ತರಿಸಿಕೊಂಡು ವರ್ತಮಾನದ ಆಶಯಗಳಿಗನುಗುಣವಾಗಿ ಸ್ಪಂದಿಸಲೆನ್ನುವುದು ಸಹೃದಯರ ಆಶಯ.

■■

21326
ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕ ಪೂರ್ಣ ವಿನಿಯೋಗ.

ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆ ಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, ಅದನ್ನು ತನ್ನ ಪ್ರಸಾರಾಂಗದ ಮೂಲಕ ಪ್ರಧಾನವಾಗಿ ಪೂರೈಸುತ್ತಲಿದೆ. ಈ ನಿಟ್ಟಿನಲ್ಲಿ ಪ್ರಕಟವಾದ ಪುಸ್ತಕ 'ಇಡಗುಂಜಿ ಮೇಳ'.

ಡಾ. ರಾಮಕೃಷ್ಣ ಜೋಶಿ ಅವರು 'ಇಡಗುಂಜಿ ಮೇಳ' ಕುರಿತು ಮಂಟಪ ಮಾಲೆ ಸರಣಿಗಾಗಿ ಈ ಪುಸ್ತಿಕೆಯನ್ನು ರಚಿಸಿಕೊಟ್ಟಿದ್ದಾರೆ. ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಕೃತಜ್ಞತೆಗಳು.

ಎಂ. ಎಂ. ಕಲಬುರ್ಗಿ
ಕುಲಪತಿಗಳು

ಮಂಟಪ ಮಾಲೆ-೫೮